
ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದಗಳೊಂದಿಗೆ

# ಮರಣದ ನಂತರ ನಡೆಯುವುದನ್ನು ತಿಳಿದುಕೊಂಡರೆ ಆಗುವ ಲಾಭಗಳು

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್


ಅನುವಾದ : ಕೆ. ಶೋಭಾಲತ



ಬ್ರಹ್ಮರ್ಷಿ ಪಿತಾಮಹ ಪತ್ರೀಜಿ ಆಶೀರ್ವಾದದೊಂದಿಗೆ

# ಮರಣದ ನಂತರ ನಡೆಯುವುದನ್ನು ತಿಳಿದುಕೊಂಡರೆ ಆಗುವ ಲಾಭಗಳು

ತಟವರ್ತಿ ವೀರರಾಘವರಾವು



ಬ್ರಹ್ಮರ್ಷಿ ಪಿತಾಮಹ ಪತ್ರೀಜಿ

ಕನ್ನಡ ಅನುವಾದ : ಕೆ. ಶೋಭಾಲತ

ಶ್ರೀರಾಮ ಪಬ್ಲಿಕೇಶನ್ಸ್
ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,
ನಾರಾಯಣಪ್ಪಗಾರ್ಡನ್, ವೈಟ್‌ಫೀಲ್ಡ್, ಬೆಂಗಳೂರು – 560 066

ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**Maranada Nanthara Nadeyuvudannu Tilidukondare Aguva Labhagalu**

Edited & Published by **Srirama Publications,** Sri Ramadhama Pyaramid Dyanakendra, Narayanappa Garden, Whitefiled, Bangalore - 560 066.
**M.: 9449695503, 8050082689**

| | | |
|---|---|---|
| ಮೊದಲನೆಯ ಮುದ್ರಣ | : | 2025 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | ಶ್ರೀರಾಮ ಪಬ್ಲಿಕೇಷನ್ಸ್<br>ಶ್ರೀ ರಾಮಧಾಮ ಪಿರಮಿಡ್ ಧ್ಯಾನಕೇಂದ್ರ,<br>ನಾರಾಯಣಪ್ಪಗಾರ್ಡನ್, ವೈಟ್ ಫೀಲ್ಡ್,<br>ಬೆಂಗಳೂರು – 560 066<br>ಮೊ. : 9449695503 |
| ಬಳಸಿದ ಕಾಗದ | : | 70 ಜಿ.ಎಸ್.ಎಂ. ಮ್ಯಾಪಲಿಥೊ ಡೆಮಿ 1/8 |
| ಪ್ರತಿಗಳು | : | 1000 |
| ಬೆಲೆ | : | 80/– |
| ಪುಟಗಳು | : | iv+84=88 |
| ಮುಖಪುಟ | : | ಚಂದ್ರಕಾಂತ ಪಟ್ಟಣ |
| ಅಕ್ಷರ ಜೋಡಣೆ | : | **ನಿರಂತರ ಸಾಯಿ ಕಮ್ಯೂನಿಕೇಷನ್ ಪ್ರೈ .ಲಿ**<br>ಮೊ: 96328 12541 |

ಮುದ್ರಣ :

**ಪೂರ್ಣಾ ಗ್ರಾಫಿಕ್ಸ್,**

ಬೆಂಗಳೂರು 9844167475

# ಸ್ವ-ಪರಿಚಯ

ನನ್ನ ಹೆಸರು ಎಚ್.ಎನ್.ಶ್ರೀನಿವಾಸ. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ, ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ, ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999ರಲ್ಲಿ ಎಸ್.ಎಸ್.ವೈ. ಅಂದರೆ, ಸಿದ್ಧಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎನ್.ವಿಜಯಲಕ್ಷ್ಮಿ ಸೇರಿ 2008ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ 'ಶ್ರೀ ರಾಮಧಾಮ ಧ್ಯಾನ ಮಂದಿರ' ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು. ಇದನ್ನು ಸಿದ್ಧಸಮಾಧಿ ಯೋಗ ಸಂಸ್ಥಾಪಕರಾದ ಡಾ.ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಎಸ್.ಎಸ್.ವೈ. ಶಿಕ್ಷಕರಿಂದ ಸಾಮೂಹಿಕ ಧ್ಯಾನ ತರಬೇತಿಗಳನ್ನು ಆಯೋಜಿಸುತ್ತಿದ್ದೆವು. 2009ರಲ್ಲಿ ಬ್ರಹ್ಮರ್ಷಿ ಪಿತಾಮಹ ಡಾ.ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ 'ಆನಾಪಾನಸತಿ ಧ್ಯಾನ ವಿಧಾನ'ವನ್ನು ಪರಿಚಯ ಮಾಡಿಸಿದರು. ಪತ್ರೀಜಿಯವರನ್ನು ಭೇಟಿಯಾದ ನಂತರ, ದಿನನಿತ್ಯದ ನನ್ನ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವಸಿದ್ಧಾಂತದಲ್ಲಿ ಗುರು–ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. 'ಯಾರೂ ಶಾಶ್ವತವಾಗಿ ಗುರುಗಳಲ್ಲ, ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ, ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ, ಎಂದಿಗೂ ಶಿಷ್ಯರಾಗಿಯೇ ಇರಬೇಡಿ' ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದವಕಾಶವನ್ನು ಒದಗಿಸಿದರು.

ಇದರಲ್ಲಿ ನನಗೆ 'ನಿತ್ಯಅನ್ನದಾನ ಸೇವೆ'ಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ, ಆಸಕ್ತಿಯಿಂದ ಧ್ಯಾನಾಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ 'ಸಸ್ಯಾಹಾರ', 'ಸ್ವಾಧ್ಯಾಯ', 'ಸಜ್ಜನ–ಸಾಂಗತ್ಯ, ಅಂದರೆ, ಸತ್ಸಂಗ' ಹಾಗೂ 'ಪಿರಮಿಡ್ ಶಕ್ತಿ ಬಳಕೆ' ಅವಶ್ಯಕ ಎಂದು ಆಧ್ಯಾತ್ಮಶಾಸ್ತ್ರ ತಿಳಿಸುತ್ತದೆ. ನಿರಂತರ, ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ–ವಿಕಾಸ, ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು. ಹೊಸ ಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ 'ಶ್ರೀರಾಮ ಪಬ್ಲಿಕೇಶನ್ಸ್' ಹೆಸರಿನ ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರರಾಘವರಾವ್ ರವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು. ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರುಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡದ ಆಧ್ಯಾತ್ಮ ಸಾಧಕರಿಗೂ ದೊರಕಲೆಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು,

**ಎಚ್. ಎನ್. ಶ್ರೀನಿವಾಸ** ಮತ್ತು

**ಎಸ್. ಎನ್. ವಿಜಯಲಕ್ಷ್ಮಿ ಸಂಸ್ಥಾಪಕರು,** ಶ್ರೀರಾಮಧಾಮ ಧ್ಯಾನಕೇಂದ್ರ

# ಕಬೀರರ ಸಂದೇಶ

ಕಬೀರರು ಏನು ಹೇಳಿದ್ದಾರೆಂದರೆ 'ಜೀವಿಸುವುದಕ್ಕಿಂತ ಮರಣಿಸುವುದು ಮೇಲು, ಯಾರಾದರೆ ಮರಣಿಸುವ ಮೊದಲೇ ಮರಣಿಸುತ್ತಾರೋ ಅವರೇ ಅಮರರು' ಎಂದು ಹೇಳಿದ್ದಾರೆ.

ಯಾರು ಮರಣಿಸುವ ಮೊದಲೇ ಮರಣಿಸುತ್ತಾರೆಂದರೆ? ಆತ್ಮಜ್ಞಾನಿಯೇ ಮರಣಿಸುವ ಮೊದಲೇ ಮರಣಿಸುತ್ತಾನೆ. ಅಂದರೆ ಮರಣಿಸಿದ ನಂತರ ಏನು ನಡೆಯುತ್ತದೋ ತಿಳಿದುಕೊಳ್ಳುತ್ತಾನೆ, ಮರಣಿಸಿದ ನಂತರ ಏನು ನಡೆಯುತ್ತದೋ ತಿಳಿದುಕೊಳ್ಳದಿದ್ದರೆ ಜ್ಞಾನವಿಲ್ಲದಂತೆಯೇ ಲೆಕ್ಕ. ಜ್ಞಾನ ಇರುವವನು ಕಾಣಿಸದವರುಗಳ ಕುರಿತು ತಿಳಿದುಕೊಳ್ಳುವುದಕ್ಕೆ ಹೆಚ್ಚು ಪ್ರಯತ್ನ ಮಾಡುತ್ತಾನೆ. ಜೀವಿಸಿರುವಾಗ ಕಾಣಿಸುವಂತವೇ ತಿಳಿಯುತ್ತವೆ, ಆದರೆ ಕಾಣಿಸದಂದತವು ತಿಳಿಯವು, ಕಾಣಿಸದವು ಅಂದರೆ?

- ಮರಣಿಸಿದ ನಂತರ ಈ ಶರೀರ ಇರುವುದಿಲ್ಲ, ಆತ್ಮ ಇರುತ್ತದೆ. ಆದರೆ ಆತ್ಮ ಕಾಣಿಸದು.
- ಆ ಲೋಕಗಳು ಕಾಣಿಸವು.
- ಅಲ್ಲಿರುವ ಮಾಸ್ಟರುಗಳು ಕಾಣಿಸುವುದಿಲ್ಲ
- ಅಲ್ಲಿ ನಡೆಯುವ ಕೌನ್ಸಲಿಂಗ್‌ಗಳು ತಿಳಿಯವು
- ಜೀವಿಸಿರುವಾಗ ಮಾನವರು ಮಾಡಿದ ಕರ್ಮಗಳೆಲ್ಲವು ಆಕಾಶಿಕ್ ರಿಕಾರ್ಡ್‌ನಲ್ಲಿ ರಿಕಾರ್ಡ್ ಆಗಿ ಇರುತ್ತವೆ, ಅವು ಕಾಣಿಸವು.
- ಮತ್ತೆ ಹೊಸ ಜನ್ಮ ಹೇಗೆ ತೆಗೆದುಕೊಳ್ಳುತ್ತಾರೆಂಬುದು ತಿಳಿಯದು.
- ಜನ್ಮ ತೆಗೆದುಕೊಳ್ಳುವಾಗ ಎಂತಹ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೋ! ಅವು ತಿಳಿಯವು.
- ಅಷ್ಟೇ ಅಲ್ಲ ಎಂತಹ ಕರ್ಮಗಳನ್ನು ಮಾಡಿದವನು ಎಂತಹ ಲೋಕಕ್ಕೆ ಸೇರಿಕೊಳ್ಳುತ್ತಾನೋ ತಿಳಿಯದು.

ಅಷ್ಟೇ ಅಲ್ಲ ಸೃಷ್ಠಿ ಸಿದ್ಧಾಂತಗಳಾದ 1) ಆತ್ಮ ಸಿದ್ಧಾಂತ 2) ಪುನರ್ಜನ್ಮ ಸಿದ್ಧಾಂತ 3) ಕರ್ಮ ಸಿದ್ಧಾಂತ 4) ಪುರೋಗಮನ ಸಿದ್ಧಾಂತ 5) ಯೋಗ ಸಿದ್ಧಾಂತ 6) ಅನೇಕಾನೇಕ ಸಿದ್ಧಾಂತಗಳು ತಿಳಿಯವು.

ಹಾಗೆಯೇ ಜ್ಞಾನಿಗೆ ಸೃಷ್ಟಿಧರ್ಮಗಳು ತಿಳಿಯುತ್ತವೆ, ಧರ್ಮದಿಂದ ಜೀವಿಸುತ್ತಾರೆ.

'ಜೀವಿಸಿರುವಾಗ ದೇಹ ನಾನು ಎಂದುಕೊಳ್ಳುತ್ತಾ, ದೇಹ ಸಂಬಂಧವಾದ ಕೆಲಸಗಳನ್ನೇ ಮಾಡುತ್ತಾನೆ,. ಆದರೆ ಮರಣಿಸಿದ ನಂತರ ಸ್ಪಷ್ಟವಾಗಿ ತಿಳಿಯುತ್ತದೆ. ದೇಹ ನಾನಲ್ಲವೆಂದು'. ದೇಹವನ್ನು ಇಲ್ಲಿಯೇ ಬಿಡುತ್ತಾನೆ, ದೇಹವನ್ನು ಕುಟುಂಬದ ಸದಸ್ಯರು ದಹನ ಮಾಡುತ್ತಾರೆ. ಆಗ ಸಹಾಯಕರ ಕೂಡಾ ಆತ್ಮನಾದ ಇವನು ಮೇಲಿನ ಲೋಕಗಳಿಗೆ ಹೋಗುತ್ತಾನೆ. ಆಗ ಚೆನ್ನಾಗಿ ಅರ್ಥವಾಗುತ್ತದೆ, 'ಇಲ್ಲಿಯವರೆಗೆ ಯಾವ ದೇಹವು ನಾನೆಂದು ಭಾವಿಸಿದ್ದೆನೋ ಆ ದೇಹ ನಾನಲ್ಲ ಎಂಬುದು ಸ್ಪಷ್ಟವಾಗಿ ಅರ್ಥವಾಗುತ್ತದೆ'.

ಆಗ ಅಂದುಕೊಳ್ಳುತ್ತಾನೆ 'ಈ ದೇಹಕ್ಕಾಗಿ ನನ್ನ ಜೀವನವನ್ನು ವ್ಯರ್ಥ ಮಾಡಿಕೊಂಡು, ಆಸ್ತಿಗಳು, ಭೂಮಿಗಳು, ಹಣ, ಬಂಗಾರವನ್ನು ಸಂಪಾದಿಸಿಕೊಂಡೆನು, ಮಕ್ಕಳನ್ನು, ಬಂಧುಗಳನ್ನು, ಸ್ನೇಹಿತರನ್ನು, ಎಷ್ಟೋ ಮಂದಿಯನ್ನು ಸಂಪಾದಿಸಿಕೊಂಡೆನು, ಎಷ್ಟೋ ವ್ಯಾಪಾರಗಳನ್ನು ಮಾಡಿ ಸಂಪಾದಿಸಿಕೊಂಡೆನು, ಆದರೆ ಮರಣಿಸಿದ ನಂತರ ಒಂದೂ ಕೂಡಾ..... ಹಿಂದೆ ಬರಲಿಲ್ಲವೆಂದು ಆಶ್ಚರ್ಯಪಡುತ್ತಾನೆ'.

ಇಷ್ಟು ವರ್ಷಗಳು ರಾತ್ರಿ ಹಗಲು ಕಷ್ಟಪಟ್ಟು ಸಂಪಾದಿಸಿದವೆಲ್ಲವನ್ನು ಬಿಟ್ಟು ಬಿಡಬೇಕೆ? ಒಂದೂ ನನ್ನ ಹಿಂದೆ ಬರದೇ?, ಎಷ್ಟು ನಷ್ಟ ಹೊಂದಿದೆನು?, ಎಷ್ಟು ಜೀವನವನ್ನು ವ್ಯರ್ಥ ಮಾಡಿಕೊಂಡೆನು.

ಒಂದು ಜನ್ಮವನ್ನೇ ವ್ಯರ್ಥ ಮಾಡಿಕೊಂಡೆನು ಎಂದುಕೊಳ್ಳುತ್ತಾನೆ. ಹೊಂದಿದ ಅವಕಾಶವನ್ನು ಕೈಜಾರಿಸಿಕೊಂಡೆನೇ? ಎಂತಹ ಬುದ್ಧಿಹೀನನು ಎಂದು ಮೇಲೆ ಎಷ್ಟೋ ಬಾಧೆಪಡುತ್ತಾನೆ.

22 ವರ್ಷಗಳ ಹಿಂದೆ ಪತ್ರೀಜಿಯವರು ಪರಿಚಯವಾದಾಗ ಆತನು ನೀನು ದೇಹವಲ್ಲ, ಆತ್ಮ ಎಂದರು, ಆಗ ಅರ್ಥವಾಗಲಿಲ್ಲ ನನಗೆ. ಆದರೆ ಆತನು ಮಹನೀಯನು ಆದ್ದರಿಂದ ಅದನ್ನು ಚೆನ್ನಾಗಿ ಅಧ್ಯಯನ ಮಾಡಿದೆನು. ಆತನು ಹೇಳಿದ್ದು ಸರಿಯೇ? ಅಲ್ಲವೇ? ಎಂದು ಎಷ್ಟೋ ಪುಸ್ತಕಗಳನ್ನು, ಉಪನಿಷತ್ತುಗಳನ್ನು, ಭಗವದ್ಗೀತೆಗಳಂತಹವನ್ನು ಓದಿದೆನು, ಇನ್ನು ಕೆಲ ಮಹನೀಯರ ಸಂದೇಶಗಳನ್ನು ಕೇಳಿದೆನು, ಆಗ ಪತ್ರೀಜಿಯವರು ಹೇಳಿದ್ದು ಸತ್ಯವು ಎಂಬುದು ಅರ್ಥವಾಯಿತು.

ಹಾಗಾದರೆ ನಾನು ಆತ್ಮವಾದರೆ ನನಗೆ ಉಪಯೋಗವಾಗುವುದು ಏನು ಎಂದು

ಆಲೋಚಿಸಿದರೆ? ಜ್ಞಾನವೇ ನನಗೆ ಲಾಭಿಸುತ್ತದೆ ಎಂದು ಅರ್ಥವಾಯಿತು. ಆಗಿನಿಂದ ಜ್ಞಾನವನ್ನು ಸಂಪಾದಿಸಿಕೊಳ್ಳುವುದರ ಮೇಲೆ ದೃಷ್ಟಿ ಇಟ್ಟೆನು. ಪತ್ರೀಯವರು ಇನ್ನೊಂದು ಹೇಳಿದರು, 'ಹಂಚಿದ್ದು ಬೆಳೆಯಲ್ಪಡುತ್ತದೆ' ಎಂದು ಅಂದರೆ ನಾನು ಸಂಪಾದಿಸಿಕೊಂಡ ಜ್ಞಾನವನ್ನು ಹಂಚುತ್ತಾ ಇದ್ದರೆ, ಆ ಜ್ಞಾನವು ಇನ್ನೂ ಚೆನ್ನಾಗಿ ಬೆಳೆಯುತ್ತದೆಂದು ಅರ್ಥ ಮಾಡಿಕೊಂಡೆನು, ಆಗಿನಿಂದ ಈ ಧ್ಯಾನವನ್ನು, ಜ್ಞಾನವನ್ನು ಹಂಚುವುದಕ್ಕೆ ಪ್ರಾರಂಭಿಸಿದೆನು.

ಪತ್ರೀಜಿಯವರು ಈ ಧ್ಯಾನವನ್ನು, ಜ್ಞಾನವನ್ನು ಹಂಚುತ್ತಿದ್ದಾರಾದ್ದರಿಂದ ಆತನು ಅಷ್ಟು ಶ್ರೇಷ್ಠನಾದನು ಎನ್ನುವುದನ್ನು ಅರ್ಥ ಮಾಡಿಕೊಂಡೆನು. ನಾನು ಕೂಡಾ ಈ ಎರಡು ಕೆಲಸಗಳನ್ನು ಮಾಡಿದರೆ ಬಹಳ ಶ್ರೇಷ್ಠನಾಗಬಹುದು ಎಂಬುದು ಅರ್ಥವಾಗಿ ಆಗಿನಿಂದ ಧ್ಯಾನವನ್ನು, ಜ್ಞಾನವನ್ನು ಪ್ರಚಾರ ಮಾಡುತ್ತಿದ್ದೇನೆ.

ಆದ್ದರಿಂದ ಆತ್ಮಜ್ಞಾನಿಯೊಬ್ಬನ ವರ್ತನೆ ಹೇಗಿರುತ್ತದೆ? ಎಂಬುದನ್ನು ತಿಳಿಯೋಣ.

★ ಆತ್ಮಜ್ಞಾನಿ ಜೀವಿಸಿರುವಾಗಲೇ ಶರೀರಕ್ಕಿಂತ ಆತ್ಮಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾನೆ. ಅಂದರೆ ಈ ದೇಹವನ್ನು, ದೇಹ ಸುಖಗಳಿಗೆ, ದೇಹ ಲಾಭಗಳಿಗೆ ಉಪಯೋಗಿಸನು. ದೇಹವನ್ನು ಆತ್ಮಕ್ಕೆ ಲಾಭತರುವ ಕೆಲಸಗಳಿಗೆ ಅಂದರೆ ಧ್ಯಾನ ಸಾಧನೆ ಮಾಡುವುದಕ್ಕೆ, ಜ್ಞಾನ ಸಂಪಾದನೆಗೆ, ಆತ್ಮ ಜ್ಞಾನ ಸಂಪಾದಿಸಿಕೊಳ್ಳುವ ಪುಸ್ತಕಗಳನ್ನು ಓದುವುದಕ್ಕೆ, ಹಾಗೆಯೇ ಆತ್ಮಜ್ಞಾನಿಗಳೊಂದಿಗೆ ಸಾಂಗತ್ಯ ಮಾಡುವುದಕ್ಕೆ ಉಪಯೋಗಿಸುತ್ತಾರೆ.

ಈಗ ನಾನು ಇಷ್ಟು ಊರುಗಳನ್ನು ತಿರುಗುವುದರಲ್ಲಿ ಇನ್ನೊಂದು ಉದ್ದೇಶವಿದೆ. ಜ್ಞಾನವನ್ನು ಹಂಚುವುದರಿಂದ ಹೆಚ್ಚಾಗುತ್ತದೆ ಎಂಬುದು ಒಂದು ಉದ್ದೇಶವಾದರೆ, ಎರಡನೆಯ ಉದ್ದೇಶ ಹಾಗೇ ತಿರುಗುತ್ತಿರುವಾಗ ಎಷ್ಟೋ ಮಂದಿ ಸೀನಿಯರ್ ಮಾಸ್ಟರ್‌ಗಳನ್ನು ಭೇಟಿಯಾಗುವುದು, ಅವರೊಂದಿಗೆ ಮಾತನಾಡುವುದರಿಂದ ನಾನು ಎಷ್ಟೋ ವಿಷಯಗಳನ್ನು ಕಲಿತುಕೊಳ್ಳಬಹುದು ಎಂಬುದು ಅರ್ಥವಾಯಿತು. ಪ್ರತಿಯೊಬ್ಬರಿಂದಲೂ ಕಲಿತುಕೊಳ್ಳಬೇಕು ಎಂದು ಪತ್ರೀಜಿಯವರು ಹೇಳಿದ್ದಾರೆ. ಆದ್ದರಿಂದ ಅವರ ಅನುಭವಗಳ ಮೂಲಕವೂ ಕೂಡಾ ಎಷ್ಟೋ ಕಲಿತುಕೊಳ್ಳುತ್ತಾ ಇರುತ್ತೇನೆ.

★ ಆತ್ಮಜ್ಞಾನಿ ದೇಹವನ್ನು ಆತ್ಮ ಸೇವೆಗಳನ್ನು ಮಾಡುವುದಕ್ಕೆ ಉಪಯೋಗಿಸುತ್ತಾನೆ. ಪ್ರತಿಯೊಬ್ಬರಿಗೆ ಎಷ್ಟೋ ಸಂಪನ್ಮೂಲಗಳು ಇವೆ, ಹಣವೇ ಅಲ್ಲ, ಸಮಯ, ವಾಕ್ಕು (ಮಾತು), ಕೆಲಸ ಮಾಡುವ ಶಕ್ತಿ, ಆಲೋಚಿಸುವ ಶಕ್ತಿ ಇಂತಹ ಬೆಲೆ ಕಟ್ಟಲಾಗದ ಶಕ್ತಿಗಳು ಎಷ್ಟೋ ಇವೆ.

## ‘ಹಾಗೇ ಮರಣಿಸುವ ಮೊದಲೇ ಮರಣಿಸಿದವನು ಇವೆಲ್ಲಾ ದೇಹಕ್ಕಲ್ಲದೆ ಆತ್ಮ ಲಾಭಕ್ಕಾಗಿ ಉಪಯೋಗಿಸುತ್ತಾನೆ’

ಅದೇ ಕೆಲಸವನ್ನು ನಾವು ಮಾಡುತ್ತಿದ್ದೇವೆ. ನೀವು ಗಮನಿಸಿದರೆ ನಾನು ಆ್ಯಸಿಡ್ ಬಾಯಿಯಲ್ಲಿ ಹಾಕಿಕೊಂಡಾಗ ಎಷ್ಟೋ ದಾರುಣವಾದ ಪರಿಸ್ಥಿತಿಯಲ್ಲಿದ್ದೆನು. ಆದರೂ ಕೂಡಾ ತಿಂಗಳಲ್ಲಿಯೇ ಮತ್ತೆ ಕ್ಲಾಸ್ ಹೇಳಿದೆನು. ನನ್ನ ಧ್ವನಿಯೂ ಕೂಡಾ ಮೊದಲಿನಂತೆ ಬರಲಿಲ್ಲ, ಆದರೂ ಸರಿ ಭೀಮವರಂನಲ್ಲಿ 3 ದಿನಗಳ ಕ್ಲಾಸ್ ಹೇಳಿದೆನು. ಏಕೆಂದರೆ! ಬಂದ ಅವಕಾಶವನ್ನು ವ್ಯರ್ಥ ಮಾಡಿಕೊಳ್ಳಬಾರದು. ಎಷ್ಟೋ ಅಷ್ಟು ಆತ್ಮ ಲಾಭಕ್ಕೆ ಉಪಯೋಗಿಸಬೇಕು ಎಂಬ ಉದ್ದೇಶವೇ.

ನನಗೆ ಸಹನೆಯಿಲ್ಲ, ವಯಸ್ಸಾಗಿದೆ, ಹಾಯಾಗಿ ವಿಶ್ರಾಂತಿ ತೆಗೆದುಕೊಳ್ಳುತ್ತೇನೆ, ಅಂದರೆ ಆಗದು. ನಾನು ವಿಶ್ರಾಂತಿ ತೆಗೆದುಕೊಳ್ಳಲು ಭೂಮಿಯ ಮೇಲೆ ಬಂದಿಲ್ಲ. ಪತ್ರೀಜಿಯವರು ಕೊನೆ ಕ್ಷಣಗಳಲ್ಲಿ ಕೂಡಾ ಲಡಾಕ್‌ಗೆ ಹೋಗಿ ಬಂದರು, ಎಲ್ಲರೂ ಈ ಪರಿಸ್ಥಿತಿಯಲ್ಲಿ ಹೇಗೆ ಹೋಗುತ್ತೀರಿ? ಎಂದರೂ ಕೇಳಲಿಲ್ಲ, ಮಾಡಬೇಕಾದದ್ದು ಮಾಡಲೇಬೇಕು ಎಂದು ಹೇಳಿ ಹೋಗಿ ಬಂದರು. ಕೆಲವು ದಿನಗಳಲ್ಲಿ ಅವರು ನಿಷ್ಕ್ರಮಿಸಿದರು. ಅದಕ್ಕೆ ಎಲ್ಲರಿಗೂ ಆತನೇ ಆದರ್ಶ. ಶರೀರದಲ್ಲಿ ತಾಳ್ಮೆಯಿಲ್ಲ ಇರುವವರೆಗೂ ಆತ್ಮಕ್ಕೆ ಲಾಭಿಸುವ ಕೆಲಸಗಳನ್ನೇ ಮಾಡಬೇಕು.

ಆದ್ದರಿಂದ ಮೊದಲು ನಾನು ದೇಹವಲ್ಲ, ನಾನು ಆತ್ಮನು ಎಂಬುದನ್ನು ನಿರ್ಧಾರ ಮಾಡಿಕೊಳ್ಳಬೇಕು. ಇದನ್ನು ಯಾವಾಗಲೂ ನೆನಪು ಮಾಡಿಕೊಳ್ಳುತ್ತಾ ಇರಬೇಕು. ಏಕೆಂದರೆ ಎಲ್ಲರೂ ಮಾಯಾ ಪ್ರಪಂಚದಲ್ಲಿದ್ದಾರೆ. ಮಾಯೆಯ ಪ್ರಭಾವವು ನಿಮ್ಮ ಮೇಲೆ ಬಿದ್ದರೆ, ದಾರಿ ತಪ್ಪುತ್ತಾ ಇರುತ್ತೀರಿ. ಎಷ್ಟೋ ಮಾಡಬಾರದ ಕೆಲಸಗಳನ್ನು ಮಾಡುತ್ತಾ ಇರುತ್ತೀರಿ. ಆದ್ದರಿಂದ ಈ ಮಾಯೆಯಿಂದ ಹೊರ ಬರಬೇಕೆಂದರೆ ಅದಕ್ಕೆ ಧ್ಯಾನ ಸಾಧನೆ ಒಂದೇ ಮಾರ್ಗ.



**"ಆನಂದದಿಂದ ಜೀವಿಸುವುದಕ್ಕಾಗಿ ಬಂದವರು, ಆನಂದವನ್ನು ಬಿಟ್ಟು ಅಳಿಸುತ್ತ, ಅಳುತ್ತಾ ಹೋಗಿ ಬಿಡುವುದು ಆಶ್ಚರ್ಯಕರವಾದ ವಿಷಯ"**

**- ಬ್ರಹ್ಮರ್ಷಿ ಪಿತಾ ಮಹಾ ಪತ್ರೀಜಿ**

# ಮರಣಿಸಿದ ನಂತರ ನಡೆಯುವುದು ತಿಳಿದುಕೊಂಡರೆ?

**• ಮುಖ್ಯವಾಗಿ ನಾನು ಮರಣಿಸೆನು, ನನಗೆ ಸಾವು ಇಲ್ಲ ಎಂಬುದು ಇಲ್ಲವೆಂಬುದು ಸ್ಪಷ್ಟವಾಗಿ ಅರ್ಥವಾಗುತ್ತದೆ.**

**• ಮರಣಿಸಿದ ನಂತರ ಕೂಡಾ ನಾನು ಇರುತ್ತೇನೆ ಎಂಬುದು ಅರ್ಥವಾಗುತ್ತದೆ.**

**• ಇದರಿಂದ ಮರಣ ಭಯ ಹೋಗುತ್ತದೆ. ಮರಣಿಸಿದವರ ಕುರಿತು ಕೂಡಾ ದುಃಖಿಸರು, ಅಳುವುದಿಲ್ಲ.**

**• ಶ್ರೀಕೃಷ್ಣ ಭಗವಾನನು ಗೀತೆಯಲ್ಲಿ ಹೇಳಿರುವುದನ್ನು ಅರ್ಥ ಮಾಡಿಕೊಳ್ಳುತ್ತಾರೆ.**

**ಶ್ಲೋಕ :–**

**ಅ ಶೋಚ್ಯಾ ನನ್ವಶೋಚ ಸ್ತ್ವಂಪ್ರಜ್ಞಾವಾದಾಂಶ್ಚ ಭಾಷಚೇ !**

**ಗತಸೂ ನಗತಾಸೂಶ್ಚ ನಾನು ಶೋಚನ್ತಿ ಪಂಡಿತಾಂ (ಭ.ಗೀ.2–11)**

**ತಾತ್ಪರ್ಯ :** ಓ, ಅರ್ಜುನಾ! ನೀನು ಶೋಕಿಸಲು ಅರ್ಹಲ್ಲದವರ ಕುರಿತು ಶೋಕಿಸುತ್ತಾ ಇರುವೆ. ಮೇಲಾಗಿ ಬುದ್ಧಿವಂತನಂತೆ ಮಾತನಾಡುತ್ತಿರುವೆ. ಪಂಡಿತರು ಮರಣಿಸಿದವರ ಕುರಿತಾಗಲಿ, ಜೀವಿಸಿರುವವರ ಕುರಿತಾಗಲಿ ಎಂದಿಗೂ ದುಃಖಿಸರು.

ಮರಣಿಸಿದ ನಂತರ ಏನು ನಡೆಯುತ್ತದೋ ತಿಳಿದುಕೊಂಡರೆ ಅವರ ಜೀವನವು ಪೂರ್ತಿಯಾಗಿ ಬದಲಾಗಿ ಬಿಡುತ್ತದೆ. ಅವರ ವರ್ತನೆ, ಕೆಲಸಗಳು, ಮಾತುಗಳು ಎಲ್ಲಾ ಬದಲಾಗಿಬಿಡುತ್ತವೆ. ಅವರು ಸರಿಯಾದ ಜೀವನವನ್ನು ಜೀವಿಸುತ್ತಾರೆ, ಭೂಮಿಯ ಮೇಲೆ ಹೇಗೆ ಜೀವಿಸಬೇಕೊ ಹಾಗೇ ಜೀವಿಸುತ್ತಾರೆ.

**'ಮರಣಿಸುವ ಮೊದಲೇ ಮರಣಿಸಿದವರು ಸಮಯವನ್ನು ವ್ಯರ್ಥ ಮಾಡರು' ಏಕೆಂದರೆ 'ಅವರು ಈ ಭೂಮಿ ಮೇಲೆ ಇರುವ ಜೀವನವು ಸ್ವಲ್ಪವೆಂದು ತಿಳಿದುಕೊಳ್ಳುತ್ತಾರೆ'.**

ಮರಣಿಸಿದ ನಂತರ ನಡೆಯುವುದನ್ನು ನಾವು ತಿಳಿದುಕೊಳ್ಳುವುದಕ್ಕೆ ಪೂರ್ವಿಕರು ಕೆಲವು ಆಚಾರಗಳನ್ನು ಪ್ರವೇಶಪಡಿಸಿದರು. ಅವರು ಪ್ರವೇಶವಿಟ್ಟ ಪ್ರತಿಯೊಂದಕ್ಕೂ ಕೂಡಾ ಒಂದು ಅಂತರಾರ್ಥವಿರುತ್ತದೆ. ಅದನ್ನು ನಾವು ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಬೇಕು. ನೀವು ಗಮನಿಸಿರಿ ಕ್ರೈಸ್ತರಾಗಲಿ, ಮಹಮ್ಮದಿಯರಾಗಲಿ ಮರಣಿಸಿದರೆ ಇನ್ನೂ ಜೀವನವಿಲ್ಲವೆಂದುಕೊಳ್ಳುತ್ತಾರೆ. ಇನ್ನು ಜನ್ಮಗಳಿಲ್ಲವೆಂದುಕೊಳ್ಳುತ್ತಾರೆ. ಆದರೆ ಹಿಂದೂ ಮತದಲ್ಲಿ ಹಾಗೆ ಅಲ್ಲ.

ಮನುಷ್ಯನು ಸತ್ತ ನಂತರ, ಶರೀರವನ್ನು ದಹನ ಮಾಡಿದ ನಂತರ ಅವನಿನ್ನು ಇರುತ್ತಾನೆ, ಅವನಿಗೆ ಇನ್ನೂ ಜೀವನವಿದೆ, ನಶಿಸಿ ಹೋಗುವುದು ಆ ಶರೀರವೇ ಆಗಲಿ, ಆತ್ಮ ಇರುತ್ತದೆ ಎಂದು ತಿಳಿಸುವುದಕ್ಕಾಗಿ ಕರ್ಮಕಾಂಡಗಳನ್ನು ಆಚರಣೆಯಲ್ಲಿಟ್ಟರು. ಅದಕ್ಕೆ ನೋಡಿ ಯಾರನ್ನಾಗಲಿ ಈ ಕರ್ಮಕಾಂಡಗಳನ್ನು ದಾನ ಧರ್ಮಗಳನ್ನು ಏಕೆ ಮಾಡುತ್ತಿದ್ದೀರಿ ಎಂದರೆ? ಇವೆನ್ನೆಲ್ಲಾ ಮಾಡಿದರೆ ಮರಣಿಸಿದವರ ಆತ್ಮ ಊರ್ಧ್ವ ಲೋಕಗಳಿಗೆ ಸೇರಿಕೊಳ್ಳುತ್ತದೆಂದು ಹೇಳುತ್ತಾರೆ.

ಅಂದರೆ ಪ್ರತಿಯೊಬ್ಬರೂ ಕೂಡಾ ಊರ್ಧ್ವ ಲೋಕಗಳನ್ನು ಸೇರಿಕೊಳ್ಳಬೇಕು. ಅವರು ಮಾಡುವ ಕರ್ಮಗಳನ್ನಾಧರಿಸಿ ಉನ್ನತ ಲೋಕಗಳನ್ನು ಸೇರಿಕೊಳ್ಳುತ್ತಾರೆಂದು ಅರ್ಥವಾಗುವುದಕ್ಕಾಗಿಯೇ ಅಂತಹ ಆಚಾರವನ್ನು ಪೂರ್ವಿಕರು ಆಚರಣೆಗೆ ತಂದರು.

ಆದ್ದರಿಂದ ಊರ್ಧ್ವ ಲೋಕಗಳೆಂದರೇನು? ಊರ್ಧ್ವ ಲೋಕಗಳಿಗೆ ಹೋದರೆ ಏನು ನಡೆಯುತ್ತದೆ? ಅಲ್ಲಿಗೆ ಹೋಗಬೇಕೆಂದರೆ ನಿಜವಾಗಿ ಭೂಮಿಯ ಮೇಲೆ ಏನು ಮಾಡಬೇಕು? ಎಂಬುದನ್ನು ತಿಳಿದುಕೊಳ್ಳಬೇಕು. ಅಷ್ಟೇ ಹೊರತು ಅದನ್ನೇನೋ ಆಚಾರವಾಗಿ ಆಚರಿಸಿ ಬಿಟ್ಟುಬಿಡುವುದಲ್ಲ.

ಇದು ಮರಣಿಸಿದ ನಂತರ ಅವರಿಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ. **'ಮುಖ್ಯವಾಗಿ ಮಾಡಿದ ಕರ್ಮಗಳನ್ನು ಆಧರಿಸಿಯೇ ಅವರನ್ನು ಕರೆದುಕೊಂಡು ಹೋಗುವ ಲೋಕಗಳು ಆಧಾರವಾಗಿರುತ್ತವೆಂದು ತಿಳಿದುಕೊಳ್ಳುತ್ತಾರೆ'**.

ಹಾಗಾಗಿ ಇವೆಲ್ಲಾ ನಮಗೆ ಜೀವಿಸಿರುವಾಗಲೇ ಅರ್ಥವಾಗುವುದಕ್ಕೆ ಇಂತಹ ಆಚರಣೆಗಳನ್ನು ಆಚರಣೆಯಲ್ಲಿಟ್ಟಿದ್ದಾರೆ.

ಅದಕ್ಕೆ ಪತ್ರೀಜಿ ಗುರುಗಳು ಕರ್ಮಕಾಂಡಗಳನ್ನು ಮಾಡುವುದರಿಂದ ಬರುವುದು ಏನೂ ಇಲ್ಲ. ಆದರೆ ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡು, ಅದಕ್ಕೆ ಅನುಗುಣವಾಗಿ ನಿನ್ನ ಜೀವನವನ್ನು ಬದಲಾಯಿಸಿಕೊಂಡರೆ ಆಗ ಊರ್ಧ್ವ ಲೋಕಗಳು ಅಂದರೆ ಜನಲೋಕದ ಮೇಲಿರುವಂತಹ ಮಹಾಲೋಕ, ತಪೋಲೋಕ, ಸತ್ಯಲೋಕವನ್ನು ಸೇರಿಕೊಳ್ಳುವೆ ಎಂದು ಹೇಳಿದ್ದಾರೆ. ಅದಕ್ಕೆ ಧ್ಯಾನ ಸಾಧನೆ, ಜ್ಞಾನ

ಸಂಪಾದನೆ ಎರಡು ಮಾಡಬೇಕು. ಹಾಗೆ ಮಾಡಿದವನೇ ಉನ್ನತ ಲೋಕಗಳಿಗೆ ಹೋಗುತ್ತಾನೆ, ಉನ್ನತ ಸ್ಥಿತಿಯನ್ನು ಹೊಂದುತ್ತಾರೆಂದು ಹೇಳಿದ್ದಾರೆ. ಅಷ್ಟೇ ಅಲ್ಲ ಅವರು ಮಾಡಿರುವ ಸಾಧನೆಯಿಂದ ಅಮರತ್ವವನ್ನು ಕೂಡಾ ಹೊಂದುತ್ತಾರೆ.

ಅಷ್ಟೇ ಅಲ್ಲ ಆಲೋಚಿಸಿದರೆ ನಿಮಗೆ ಚೆನ್ನಾಗಿ ಅರ್ಥವಾಗುತ್ತದೆ. ಭೂಮಿಯ ಮೇಲೆ ಜೀವನ ಪರ್ಯಂತ ಕಷ್ಟಪಟ್ಟು ಸಂಪಾದಿಸಿದ್ದು ಒಂದೂ ಕೂಡಾ ಸತ್ತ ನಂತರ ಬರುವುದಿಲ್ಲ, ಒಂದೂ ಕೂಡಾ ನಿಮಗೆ ಉಪಯೋಗವಾಗವು, ಪದವಿಗಳು, ಸಂಪತ್ತುಗಳು, ಭೋಗಭಾಗ್ಯಗಳು ಏನೂ ಹಿಂದೆ ಬಾರವು, ನಿಮ್ಮನ್ನು ಊರ್ಧ್ವ ಲೋಕಗಳಿಗೆ ಸೇರಿಸಬಲ್ಲಹುದು ಆತ್ಮಜ್ಞಾನ ಮಾತ್ರವೇ. ಅದು ಒಂದೇ ಹಿಂದೆ ಬರುತ್ತದೆ ಎಂಬುದು ತಿಳಿದುಕೊಳ್ಳಬೇಕು.

ಮಾನವರು ಎಷ್ಟು ಹೊತ್ತೂ ಹೇಗೆ ಸಂಪಾದಿಸೋಣ? ಎಷ್ಟು ಸಂಪಾದಿಸೋಣ? ಹೇಗೆ ಸಂಭ್ರಮಿಸೋಣ? ಎಷ್ಟು ಗತ್ತಿನಿಂದ ಕಳೆಯೋಣ? ಅದು ನೋಡೋಣಾ? ಇಲ್ಲಿಗೆ ಹೋಗಿ ಇದನ್ನು ನೋಡೋಣಾ? ಯಾವ ಪುಣ್ಯ ಕ್ಷೇತ್ರಕ್ಕೆ ಹೋಗೋಣ? ಎಂದು ಆಲೋಚಿಸುತ್ತಾರೆ. ಆದರೆ ಇವೆಲ್ಲಾ ಅಲ್ಲ, ಮೊದಲು ಮರಣಿಸಿದ ನಂತರ ಏನು ನಡೆಯುತ್ತದೋ ತಿಳಿದುಕೊಳ್ಳಬೇಕು.

## ‘ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ ತಾನು ದೇಹವಲ್ಲ ಆತ್ಮ ಎಂದು ತಿಳಿಯುತ್ತದೆ’

ನಾನು ಆತ್ಮವೆಂದು ತಿಳಿದ ಮೇಲೆ ಮಾಡುವ ಕೆಲಸಗಳೆಲ್ಲಾ ಬದಲಾಗಿ ಬಿಡುತ್ತವೆ. ಹಾಗೆ ಬದಲಾಗಿ ಹೋಗುವುದರಿಂದ ಆತ್ಮವಾದ ತನಗೆ ಎಷ್ಟೋ ಲಾಭವು ಬರುತ್ತದೆ. ಹಾಗಾದರೆ ಎಂತಹ ಲಾಭಗಳು ಬರುತ್ತವೆ? ಅವರ ವರ್ತನೆಯಲ್ಲಿ ಎಂತಹ ಬದಲಾವಣೆಗಳು ಬರುತ್ತವೆ? ಎಂಬುದನ್ನು ತಿಳಿದುಕೊಳ್ಳೋಣ.

ಈಗ ಭೂಲೋಕದಲ್ಲಿ ಜೀವಿಸುವವರೆಲ್ಲಾ ಕೂಡಾ ಈಗ ಜೀವಿಸುತ್ತಿರುವುದೇ ಜೀವನ, ಹಾಗೆಯೇ ಸತ್ತ ನಂತರ ಇನ್ನೂ ಜೀವನ ಇರುವುದಿಲ್ಲ ಎಂಬ ಭಾವದಿಂದ ಜೀವಿಸುತ್ತಾರೆ. ಎಷ್ಟು ಹೊತ್ತೂ ಚೆನ್ನಾಗಿ ಸಂಪಾದಿಸಬೇಕು, ಹೇಗೆ ವಿಲಾಸದಿಂದ ಇರಬೇಕು, ಎಷ್ಟು ಎಂಜಾಯ್ ಮಾಡಿದರೆ ಅಷ್ಟು ಉತ್ತಮವಾಗಿ ಜೀವಿಸಿದಂತೆಂದು ಭಾವಿಸುತ್ತಾ ಇರುತ್ತಾರೆ. ತಾನು ಮಾಡುವಂತಹವೆಲ್ಲಾ ಸರಿಯಾದವೇ ಎಂದುಕೊಳ್ಳುತ್ತಾರೆ. ತಾನು ಮಾಡುವ ಕೆಲಸಗಳು, ಸೇವೆಗಳು, ಕಾರ್ಯಕ್ರಮಗಳು, ಮಾತನಾಡುವ ಮಾತುಗಳು ಎಲ್ಲಾ ಸರಿಯಾದವೇ ಎಂದುಕೊಳ್ಳುತ್ತಾರೆ.

ಆದರೆ ಮರಣಿಸಿದ ನಂತರ ಏನು ನಡೆಯುತ್ತದೋ ತಿಳಿದುಕೊಂಡರೆ ತಾನು ಆತ್ಮವೆಂದು ತಿಳಿಯುವುದೇ ಅಲ್ಲ, ಇಲ್ಲಿಯವರೆಗೆ ತಾನು ಮಾಡಿದವುಗಳೆಲ್ಲಾ ಸಂಪೂರ್ಣವಾಗಿ ಭಿನ್ನವಾದವೆಂದು, ವಿರುದ್ಧವಾದವೆಂದು ಅರ್ಥವಾಗುತ್ತದೆ. ಕಾರಣ ಎಲ್ಲಾ ದೇಹಕ್ಕೆ ಲಾಭಿಸುವಂತವೇ ಮಾಡಿದ್ದೀರಿ.. ಆದ್ದರಿಂದ.

# ಮರಣಿಸುವ ಮೊದಲೇ ಮರಣಿಸಿದರೆ 'ನಾನು ಆತ್ಮನು ಎಂದು ತಿಳಿದುಕೊಳ್ಳುವುದರಿಂದ, ನಾನು ಆತ್ಮನು ಎನ್ನುವಂತೆಯೇ ಜೀವಿಸುತ್ತಾರೆ"

ಜೀವಿಸಿರುವಾಗ ಶರೀರ ಒಂದೇ ಕಾಣಿಸುತ್ತದೆ. ಅಜ್ಞಾನದಲ್ಲಿರುವವರು ಆ ಶರೀರವೇ ನಾನು ಎಂದುಕೊಳ್ಳುತ್ತಾರೆ. ಆದರೆ ಕೆಲವರಿಗೆ ಸದ್ಗುರುವು ಲಭಿಸುವುದರಿಂದ ಈ ಸದ್ಗುರುವಿನ ಮೂಲಕ ತಾನು ದೇಹವಲ್ಲ ಆತ್ಮನು ಎಂದು, ಕೆಲವು ದಿನಗಳಲ್ಲಿ ಈ ಶರೀರವು ಇರುವುದಿಲ್ಲವೆಂದು ತಿಳಿದುಕೊಳ್ಳುತ್ತಾರೆ.

ಗುರುವು ನೀನು ಆತ್ಮನು, ಆದ್ದರಿಂದ ಆತ್ಮವೆಂಬಂತೆ ಜೀವಿಸು, ಆತ್ಮಕ್ಕೆ ಪ್ರಾಮುಖ್ಯತೆಕೊಡು, ಆತ್ಮ ಲಾಭಕ್ಕಾಗಿ ಕಷ್ಟಪಡು, ನಿನಗಿರುವ ಸಂಪನ್ಮೂಲಗಳನ್ನು ಆತ್ಮದ ಲಾಭಕ್ಕಾಗಿ ಖರ್ಚು ಮಾಡು ಎಂದು, ಹೇಳಿದರೆ ತಿಳಿದುಕೊಳ್ಳುತ್ತಾರೆ, ಆದರೆ ಇನ್ನು ಪೂರ್ತಿಯಾಗಿ ನಾನು ಆತ್ಮ ಎಂಬಂತೆ ವರ್ತಿಸರು, ಅಂದರೆ ಅವರಿಗೆ ಅರ್ಥವಾಗಿಲ್ಲ ಎಂದರ್ಥ.

ಏನು ಈತನು ಹೀಗೆ ಹೇಳುತ್ತಿದ್ದಾನೆ? ಶರೀರ ನಾನಲ್ಲ ಎಂದೆನ್ನುತ್ತಿದ್ದಾನೆ? ಎಂದುಕೊಳ್ಳುತ್ತಾರೆ. ತಾತ್ಕಾಲಿಕವಾಗಿ ದೇಹವನ್ನು ಉಪಯೋಗಿಸಿಕೊಳ್ಳುವುದಕ್ಕಾಗಿ ನೀನು ಈ ದೇಹದೊಳಗೆ ಪ್ರವೇಶಿಸಿರುವೆ ಅಷ್ಟೇ ಹೊರತು ಆ ದೇಹ ನೀನಲ್ಲವೆಂದು ಸದ್ಗುರುಗಳು ಹೇಳಿದರೂ ಅರ್ಥವಾಗದೆ ದೇಹಕ್ಕೆ ಹೆಚ್ಚು ಆದ್ಯತೆಯನ್ನು ಕೊಡುತ್ತಾರೆ.

ಆದರೆ ಮರಣಿಸಿದ ನಂತರ ನಡೆಯುವುದನ್ನು ತಿಳಿದ ಮೇಲೆ ಅವರಿಗೆ ಸದ್ಗುರುವು ಹೇಳಿದ್ದು ಸರಿ **'ನಾನು ದೇಹವಲ್ಲ ಆತ್ಮನು ಎಂದು ಚೆನ್ನಾಗಿ ಅರ್ಥವಾಗುತ್ತದೆ, ಆಗ ಆತ್ಮಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾರೆ, ಆತ್ಮನಂತೆ ಜೀವಿಸುತ್ತಾರೆ'**.

ನೀವು ಆತ್ಮಜ್ಞಾನವನ್ನು ಹೊಂದಿದ್ದೀರಾ? ಇಲ್ಲಾ? ಎನ್ನುವುದಕ್ಕೆ ನಿದರ್ಶನಾವೇನೆಂದರೆ! ನಾನು ಆತ್ಮವೆನ್ನುವಂತೆ ಜೀವಿಸುವುದು, ಎಷ್ಟು ಹೆಚ್ಚು ಆತ್ಮನಂತೆ ಜೀವಿಸಿದರೆ ನೀವು ಅಷ್ಟು ಆತ್ಮಜ್ಞಾನವನ್ನು ಹೊಂದಿದಂತೆ.

ನೀವು ಪೂರ್ತಿಯಾಗಿ ಆತ್ಮ ಎನ್ನುವಂತೆ ಜೀವಿಸಿದರೆ ನಿಮ್ಮ ಜ್ಞಾನವು ಪರಾಕಾಷ್ಟೆಗೆ ಹೋದಂತೆ. ಹಾಗೆ 100% ರಂತೆ ನೀವು ಹಾಗೆ ಜೀವಿಸಿದರೆ ಅದೇ ನಿಮಗೆ ಕೊನೆಯ ಜನ್ಮ. ಪತ್ರೀಜಿಯವರನ್ನಾಗಲಿ, ಯಾರನ್ನಾದರೆ ಮಹನೀಯರೆಂದು ಅಂದುಕೊಳ್ಳುತ್ತೇವೋ ಅವರೆಲ್ಲರನ್ನು ಉದಾಹರಣೆಯಾಗಿ ತೆಗೆದುಕೊಂಡರೆ ನಿಮಗೆ ಅರ್ಥವಾಗುತ್ತದೆ.

ನಿಮ್ಮ ಕಣ್ಣಿಗೆ ಕಾಣಿಸದ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ನಿಮಗೆ ಶಕ್ತಿಗಳು, ಈ ಸಿದ್ಧಿಗಳು ಕೊಡಲ್ಪಡುತ್ತಿರುತ್ತವೆ. ನಿಮ್ಮ ಹಿಂದಿನದು ನೆನಪಿಲ್ಲದಿರುವುದರಿಂದ ನೀವು ಇದಕ್ಕೂ ಮೊದಲು ಆ ಶಕ್ತಿಗಳನ್ನು ಹೊಂದಿಲ್ಲವೆಂದು ಅಂದುಕೊಳ್ಳುತ್ತೀರಿ.

ಏಕೆಂದರೆ ನನ್ನ ಜೀವನದಲ್ಲಿ ನಡೆದದ್ದನ್ನು ಹೇಳುತ್ತೇನೆ. 18 ವರ್ಷಗಳ ಕೆಳಗೆ ಯಾರೋ ಒಬ್ಬಾತನು ಅವರ ಸಣ್ಣ ಮಗನನ್ನು ಭೀಮವರಂಗೆ ಕರೆತಂದನು. ಆ ಹುಡುಗನು ಎಷ್ಟೋ ಹೇಳುತ್ತಿದ್ದಾನೆ. ಯಾರಾದರೂ ಇದ್ದರೆ ಅವರನ್ನು ನೋಡಿ ನಡೆಯುವುದು ಹೇಳುತ್ತಿದ್ದಾನೆ. ಅದನ್ನು ನೋಡಿ, ನಾನು ಪತ್ರೀಜಿಯವರೊಂದಿಗೆ ಒಬ್ಬ ಸಣ್ಣ ಮಗು ಹಾಗೇ ಹೇಗೆ ಹೇಳುತ್ತಿದ್ದಾನೆ ಸಾರ್? ಬಹಳ ವಿಚಿತ್ರವಾಗಿದೆ ಅನಿಸುತ್ತಿದೆ ಅಂದರೆ!

ಅವೆಲ್ಲವೂ ನಿನಗೆ ಆಗಿಹೋಗಿವೆ ಬಿಡಯ್ಯ ಎಂದರು. ಆಗ ಅರ್ಥವಾಯಿತು ನಾನು ಈ ಶಕ್ತಿಗಳಿಂದ ಕಲಿತುಕೊಳ್ಳಬೇಕಾದದ್ದನ್ನು ಕಲಿತುಕೊಂಡಿದ್ದೇನೆ. ಅದಕ್ಕೂ ಮೀರಿದ ಕೆಲಸಗಳನ್ನು ಈಗ ಮಾಡುತ್ತಿದ್ದೇನೆ, ಅದಕ್ಕೆ ಈಗ ಬಂದಿದದ್ದೇನೆ ಎಂಬುದು ಅರ್ಥವಾಯಿತು. ಆದ್ದರಿಂದ ಈ ಜ್ಞಾನವನ್ನು ಎಲ್ಲರಿಗೂ ಕೊಡುವುದು ಎಲ್ಲಕ್ಕಿಂತಲೂ ಶ್ರೇಷ್ಠವಾದ ಕೆಲಸವೆಂದು ನನಗೆ ತಿಳಿಯಿತು.

ಈ ಶಕ್ತಿಗಳು, ಸಿದ್ಧಿಗಳು ಎಲ್ಲಾ ಕೂಡಾ ಕೆಳಗಿನ ಸ್ಥಾಯಿಯವೇ. ಅದಕ್ಕೆ ಪತ್ರೀಜಿಯವರು ಕೂಡಾ ಅವು ಯಾವುವು ನನಗೆ ಇಲ್ಲ ಎನ್ನುತ್ತಾರೆ, ಇದ್ದರೂ ಕೂಡಾ ಇಲ್ಲವೆನ್ನುತ್ತಾರೆ. ಆತನ ಪ್ರಣಾಳಿಕೆ ಎಲ್ಲರಲ್ಲಿಯ ಅಜ್ಞಾನವನ್ನು ತೊಲಗಿಸಿ, ಪ್ರತಿಯೊಬ್ಬರನ್ನೂ ಜ್ಞಾನಿಗಳಾಗಿ ಮಾಡುವುದೇ. ಅದರ ಮೇಲೆಯೇ ಹೆಚ್ಚು ದೃಷ್ಟಿಯಿಡುತ್ತಾರೆ, ಆತನು ಬಿಡುಗಡೆ ಹೊಂದಿದ್ದಾನೆ. ಇನ್ನೂ ಕೆಲವು ಜನರನ್ನು ಬಿಡುಗಡೆ ಮಾಡುವುದಕ್ಕೆ ಆತನು ಜನ್ಮ ತೆಗೆದುಕೊಂಡಿದ್ದಾನೆ, ಜನ್ಮ ಅನ್ನುವುದಕ್ಕಿಂತ ಅವತರಿಸಿದನು ಎನ್ನಬಹುದು.

ಆಗ ಅರ್ಥವಾಯಿಯಿತು ನನಗೆ, ಅವುಗಳ ಮೇಲೆ ದೃಷ್ಟಿ ಇಡಬೇಕಾಗಿಲ್ಲ, ನಾವು ಮಾಡಬೇಕಾದದ್ದನ್ನು ಮಾಡುತ್ತಾ ಇದ್ದರೆ ಯಾವ ಸಂದರ್ಭದಲ್ಲಿಯೋ ಪ್ರಕೃತಿ ನಮಗೆ ಏನು ಕೊಡಬೇಕೋ ಅದು ಸಹಜವಾಗಿ ಕೊಡುತ್ತಾ ಇರುತ್ತದೆ. ಅದನ್ನು ದೊಡ್ಡಸ್ತಿಕೆಗಳಿಗಾಗಿ, ಹೆಸರು, ಪ್ರತಿಷ್ಠೆಗಳಿಗಾಗಿ ಉಪಯೋಗಿಸುವುದಲ್ಲ. ಹಾಗೆ ಉಪಯೋಗಿಸಿದರೆ ಮತ್ತೇ ಕಳೆದುಕೊಳ್ಳಬೇಕಾಗುತ್ತದೆ. ಅವುಗಳನ್ನು ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಉಪಯೋಗಿಸಬೇಕೆಂಬುದನ್ನು ಅರ್ಥ ಮಾಡಿಕೊಳ್ಳಿ. ಪೂರ್ಣ ಜ್ಞಾನವನ್ನು ಹೊಂದಿದಾಗಲೇ ಪೂರ್ಣಾತ್ಮರಾಗಬಲ್ಲರು.

ಆಂಜನೇಯ ಸ್ವಾಮಿಗೆ ಎಷ್ಟೋ ಸಿದ್ಧಿಗಳಿವೆ, ಆದರೆ ರಾಮನಿಗೆ ಬಂಟನಾಗಿಯೇ ಇದ್ದಾನೆ, ಅಂದರೆ ಆಂಜನೇಯ ಸ್ವಾಮಿಗಿಂತ ರಾಮನೇ ಶ್ರೇಷ್ಠನೇ ಅಲ್ಲವೇ? ಶ್ರೀರಾಮನು

ಶಕ್ತಿಗಳನ್ನು ಯಾವುದನ್ನು ಪ್ರದರ್ಶಿಸಲಿಲ್ಲ. ಆದರೆ ಆಂಜನೇಯ ಸ್ವಾಮಿ ತನ್ನ ಶಕ್ತಿಗಳನ್ನು ಪ್ರದರ್ಶಿಸಿದನು. ಆದರೆ ಎಲ್ಲಾ ಶಕ್ತಿಗಳು ಇದ್ದರೂ, ಎಷ್ಟಿದ್ದರೂ ಆಂಜನೇಯ ಸ್ವಾಮಿ ಏನೋ ಕೊರತೆಯಿಂದಲೇ ಇರುತ್ತಿದ್ದನು.

ಶ್ರೀರಾಮನ ಪಟ್ಟಾಭಿಷೇಕವು ಆದ ನಂತರ ರಾಮನನ್ನು ಆಂಜನೇಯ ಸ್ವಾಮಿ, ನನ್ನಲ್ಲಿ ಏನೋ ಕೊರತೆ ಇದೆ ಎಂದನು. ಆಗ ಶ್ರೀರಾಮನು ಆತ್ಮ ಜ್ಞಾನವನ್ನು ಬೋಧಿಸಿದ ನಂತರ ಆತನ ಪರಿಪೂರ್ಣನಾದನು. ಆದ್ದರಿಂದ ಆತ್ಮಜ್ಞಾನವನ್ನು ಹೊಂದಿದರೇನೇ ಯಾರಾಗಲಿ ಪರಿಪೂರ್ಣರು ಆಗಬಲ್ಲರೆಂದು ತಿಳಿದುಕೊಳ್ಳಬೇಕು.

ಲೋಕದಲ್ಲಿ ಯಾರು ಯಾವ ಸ್ಥಿತಿಯಲ್ಲಿದ್ದರೆ ಅದಕ್ಕೇ ಪ್ರಾಮುಖ್ಯತೆ ಕೊಡುತ್ತಾರೆ. ದೇಹ ಸ್ಥಿತಿಯಲ್ಲಿದ್ದರೆ ದೇಹಕ್ಕೇ ಪ್ರಾಮುಖ್ಯತೆ ಕೊಡುತ್ತಾರೆ, ಮನೋ ಸ್ಥಿತಿಯಲ್ಲಿದ್ದರೆ ಮನಸ್ಸಿಗೆ ಪ್ರಾಮುಖ್ಯತೆ ಕೊಡುತ್ತಾರೆ, ಬುದ್ಧಿ ಸ್ಥಿತಿಯಲ್ಲಿದ್ದರೆ ಬುದ್ಧಿಗೆ ಪ್ರಾಮುಖ್ಯತೆ ಕೊಡುತ್ತಾರೆ, ಇವೆಲ್ಲಾ ಆದ ನಂತರ ಆತ್ಮಸ್ಥಿತಿಯೊಳಗೆ ಬರುತ್ತಾರೆ.

ಆತ್ಮ ಸ್ಥಿತಿಯೊಳಗೆ ಬಂದಿರುವವರಲ್ಲಿಯೂ ಕೂಡಾ ಗ್ರೇಡ್‌ಗಳಿರುತ್ತವೆ, ಈಗ ನಾವೆಲ್ಲಾ ಕೂಡಾ ಆತ್ಮ ಸ್ಥಿತಿಯೊಳಗೆ ಬಂದವರೇ. ಒಬ್ಬೊಬ್ಬರು ಒಂದೊಂದು ಸ್ಥಾಯಿಯಲ್ಲಿದ್ದೇವೆ, ಒಟ್ಟಾರೆ ಆತ್ಮ ಸ್ಥಿತಿಗೆ ಬಂದಿದ್ದೇವೆ. ಅದಕ್ಕೇ ಇವುಗಳ ಮೇಲೆ ಅಷ್ಟು ಆಸಕ್ತಿಯನ್ನು ತೋರಿಸುತ್ತಿದ್ದೇವೆ, ಶ್ರದ್ಧೆಯಿಂದ ಎಲ್ಲವನ್ನು ಕಲಿಯುತ್ತಿದ್ದೇವೆ.

ಆದ್ದರಿಂದ ಯಾರಾಗಲಿ ಕೊನೆಗೆ ಈ ಕೆಲಸಗಳನ್ನು ಮಾಡಿ, ನಾನು ಆತ್ಮನು ಎನ್ನುವಂತೆ ಜೀವಿಸಬಲ್ಲವರಾಗುತ್ತಾರೆ. ಬಹಳಷ್ಟು ಜನ ದೊಡ್ಡದಾಗಿ ಬೆಳೆದುಬಿಟ್ಟಿದ್ದೇನೆ ಎಂದುಕೊಳ್ಳುತ್ತಾರೆ. ಇನ್ನೂ ಕೆಲವರು ಈ ಧ್ಯಾನದ ತರಗತಿಗಳನ್ನು ಏರ್ಪಡಿಸಿ ಅಮ್ಮೋ! ಬಹಳ ದೊಡ್ಡ ಕೆಲಸವನ್ನು ಮಾಡುತ್ತಿದ್ದೇನೆ ಎಂದು ಉಬ್ಬಿ ಹೋಗುತ್ತಾ ಇರುತ್ತಾರೆ.

ಕೆಲವರು ತರತಿಗಳನ್ನು ಹೇಳುತ್ತಾ ಉಬ್ಬಿ ಹೋಗುತ್ತಾ ಇರುತ್ತಾರೆ ಮತ್ತೆ ಕೆಲವರು ಈ ಮಾರ್ಗದಲ್ಲಿ ಸೇವೆಗಳನ್ನು ಮಾಡುತ್ತಾ ಇರುತ್ತಾರೆ. ಅದು ಬೆಳವಣಿಗೆಯಲ್ಲಿ ವಿವಿಧ ರೀತಿಯ ಹಂತಗಳು. ಯಾವ ಹಂತದಲ್ಲಿ ಇದ್ದರೆ ಆ ರೀತಿಯಾದ ಸೇವೆಗಳನ್ನು ಮಾಡುತ್ತಾ ಇರುತ್ತಾರೆ. ಈ ಆಧ್ಯಾತ್ಮಿಕ ಮಾರ್ಗದಲ್ಲಿ ದೊಡ್ಡ ದೆಸೆ ಏನೆಂದರೆ ! ಆತ್ಮ ಜ್ಞಾನವನ್ನು ಹೊಂದುವುದು, ಅದನ್ನು ಹತ್ತು ಮಂದಿಗೆ ಬೋಧಿಸುವುದು.

ಆದ್ದರಿಂದ ಜ್ಞಾನವನ್ನು ಬೆಳೆಸಿಕೊಳ್ಳಿ, ನಾನು ಆತ್ಮನು ಎನ್ನುವಂತೆ ನೀವು ಎಷ್ಟು ಜೀವಿಸಿದರೆ ನೀವು ಅಷ್ಟು ಬೆಳೆದಂತೆ. ಯಾವಾಗಲಾದರೂ ಸರಿ ಯಾವ ಕೆಲಸವನ್ನು ಮಾಡುತ್ತಿದ್ದರೂ ಸರಿ, ಆತ್ಮವೆನ್ನುವಂತೆ ಮಾಡಬೇಕು, ಆತ್ಮಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು, ಆತ್ಮದ ಲಾಭಕ್ಕಾಗಿ ಕೃಷಿಯನ್ನು ಮಾಡಬೇಕು. ಅದಕ್ಕೆ ನೀವು ಒಂದು

ಕೆಲಸವನ್ನು ಮಾಡುತ್ತಿರುವಾಗ ಈ ಕೆಲಸವು ದೇಹಕ್ಕೆ ಲಾಭವೇ? ಆತ್ಮಕ್ಕೆ ಲಾಭವೇ? ಎಂದು ಪ್ರಶ್ನಿಸಿಕೊಳ್ಳಬೇಕು.

ಅದು ದೇಹಕ್ಕೆ ಲಾಭವಾದರೆ ಕಡಿಮೆ ಪ್ರಾಮುಖ್ಯತೆ ಕೊಡಿರಿ, ಶರೀರವು ಇದೆಯಾದ್ದರಿಂದ ಅಗತ್ಯಗಳು ಇರುತ್ತವೆ, ಆದ್ದರಿಂದ ಕಡಿಮೆ ಆದ್ಯತೆ ಅಂದರೆ ಅಗತ್ಯಗಳಿಗೆ ಪರಿಮಿತವಾಗಿರಿ, ಆತ್ಮಕ್ಕೆ ಹೆಚ್ಚು ಆದ್ಯತೆ ಕೊಡಿರಿ. ಹಾಗೆ ಮಾಡುತ್ತಾ, ಮಾಡುತ್ತಾ, ಮಾಡುತ್ತಾ ಕೊನೆಗೆ ನಾನು ಆತ್ಮವೆಂಬಂತೆಯೇ ನಿಮ್ಮ ವರ್ತನೆಯು ಬದಲಾಗಿಬಿಡುತ್ತದೆ.

ಸಂಪೂರ್ಣವಾಗಿ ನೀವು ಯಾವಾಗಾದರೆ 100% ಆ ಸ್ಥಾಯಿಗೆ ಬರುತ್ತೀರೋ ಇನ್ನು ನೀವು ಪರಿಪೂರ್ಣ ಸ್ಥಿತಿಗೆ ಬೆಳೆದಂತೆಯೇ ಲೆಕ್ಕ. ಆದ್ದರಿಂದ ಪತ್ರೀಜಿ ಗುರುಗಳು ಕನಿಷ್ಠ 50% ಆತ್ಮಕ್ಕೆ, 50% ದೇಹಕ್ಕೆ ಪ್ರಾಮುಖ್ಯತೆ ಕೊಡಿರಿ ಎಂದಿದ್ದಾರೆ. ಹಾಗೆ ಈ ಜನ್ಮದಲ್ಲಿ ಪ್ರಯತ್ನಿಸಿದರೆ ಮರುಜನ್ಮದಲ್ಲಿ ಇನ್ನೂ ಹೆಚ್ಚಿಸಿಕೊಳ್ಳುತ್ತೀರಿ ಎಂದು ಹೇಳಿದ್ದಾರೆ. ನಾನು ಏನು ಹೇಳುತ್ತೇನೆಂದರೆ ನೀವೆಲ್ಲರೂ ಸಾಮಾನ್ಯರಲ್ಲ, ಬಹಳ ಉತ್ತಮ ಸ್ಥಿತಿಗೆ ಬಂದವರು. ಇದಕ್ಕೂ ಮೊದಲಿನ ಜನ್ಮಗಳಲ್ಲಿ ಆತ್ಮಕ್ಕಾಗಿ ಬಹಳ ಕೃಷಿ ಮಾಡಿದವರು. ಆದ್ದರಿಂದ 75% ಆತ್ಮಕ್ಕೆ, 25% ಶರೀರಕ್ಕೆ ಪ್ರಾಮುಖ್ಯತೆಯನ್ನು ಕೊಡಿರಿ, ಮರು ಜನ್ಮದಲ್ಲಿ ನೀವು ಖಂಡಿತವಾಗಿ ಪರಿಪೂರ್ಣ ಸ್ಥಿತಿಗೆ ಬರುತ್ತೀರಿ ಎನ್ನುತ್ತೇನೆ.

ಆದ್ದರಿಂದ ನೀವು ಆತ್ಮ ಎನ್ನುವಂತೆ ಎಷ್ಟರವರೆಗೆ ಜೀವಿಸುತ್ತೀರೋ ತಿಳಿದುಕೊಳ್ಳಿ. ರಾತ್ರಿ ನಿದ್ದೆ ಹೋಗುವಾಗ ಒಂದುಸಾರಿ ನೀವು ಈ ದಿನ ಮಾಡಿದ ಕೆಲಸಗಳ ಕುರಿತು ಪುನಃ ಅವಲೋಕನ ಮಾಡಿಕೊಳ್ಳಿ, ಎಷ್ಟು ಕೆಲಸಗಳನ್ನು ನಾನು ಆತ್ಮ ಎನ್ನುವಂತೆ ಮಾಡಿದೆನು? ಎಷ್ಟು ಕೆಲಸಗಳನ್ನು ದೇಹವೆನ್ನುವಂತೆ ಮಾಡಿದೆನು? ಎಷ್ಟು ಸಮಯ ಆತ್ಮಕ್ಕೆ ಒದಗಿಸಿದೆನು? ಎಷ್ಟು ಸಮಯ ದೇಹಕ್ಕೆ ಒದಗಿಸಿದೆನು? ಅವೆಲ್ಲವನ್ನು ಒಂದು ಸಾರಿ ಗಮನಿಸಿಕೊಂಡರೆ ಅರ್ಥವಾಗುತ್ತದೆ.

ಆದ್ದರಿಂದ ಮರಣಿಸಿದ ನಂತರ ನಡೆಯುವುದನ್ನು ಮುಂಚಿತವಾಗಿಯೇ ತಿಳಿದುಕೊಂಡರೆ ನಿಮ್ಮ ವರ್ತನೆಯಲ್ಲಿ ಬಹಳ ಬದಲಾವಣೆ ಬರುತ್ತದೆ, ಆತ್ಮ ಎನ್ನುವಂತೆ ಜೀವಿಸಬಲ್ಲವರಾಗುತ್ತೀರಿ, ಆತ್ಮ ಲಾಭಕ್ಕಾಗಿಯೇ ಹೆಚ್ಚು ಕೃಷಿಯನ್ನು ಮಾಡುತ್ತಾ, ಆತ್ಮರಾದ ನೀವು ಎಷ್ಟೋ ಲಾಭವನ್ನು ಹೊಂದುತ್ತೀರಿ. ಕಬೀರರು ಹೇಳಿದಂತೆ ಅಮರರಾಗುತ್ತೀರಿ, ಅಂದರೆ ಜನ್ಮ ರಹಿತ ಸ್ಥಿತಿಯನ್ನು ಹೊಂದುತ್ತೀರಿ.

** ** **

# ಮರಣಿಸುವ ಮೊದಲೇ ಮರಣಿಸಿದರೆ 'ನಿಮ್ಮ ಸಮಯವನ್ನು ಪೂರ್ತಿಯಾಗಿ ನಿಮ್ಮ ಅಂದರೆ ಆತ್ಮದ ಲಾಭಕ್ಕಾಗಿ ವಿನಯೋಗಿಸಿಕೊಳ್ಳುತ್ತೀರಿ"

ಸಹಜವಾಗಿ ಮರಣಿಸಿದ ನಂತರ ಏನು ನಡೆಯುತ್ತದೆಂದು ಪ್ರತಿಯೊಬ್ಬರೂ ಮರಣಿಸಿದ ನಂತರ ತಿಳಿಯುತ್ತಾರೆ. ಹಾಗೆ ತಿಳಿದುಕೊಂಡರೂ ಸಹ ಏನೂ ಉಪಯೋಗವಿರುವುದಿಲ್ಲ, ಆದ್ದರಿಂದ ಮರಣಿಸಿದ ನಂತರ ನಡೆಯುವುದನ್ನು ಜೀವಿಸಿರುವಾಗಲೇ ತಿಳಿದುಕೊಳ್ಳಬೇಕು.

ಅದಕ್ಕೆ ನೀವು ಕೆಲವು ತಿಂಗಳುಗಳ ಕಾಲ ದೀಕ್ಷೆಯಿಂದ ಕಷ್ಟಪಟ್ಟು ಸಾಧನೆ ಮಾಡುತ್ತಾ, ಆಹಾರ ನಿಯಮಗಳನ್ನು ಪಾಲಿಸುತ್ತಾ ಇದ್ದರೆ ಖಂಡಿತವಾಗಿ ನಿಮ್ಮ ಬುದ್ಧಿಯನ್ನು ಬ್ರಹ್ಮಾಂಡವಾಗಿ ತಯಾರು ಮಾಡಿಕೊಳ್ಳುತ್ತೀರಿ. ಆಗ ಓದಿದ್ದು ಆಗಲಿ, ಕೇಳಿದ್ದಾಗಲಿ ಚೆನ್ನಾಗಿ ಅರ್ಥವಾಗುತ್ತದೆ, ಆಗ ಅವುಗಳನ್ನು ಆಚರಿಸುತ್ತೀರಿ.

ಅದಕ್ಕಾಗಿ ಭೀಮವರಂಗೆ ಖಚಿತವಾಗಿ ಬಿಡದೇ ಬರಬೇಕು. ನಾನು ಪತ್ರೀಜಿಯವರ ಪರಿಚಯವಾಗುವ ಮೊದಲು ವ್ಯಾಪಾರವನ್ನು ಮಾಡಿಕೊಳ್ಳುತ್ತಿದ್ದೆನು, ಮತ್ತೆ ಈಗ ಈ ಸ್ಥಾಯಿಗೆ ಬಂದೆನು, ನೀವಾದರೂ ಬರಬಹುದು. ಒಂದು ವಿಷಯ ನೆನಪಿಟ್ಟುಕೊಳ್ಳಿ, ಯಾರಿಗೂ ಅಸಾಧ್ಯವೆನ್ನು–ವುದು ಯಾವುದೂ ಇಲ್ಲ, ಒಬ್ಬ ಮಾನವನಿಗೆ ಸಾಧ್ಯವಾದದ್ದು ಇನ್ನೊಬ್ಬ ಮಾನವನಿಗೆ ಖಂಡಿತವಾಗಿ ಸಾಧ್ಯವಾಗುತ್ತದೆ.

ನನ್ನ ವಿಷಯವನ್ನು ಪಕ್ಕಕ್ಕೆ ಇಟ್ಟರೆ ನಮ್ಮ ಮೇಡಂನ್ನು ಗಮನಿಸಿದರೆ ಆಕೆಯು ಎಷ್ಟೊಂದು ಬದಲಾಗಿದ್ದಾಳೆ. ಇಷ್ಟು ಜ್ಞಾನ ಅದಕ್ಕೂ ಮೊದಲು ಇಲ್ಲ, ಈಗ ಅಪಾರವಾಗಿ ಸಂಪಾದಿಸಿದ್ದಾಳೆ, ಸಮಯ ಸಿಕ್ಕರೆ ಧ್ಯಾನ ಮಾಡುತ್ತಾಳೆ, ಪುಸ್ತಕಗಳನ್ನು ಓದುತ್ತಾಳೆ, ಎಷ್ಟು ಕಡೆಗಳಲ್ಲಿ ತಿರುಗಿ ತರಗತಿಗಳನ್ನು ಹೇಳುತ್ತಿದ್ದಾಳೆ.

ಆರಂಭದಲ್ಲಿ ಅವಳು ನನ್ನಿಂದಾಗದು ನೀವು ಹೇಳಿಕೊಳ್ಳಿ ಎನ್ನುತ್ತಿದ್ದಳು. ಈಗ ಹಾಗಲ್ಲ, ನಾನೇ ಹೇಳುತ್ತೇನೆಂದು ನನಗೆ ಸ್ಪರ್ಧೆಗೆ ಬರುತ್ತಾಳೆ. ಆಕೆಯಲ್ಲಿ ಅಷ್ಟು ಬದಲಾವಣೆ ಬಂದಿದೆ. ಎಲ್ಲಿಗಾದರೂ ಹೋಗು ಎಂದರೆ ನಾನೆಲ್ಲಿ ಹೋಗುತ್ತೇನೆ, ನಾನು ಹೋಗಲಾರೆ ಎನ್ನುತ್ತಿದ್ದಳು, ಈಗ ನನಗಿಂತ ಹೆಚ್ಚು ತಿರುಗುತ್ತಿದ್ದಾಳೆ. ಈ ಬದಲಾವಣೆ ನನ್ನಲ್ಲಿ ಆಶ್ಚರ್ಯವನ್ನುಂಟು ಮಾಡುತ್ತಿದೆ.

ಅಂದರೆ ಇದು ಯಾರಿಗಾದರೂ ಸಾಧ್ಯವಾಗುತ್ತದೆ, ಆದ್ದರಿಂದ ಕನಿಷ್ಠ ಮೊದಲು ಬುದ್ಧಿ ವಿಕಸನ ಮಾಡಿಕೊಳ್ಳಿ. ಮರಣಿಸಿದ ನಂತರ ನಡೆಯುವುದನ್ನು ಕುರಿತು ಅನುಭವ

ಪೂರ್ವಕವಾಗಿ ತಿಳಿದವರು ಎಷ್ಟೋ ವಿಷಯಗಳನ್ನು ಹೇಳಿದ್ದಾರೆ. ಪತ್ರೀಜಿಯವರೂ ಹೇಳಿದ್ದಾರೆ, ನಾನೂ ಕೂಡಾ ಹೇಳುತ್ತಿದ್ದೇನೆ, ನೀವು ಈ ರೀತಿಯಾಗಿ ಕೂಡ ತಿಳಿದುಕೊಳ್ಳಬಲ್ಲಿರಿ.

ಯಾವಾಗಾದರೆ ನೀವು ಮರಣಿಸಿದ ನಂತರ ಏನು ನಡೆಯುತ್ತದೆಂದು ತಿಳಿದು ಕೊಳ್ಳುತ್ತೀರೋ **'ಅಲ್ಲಿಯವರೆಗೆ ಜೀವಿಸಿದ ವಿಧಾನ ಬದಲಾಗಿಬಿಡುತ್ತದೆ, ನಿಮಗೆ ಅಂದರೆ ಆತ್ಮಕ್ಕೆ ಲಾಭವನ್ನುಂಟು ಮಾಡುವ ಕೆಲಸಗಳನ್ನೇ ಮಾಡುತ್ತೀರಿ'.**

ಈ ಕೆಲಸಗಳನ್ನೆಲ್ಲಾ ಮಾಡುವುದರಿಂದ ನೀವು ಬಹಳ ಉನ್ನತ ಲೋಕಗಳಿಗೆ ಸೇರಿಕೊಳ್ಳುತ್ತೀರಿ, ಅದು ನಿಮಗೆ ಎಷ್ಟೋ ತೃಪ್ತಿಯನ್ನು ಕೊಡುತ್ತದೆ. ಓ, ನಾನು ಮಾಡಬೇಕಾದ ಕೆಲಸಗಳನ್ನೇ ಮಾಡಿದೆನು, ಅದಕ್ಕೆ ಸೇರಬೇಕಾದ ಲೋಕಗಳಿಗೆ ನಾನು ಸೇರಿಕೊಂಡೆನು ಎಂದು ಎಷ್ಟೋ ಸಂಭ್ರಮಿಸುತ್ತೀರಿ, ಆಗ ನಿಮಗೆ ಸಾವೂ ಸಂಭ್ರಮವಾಗುತ್ತದೆ.

ಅದಕ್ಕೆ ಆ ಜ್ಞಾನವಿರುವವರಿಗೆ ಹುಟ್ಟು ಸಂಭ್ರಮವೇ, ಸಾವು ಸಂಭ್ರಮವೇ ಎಂದು ಪತ್ರೀಜಿಯವರು ಹೇಳಿದ್ದಾರೆ. ನೀವು ಜೀವಿಸಿರುವಾಗ ಆತ್ಮಕ್ಕೆ ಲಾಭವನ್ನು ಉಂಟು ಮಾಡುವ ಕೆಲಸಗಳನ್ನು ನೀವು ಮಾಡಿಕೊಂಡು ಹೋಗುವುದಕ್ಕೆ ಕೂಡಾ ಸಿದ್ಧವಾಗಿರುತ್ತೀರಿ, ಸಹಾಯಕರು ಬಂದರೆ ಅವರ ಜೊತೆ ಕೂಡ ಸಂತೋಷದಿಂದ ಹೋಗಿಬಿಡುತ್ತೀರಿ. ಯಾರಾಗಲಿ ಸರಿ, ಸತ್ತ ನಂತರ ಲಾಭ ಉಂಟಾಗಬೇಕು ಅಂತಹವರು ಶ್ರೇಷ್ಠರು, ಅವರು ಅದೃಷ್ಟವಂತರು.

ಇದು ಅರಿವಾದಾಗ ಅಂದರೆ ಆ ಲೋಕಗಳಿಗೆ ಹೋಗುವುದೇ ಅಲ್ಲ, ಅಲ್ಲಿಯೂ ಕೂಡಾ ಸಮಯವನ್ನು ವ್ಯರ್ಥ ಮಾಡರು. ನಂತರ ತಾನು ಮಾಡುವುದರ ಕುರಿತು ಆಲೋಚಿಸುತ್ತಾ ಅನುಕೂಲವಾದಂತಹ ಜನ್ಮವನ್ನೂ ಕೂಡಾ ಬೇಗನೆ ತೆಗೆದುಕೊಳ್ಳುತ್ತಾರೆ. ಭೂಮಿಯ ಮೇಲೆ ಬಂದು ಇನ್ನೂ ಸಾಧಿಸಬೇಕಾದದ್ದನ್ನು ಸಾಧಿಸುವ ಪ್ರಯತ್ನ ಮಾಡುತ್ತೀರಿ, ಇದೆಲ್ಲಾ ಲಾಭವೇ. ಆದ್ದರಿಂದ ಸಹಾಯಕರ ಕೂಡಾ ಹೋಗಿ ಬಿಡುವುದುರಿಂದ ಇವರು ಕೆಲವು ನೂರುಗಳಲ್ಲ, ಸಾವಿರ ವರ್ಷಗಳ ಸಮಯವನ್ನು ವ್ಯರ್ಥವಾಗದಂತೆ ಮಾಡಿಕೊಳ್ಳುತ್ತಾರೆ. ಬಹಳಷ್ಟು ಜನ ನೂರು ವರ್ಷಗಳು ವ್ಯರ್ಥವಾದರೆ ಏನಿದೆ? ಸಾವಿರ ವರ್ಷಗಳು ವ್ಯರ್ಥವಾದರೆ ಏನಿದೆ? ಎಂದು ಅಂದು–ಕೊಳ್ಳಬಹುದು. ಆದರೆ ಪತ್ರೀಜಿಯವರು ಒಂದು 10ನೇ ಕ್ಲಾಸ್ ಪೂರ್ತಿ ಮಾಡುವುದಕ್ಕೆ ಐದು ವರ್ಷ ತೆಗೆದುಕೊಂಡರೆ ಅದು ಬುದ್ಧಿಹೀನತೆ ಎಂದು ಹೇಳುತ್ತಾರೆ.

ಹಾಗೆಯೇ ಜೀವನದಲ್ಲಿ ಬಹಳ ಜನ ಮೂರ್ಖತ್ವದಿಂದ, ಅಜ್ಞಾನದಿಂದ, ಬುದ್ಧಿ ಹೀನತೆಯಿಂದ ಎಷ್ಟೋ ನೂರಾರು, ಸಾವಿರಾರು ವರ್ಷಗಳನ್ನು ವ್ಯರ್ಥ

ಮಾಡಿಕೊಳ್ಳುತ್ತಾರೆ. ಆದರೆ ಯಾರಾದರೆ ತಮ್ಮ ಲಕ್ಷ್ಯವನ್ನು ಬೇಗನೆ ಪೂರ್ತಿ ಮಾಡಿಕೊಳ್ಳುತ್ತಾರೋ ಅವರು ಶ್ರೇಷ್ಠರು, ಅವರು ಅದೃಷ್ಟವಂತರು. ಇಲ್ಲಿ ಇರುವವರಾಗಲಿ, ಇಲ್ಲಿ ಇರುವವುಗಳಾಗಲಿ ಯಾವುದೂ ಶಾಶ್ವತವಲ್ಲ.

"ಯಾರೊಂದಿಗೂ, ಯಾವುದರೊಂದಿಗೂ ಆತ್ಮರಾದ ನಿಮಗೆ ಸಂಬಂಧವಿಲ್ಲ." ಯಾವಾಗಲೂ ಇದು ದೃಷ್ಟಿಯಲ್ಲಿರಬೇಕು.

ನನಗೆ ಈ ಸಮಸ್ಯೆ ಬಂದಿದೆ? ಆ ಸಮಸ್ಯೆ ಬಂದಿದೇರಿ ಅಂದರೆ ಯಾರೇನು ಮಾಡುತ್ತಾರೆ? ನೀನು ಯಾರೋ ತಿಳಿದುಕೋ! **'ಯಾವ ಸಮಸ್ಯೆ ಬಂದರೂ ನಾನು ದೇಹವೆನ್ನುವಂತೆ ಆಲೋಚಿಸಿದರೆ ಒಂದು ರೀತಿಯದಂತಹ ಅಭಿಪ್ರಾಯ ಏರ್ಪಡುತ್ತದೆ. ಆದರೆ ನಾನು ಆತ್ಮವೆನ್ನುವಂತೆ ಆಲೋಚಿಸಿದರೆ ಅದಕ್ಕೆ ನಿಜವಾದ ಪರಿಷ್ಕಾರ ತಿಳಿಯುತ್ತದೆ'**.

ಎಲ್ಲರೂ ಮರಣಿಸುತ್ತಾರೆ, ಯಾರಾಗಲಿ ಎಲ್ಲರನ್ನು, ಎಲ್ಲವನ್ನು ಬಿಟ್ಟು ಹೋಗಬೇಕಾದದ್ದೇ. ಈ ಜೀವನ ಪ್ರಯಾಣ ರೈಲು ಪ್ರಯಾಣದಂತಹದು. ನನ್ನದು ಅಂದುಕೊಂಡಂತಹ ಸೀಟು, ಊರು ಮುಟ್ಟಿದೊಡನೆಯೇ ಮಾತನಾಡದಂತೆ ಬಿಟ್ಟು ಇಳಿದು ಹೋಗುತ್ತಾರೆ, ಊರು ಬರುತ್ತಿರುವಾಗಲೇ ಇಳಿಯುವುದಕ್ಕೆ ಸಿದ್ಧವಾಗಿರುತ್ತಾರೆ.

ಹಾಗೆಯೇ ನೀವು ಕೂಡಾ ಸಾವು ಬಂದರೆ ಭಯಪಡದೇ ಹೋಗುವುದಕ್ಕೆ ಸಿದ್ಧವಾಗಿರಬೇಕು. ಪತ್ರೀಜಿಯವರು ಸಾವಿಗೆ ಯಾವಾಗಲೂ ಸಿದ್ಧವಾಗಿರಬೇಕು ಎನ್ನುತ್ತಾರೆ. ಈ ಲೋಕದಲ್ಲಿ ಇರುವವುಗಳನ್ನು ಬಿಡುವುದಕ್ಕೆ ಇಷ್ಟ ಪಡದಿದ್ದರೆ ಏನಾಗುತ್ತದೆ? ಕರೆದುಕೊಂಡು ಹೋಗುವುದಕ್ಕೆ ಬಂದವರು ಹೋಗಿ ಬಿಡುತ್ತಾರೆ, ನಂತರ ಇದೆ ಫಜೀತಿ.

ಊರು ದಾಟಿ ಹೋದ ಮೇಲೆ ರೈಲಿನಲ್ಲಿಯೇ ಕುಳಿತರೆ, ಆ ಸೀಟಿನವರು ಇನ್ನೊಬ್ಬರು ಬರುತ್ತಾರೆ. ನಿಮ್ಮನ್ನು ಕುಳಿತುಕೊಳ್ಳಲು ಬಿಡುವುದಿಲ್ಲ. ನೀವು ಇಳಿಯಬೇಕೆಂದರೂ ಎಲ್ಲಿಯೋ ಎರಡು ಮೂರು ಗಂಟೆಗಳ ನಂತರ ನಿಲ್ಲುತ್ತದೆ ರೈಲು, ಮತ್ತೆ ಅಲ್ಲಿಂದ ಮತ್ತೊಂದು ರೈಲನ್ನು ಹಿಡಿದು ಹಿಂದಕ್ಕೆಬರಬೇಕು, ಎಷ್ಟು ಫಜೀತಿಯೋ ನೋಡಿರಿ.

ನಿಮ್ಮನ್ನು ಕರೆದುಕೊಂಡು ಹೋಗಲು ಬಂದ ಸಹಾಯಕರೊಡನೆ ಹೋಗದಿದ್ದರೆ ನಿಮ್ಮ ಬದುಕು ಅಷ್ಟೇ, ಏನು ಮಾಡಬೇಕೋ ತಿಳಿಯದು, ಎಲ್ಲಿಗೆ ಹೋಗ ಬೇಕೋ ತಿಳಿಯದು. ಆ ಸೀಟಿನ ಮೇಲೆ ಮಮಕಾರದಿಂದ ಹಾಗೇ ಕುಳಿತು ಬಿಟ್ಟರೆ ನಿಮ್ಮ ಬದುಕು ಹೇಗಿರುತ್ತದೋ......, ನನ್ನ ಮಗಳು, ನನ್ನ ಮಗ, ನನ್ನ ಆಸ್ತಿಗಳು ಎಂಬ ಮಮಕಾರದಿಂದ ಭೂಮಿಯ ಮೇಲೆ ಪ್ರೇತಾತ್ಮರಾಗಿ ಇದ್ದು ಬಿಟ್ಟರೆ ನಿಮ್ಮ ಬದುಕು ಅಷ್ಟೇ. ಬುದ್ಧಿವಂತನಾದ

ಪ್ರಯಾಣಿಕನಂತೆ ಇರಬೇಕು, ನೀವು ಒಂದೇ ಭಾರತ್ ರೈಲನ್ನು ನೋಡಿರಿ. ಸಮಯ ಆದ ತಕ್ಷಣ ಗಂಟೆ ಬಾರಿಸುತ್ತಾನೆ, ಬಾಗಿಲುಗಳೆಲ್ಲಾ ಮುಚ್ಚಿ ಬಿಡುತ್ತವೆ. ಹಾಗೆಯೇ ಸಹಾಯಕರೂ ಕೂಡಾ 11 ದಿನಗಳೂ ಹೇಳುತ್ತಾರೆ, ಕೇಳದಿದ್ದರೆ ಅವರ ದಾರಿಗೆ ಅವರು ಹೋಗಿ ಬಿಡುತ್ತಾರೆ, ನೀವು ಮೇಲಿನ ಲೋಕಗಳಿಗೆ ಹೋಗುವ ಆತ್ಮದ ಬಾಗಿಲುಗಳು ಮುಚ್ಚಿ ಹೋಗುತ್ತವೆ.

ಆದ್ದರಿಂದ ರೈಲು ಪ್ರಯಾಣವನ್ನು ನೆನಪಿಗೆ ತಂದುಕೊಳ್ಳಿ. ಇದು ಜೀವನ ಪ್ರಯಾಣ, ಅದು ರೈಲು ಪ್ರಯಾಣ, ಜೀವನ ಪ್ರಯಾಣದಲ್ಲಿ ಶಾಶ್ವತವಲ್ಲದವುಗಳೊಂದಿಗೆ ಜೀವಿಸುತ್ತಿದ್ದೀರಿ, ಮಾಯಾ ಪ್ರಪಂಚದಲ್ಲಿ ಜೀವಿಸುತ್ತಿದ್ದೀರಿ, ಸಂಬಂಧವಿಲ್ಲದವರೊಂದಿಗೆ ಜೀವಿಸುತ್ತಿದ್ದೀರಿ.

ನೋಡಿರಿ ರೈಲು ಪ್ರಯಾಣದಲ್ಲಿ ಸ್ವಲ್ಪ ದೂರ ಪ್ರಯಾಣ ಮಾಡಿದ ಮೇಲೆ ಎದುರಿಗೆ ಕುಳಿತವರೊಂದಿಗೆ ಸ್ನೇಹವೇರ್ಪಡುತ್ತದೆ. ನೀವು ತಂದುಕೊಂಡವನ್ನು ಅವರಿಗೆ ಕೊಡುತ್ತೀರಿ, ಅವರು ತಂದುಕೊಂಡವನ್ನು ನಿಮಗೆ ಕೊಡುತ್ತಾರೆ, ಆ ಸ್ವಲ್ಪ ಹೊತ್ತಿನಲ್ಲಿಯೇ ಇಬ್ಬರಿಗೂ ಎಷ್ಟೋ ಅನುಬಂಧವೇರ್ಪಡುತ್ತದೆ.

ನಿಮ್ಮ ಸ್ಟೇಷನ್ನು ಬಂದಿದೆ, ಅವರನ್ನು ಬಿಡಬೇಕೆ? ಬೇಡವೆ? ಬಿಟ್ಟು ಬಿಡುತ್ತೀರಲ್ಲ? ಬಿಟ್ಟು ಬಿಡದಿದ್ದರೆ ಏನಾಗುತ್ತದೆ? ಆಲೋಚಿಸಿರಿ. ಇದೂ ಅಷ್ಟೇ, ಆ ಹೆಂಡತಿ, ಗಂಡ, ಮಕ್ಕಳು, ಬಂಧುಗಳೊಂದಿಗೆ ಈ ಮಧ್ಯದಲ್ಲಿ ಅನುಬಂಧವೇರ್ಪಡುತ್ತದೆ, ಆದರೆ ಬಿಡಬೇಕಾದದ್ದೇ. ನನ್ನವರು ಎಂದುಕೊಂಡರೆ ಆಗುವುದಿಲ್ಲ, ಊರು ಒಂದೊಡನೆ ಅಂದರೆ ಮರಣ ಬಂದಡೊನೆ ಅವರನ್ನು ಬಿಟ್ಟು ಹೋಗಬೇಕಾದ್ದೇ.

## ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ "ಶರೀರದ ಅಗತ್ಯಗಳನ್ನು ನೋಡಿಕೊಳ್ಳುತ್ತಾ, ಇರುವ ಹಣ, ಸಮಯ, ಶಕ್ತಿ, ಜೀವನ ಎಲ್ಲಾವನ್ನು ಆತ್ಮಲಾಭಕ್ಕಾಗಿ, ಆತ್ಮೋನ್ನತ್ತಿಗಾಗಿ ಉಪಯೋಗಿಸುತ್ತಾರೆ".

.

ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ ಅದಕ್ಕೂ ಮೊದಲು ಇದ್ದಂತೆ ಜೀವನವಿರುವುದಿಲ್ಲ. ಜೀವನವು ಪೂರ್ತಿಯಾಗಿ ಬದಲಾಗಿಬಿಡುತ್ತದೆ. ಅಷ್ಟೇ ಅಲ್ಲ ಹೋಗುವ ಸಮಾರಂಭಗಳು, ಪಾರ್ಟಿಗಳು, ಹೋಗುವ ಕಾರ್ಯಕ್ರಮಗಳು ಪೂರ್ತಿಯಾಗಿ ಬದಲಾಗಿಬಿಡುತ್ತವೆ.

ಕಾರಣ ಅಲ್ಲಿಯವರೆಗೆ ದೇಹಕ್ಕಾಗಿ, ದೇಹದ ಲಾಭಕ್ಕಾಗಿ ಮಾಡುತ್ತಿದ್ದೀರಿ, ಮರಣಿಸಿದ ನಂತರ ಆತ್ಮ ನಾನು ಎಂದು ತಿಳಿದುಕೊಳ್ಳುವುದರಿಂದ ಆತ್ಮದ ಲಾಭಕ್ಕಾಗಿಯೇ ಮಾಡುತ್ತೀರಿ.

ಆತ್ಮ ಲಾಭಕ್ಕೆ ಅಗತ್ಯವಾದ ಜ್ಞಾನವನ್ನು ಸಂಪಾದಿಸಿಕೊಳ್ಳುವುದಕ್ಕೆ ಕೃಷಿ ಮಾಡುತ್ತೀರಿ. ಮಾಡುವ ಖರ್ಚುಗಳು, ದಾನಗಳು, ಧರ್ಮ ಕಾರ್ಯಗಳು ಪೂರ್ತಿಯಾಗಿ ಬದಲಾಗುತ್ತವೆ. ಎಲ್ಲವು ಆತ್ಮಕ್ಕೆ ಲಾಭ ತರುವಂತ ಕೆಲಸಗಳನ್ನೇ ಮಾಡುತ್ತೀರಿ.

ಹಾಗೆಯೇ ಅದಕ್ಕೂ ಮೊದಲು ಯಾವುದಕ್ಕಾಗಿ ತಾಪತ್ರಯಪಟ್ಟಿರೋ! ಅವು ಯಾವುವು ಕೂಡಾ ಬರುವುದಿಲ್ಲವೆಂಬ ಸಂಗತಿಯು ತಿಳಿಯುತ್ತದೆ. ಆದ್ದರಿಂದ ಅಂತಹವುಗಳಿಗೆ ಪೂರ್ತಿಯಾಗಿ ಪ್ರಾಮುಖ್ಯತೆಯನ್ನು ಕಡಿಮೆ ಮಾಡುತ್ತೀರಿ. ಆಗ ಅಂದುಕೊಳ್ಳುತ್ತೀರಿ, ಏನು ಹೀಗೆ ಬದಲಾಗಿ ಬಿಟ್ಟೆ ! ನನ್ನ ಜೀವನ ಇದಕ್ಕೂ ಮೊದಲು ಇದ್ದಂತ ಇಲ್ಲ, ಪೂರ್ತಿಯಾಗಿ ಭಿನ್ನವಾಗಿ ಇದೆಯಲ್ಲವೆಂದುಕೊಳ್ಳುತ್ತೀರಿ. ಎಲ್ಲರಿಗೂ ಹುಚ್ಚರಂತೆ ಕಾಣಿಸುತ್ತೀರಿ.

ಅದಕ್ಕೆ ಕಬೀರ್ ಏನು ಹೇಳಿದ್ದಾರೆಂದರೆ? ಮರಣಿಸುವ ಮೊದಲೇ ಮರಣಿಸಿದರೆ ಅಮರರಾಗುತ್ತಾರೆ ಎಂದಿದ್ದಾರೆ.

** ** **

## ಮರಣಿಸುವ ಮೊದಲೇ ಮರಣಿಸಿದರೆ
## 'ಎಷ್ಟು ಹೊತ್ತು ಆತ್ಮನಾದ ತಾನು ಮಾಡಬೇಕಾದ ಕೆಲಸದ ಮೇಲೆಯೇ ದೃಷ್ಟಿಯಿರುತ್ತದೆ, ಅಂದರೆ ಲಕ್ಷ್ಯದ ಮೇಲೆ ದೃಷ್ಟಿ ಇರುತ್ತದೆ"

ಏಕೆಂದರೆ ಮರಣಿಸಿದ ನಂತರ ಏನು ನಡೆಯುತ್ತದೋ ಅದು ಜ್ಞಾನವಿರುವವರು, ಬುದ್ಧಿ ಚೆನ್ನಾಗಿ ವಿಕಸಿಸಿದವರು ತಿಳಿದುಕೊಳ್ಳಬಲ್ಲರು. ಅವರಿಗೆ ತಾನು ಮೇಲಿನ ಲೋಕಗಳಿಂದ ಬಂದಿದ್ದೇನೆ ಎನ್ನುವ ತಿಳುವಳಿಕೆ ಇರುತ್ತದೆ. ಮೇಲಿನ ಲೋಕಗಳಿಂದ ಬರುವಾಗ ಒಂದು ಪ್ರಣಾಳಿಕೆಯನ್ನು ಹಾಕಿಕೊಂಡಿದ್ದೇನೆ, ಆತ್ಮಕ್ಕೆ ಲಾಭವನ್ನುಂಟು ಮಾಡುವ ಕೆಲಸಗಳನ್ನು ಭೂಮಿಯ ಮೇಲೆ ಮಾಡಿ, ಪೂರ್ಣಾತ್ಮ ಸ್ಥಿತಿಗೆ ಸೇರಿಕೊಳ್ಳುವುದೇ ತನ್ನ ಲಕ್ಷ್ಯವೆಂದು ತಿಳಿದುಕೊಳ್ಳುತ್ತಾರೆ.

ಅಷ್ಟೇ ಅಲ್ಲ ಇವರು ಮರಣಿಸಿದ ನಂತರ ಆ ಮಕ್ಕಳು ಮಾಡುವ ಕರ್ಮಕಾಂಡಗಳಿಂದಾಗಲಿ, ಅವರು ಇಡುವ ಪಿಂಡಗಳಿಂದಾಗಲಿ ಏನು ಪ್ರಯೋಜನ ಇರುವುದಿಲ್ಲ ಎಂಬುದು ಚೆನ್ನಾಗಿ ಅರ್ಥವಾಗುತ್ತದೆ. ಅವರು ಮಾಡಿದ ಕರ್ಮಗಳನ್ನು ಆಧರಿಸಿ, ಅವರು ಸಂಪಾದಿಸಿಕೊಂಡ ಜ್ಞಾನವನ್ನಾಧರಿಸಿಯೇ ಅವರನ್ನು ಕರೆದುಕೊಂಡು

ಹೋಗುವ ಲೋಕಗಳು ಆಧಾರವಾಗಿರುತ್ತವೆ. ಆದ್ದರಿಂದ ಎಷ್ಟು ಉನ್ನತವಾದ ಲೋಕಗಳಿಗೆ ಸೇರಿಕೊಂಡರೆ ಅವರು ಅಷ್ಟು ಶ್ರೇಷ್ಠರಾಗುತ್ತಾರೆಂಬ ತಿಳುವಳಿಕೆಯುಂಟಾಗುತ್ತದೆ.

ನಾನು ದೇಹವೆಂಬ ಭಾವದಲ್ಲಿದ್ದವರು ದೇಹವನ್ನು ಸುಖವಾಗಿಡುವುದಕ್ಕಾಗಿ ರಾತ್ರಿ–ಹಗಲು ಕಷ್ಟಪಟ್ಟು ಹಣ ಸಂಪಾದಿಸಿ, ಮತ್ತೆ ಆ ಹಣದಿಂದ ಸುಖಗಳನ್ನು ಜೋಡಿಸಿಕೊಂಡು ಆ ಸುಖವನ್ನು ಅನುಭವಿಸುತ್ತಾ ಇರುತ್ತಾರೆ.

ಆದರೆ ಯಾವಾಗಾದರೆ ಮರಣಿಸಿದ ನಂತರ ನಡೆಯುವುದು ತಿಳಿಯುತ್ತದೋ ತಾನು ಮಾಡಬೇಕಾದ ಕೆಲಸ ಅದು ಅಲ್ಲ, ಆತ್ಮನಾದ ತಾನು ಸಂಪಾದಿಸಿಕೊಳ್ಳಬೇಕಾದದ್ದು ಜ್ಞಾನವು ಎನ್ನುವುದು ಅರ್ಥವಾಗುತ್ತದೆ. ಮತ್ತೆ ಆ ಜ್ಞಾನವು ಯಾವಾಗ ಲಭಿಸುತ್ತದೆಂದರೆ? ಯಾರಾದರೆ ಜ್ಞಾನವನ್ನು ಹೊಂದಬೇಕೆಂದು ಹಂಬಲಿಸುತ್ತಾರೋ ಅವರ ಜೀವನದಲ್ಲಿ ಖಂಡಿತವಾಗಿ ಒಬ್ಬ ಸದ್ಗುರು ಬರುತ್ತಾನೆ.

ನನ್ನ ಜೀವನದಲ್ಲಿಯೂ ಅದೇ ನಡೆಯಿತು. ನನಗೆ ಹೆಚ್ಚು ಕಡಿಮೆ 53 ವರ್ಷಗಳವರೆಗೆ ಧನ ಸಂಪಾದನೆಯ ಮೇಲೆಯೇ ಹೆಚ್ಚು ದೃಷ್ಟಿ ಇತ್ತು. ಆದರೆ ಏಕೋ ತಿಳಿಯದು, ಪತ್ರಿಜೀಯವರು ಪರಿಚಯವಾಗುವುದಕ್ಕೆ ಮೊದಲು ಒಂದೆರಡು ವರ್ಷಗಳ ಹಿಂದೆಯಿಂದ ನಾನು ಎಲ್ಲಿಗೆ ಹೋದರೂ, ಅಂದರೆ ಹಿಮಾಲಯಗಳು, ಹರಿದ್ವಾರ, ಋಷಿಕೇಶ್‌ಗಳಲ್ಲಿಗೆ ಹೋದರೂ ಅಲ್ಲಿರುವ ಧ್ಯಾನ ಕೇಂದ್ರಗಳನ್ನು ಕುರಿತು, ಧ್ಯಾನ ಹೇಳುವ ಗುರುಗಳ ಕುರಿತು ಅನ್ವೇಷಿಸುತ್ತಿದ್ದೆನು.

ನನ್ನ ಮೇಡಂಗೆ ಅರ್ಥವಾಗಲಿಲ್ಲ, ಈತನು ಇಂತಹವುಗಳ ಕಡೆಗಳೆಲ್ಲ ತಿರುಗುತ್ತಿದ್ದಾನೇಕೆ ಎಂದುಕೊಳ್ಳುತ್ತಿದ್ದಳು. ಹಾಗೆ ತಿರುಗುತ್ತಾ, ತಿರುಗುತ್ತಾ ಒಟ್ಟಾರೆ ಭೀಮವರಂನಲ್ಲಿಯೇ ನಾನು ವ್ಯಾಪಾರ ಮಾಡುವ ಸ್ಥಳದಲ್ಲಿರುವಾಗ ಒಬ್ಬಾಕೆ ಬಂದು ಪತ್ರಿಜೀಯವರು ಎಂಬಾತನು ಧ್ಯಾನ ಹೇಳುತ್ತಾರೆ. ನಿಮ್ಮ ಧ್ಯಾನ ಕೇಂದ್ರದಲ್ಲಿ ಒಂದು ತರಗತಿ ಏರ್ಪಾಟು ಮಾಡಿರಿ ಎಂದು ಕೇಳಿದಳು. ಆವಾಗಲೇ ನಮಗೆ ಧ್ಯಾನಕೇಂದ್ರವಿತ್ತು.

ಆಣ ಒಂದನ್ನು ಕೇಳಿದೆ ಹಣವನ್ನೇನಾದರೂ ತೆಗೆದುಕೊಳ್ಳುತ್ತಾರಾ? ಇಲ್ಲದಿದ್ದರೆ ಬಂದವರ ಹತ್ತಿರ ಹಣವನ್ನು ಸಂಗ್ರಹ ಮಾಡುತ್ತಾರಾ ಎಂದರೆ? ಏನು ಮಾಡುವುದಿಲ್ಲ, ಉಚಿತವಾಗಿ ಹೇಳುತ್ತಾರೆ ಎಂದಳು. ಆಗ ಖಂಡಿತವಾಗಿ ಏರ್ಪಾಡು ಮಾಡುತ್ತೇನೆಂದೆ, ಮತ್ತೆ ಆತನು ಯಾರೋ ತಿಳಿಯದು, ಸ್ವಲ್ಪ ಪರಿಚಯ ಮಾಡಿಸು ಎಂದರೆ ಫೋನ್‌ನಲ್ಲಿ ಮಾತನಾಡಿಸಿದಳು. ಆತನೊಂದಿಗೆ ಕೆಲವು ನಿಮಿಷಗಳೇ ಮಾತನಾಡುವುದಾಯಿತು ಆದರೆ ಏಕೋ ತಿಳಿಯದು ಒಳ್ಳೆಯ ಅನುಬಂಧ ಏರ್ಪಟ್ಟಿತು.

ಯಾವಾಗಿನಿಂದಲೋ ಪರಿಚಯ ಇದ್ದವರಂತೆ ಆಕರ್ಷಿತನಾದೆನು. ಆತನು

ತಿರುಪತಿಯಲ್ಲಿ ಇದ್ದಾರೆಂದು ಹೇಳಿದರು. ನಾವು ಅದಕ್ಕೂ ಮೊದಲು ತಿರುಪತಿಯಲ್ಲಿ ಪ್ರಯಾಣದ ಏರ್ಪಾಡು ಮಾಡಿಕೊಂಡಿದ್ದೆವು. ಆದ್ದರಿಂದ ಮರುದಿನ ತಿರುಪತಿಗೆ ಹೋಗಿ ಆತನಿಗಾಗಿ ನೋಡಿದರೆ ಸಿಗಲಿಲ್ಲ. ಆತನ ಶಿಷ್ಯನು ಶಿವಪ್ರಸಾದ್ ಬಳಿಗೆ ಹೋಗಿ ಧ್ಯಾನವನ್ನು ಹೇಗೆ ಮಾಡಬೇಕೋ ತಿಳಿದುಕೊಂಡು, ಅಲ್ಲಿರುವ ಪುಸ್ತಕಗಳು, ಕ್ಯಾಸೆಟ್‌ಗಳೆಲ್ಲವನ್ನೂ ಕೊಂಡುಕೊಂಡೆನು.

ಆ ಕ್ಯಾಸೆಟ್, ಪುಸ್ತಕಗಳನ್ನು ಓದಿ ಬಹಳ ವಿಷಯಗಳನ್ನು ತಿಳಿದುಕೊಂಡೆನು. ಅದಕ್ಕೂ ಮೊದಲು ಎಷ್ಟು ಪುಸ್ತಕಗಳನ್ನು ಓದಿದರೂ ನನಗೆ ತೃಪ್ತಿಕರವಾದಂತಹ ಸಂದೇಶಗಳಾಗಲಿ, ಅವುಗಳಲ್ಲಿಂದ ಉತ್ತರಗಳಾಗಲಿ ಸಿಗಲಿಲ್ಲ. ಯಾವಾಗಾದರೆ ಪತ್ರಿಜೀಯವರ ಪುಸ್ತಕಗಳನ್ನು ಓದಿದೆನೋ ನನಗೆ ಬಹಳ ಆಸಕ್ತಿ ಬಂದಿತು. ನನ್ನ ಸಂದೇಹಗಳು ಬಹುಪಾಲು ನಿವೃತ್ತಿಯಾದವು. ಆಗ ನನಗೆ ಬೇಕಾದದ್ದು ಈ ಗುರುವೇ ಎಂದು ಚೆನ್ನಾಗಿ ಅರ್ಥವಾಯಿತು.

ನಾನು ಆತ್ಮನು ಎನ್ನುವುದು ಅರ್ಥವಾಯಿತು. ಈಗ ನನಗೆ ಬೇಕಾಗಿರುವುದು ಜ್ಞಾನವೆಂದು ಕೂಡಾ ತಿಳಿದುಕೊಂಡೆನು. ಜ್ಞಾನ ಹೇಗೆ ಬರುತ್ತದೆಂದರೆ?

1. ತೀವ್ರ ಸಾಧನೆ ಮಾಡಬೇಕು. ಸಾತ್ವಿಕವಾದ ಶಾಖಾಹಾರವನ್ನು ತೆಗೆದುಕೊಳ್ಳಬೇಕು.

2. ಆತ್ಮ ಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಬೇಕು.

3. ಆತ್ಮಜ್ಞಾನವನ್ನು ಕುರಿತು ಬೋಧಿಸುವ ಸಂದೇಶಗಳನ್ನು ಕೇಳುತ್ತಾ ಇರಬೇಕು.

4. ಈ ಮಾರ್ಗದಲ್ಲಿ ಸೇವೆ ಮಾಡಬೇಕು.

ಆಗಿನಿಂದ ಇಲ್ಲಿಯವರಗೆ ಪತ್ರಿಜೀಯವರು ಹೇಳಿದ ಈ ನಾಲ್ಕನ್ನೂ ಆಚರಿಸುತ್ತಿದ್ದೇವೆ. ಇವೆಲ್ಲಾ ಆಚರಿಸುತ್ತಿರುವುದು, ಎಲ್ಲರಿಗೂ ಬೋಧಿಸುವುದು ಮಾಡಿದೆವು, ಈಗಲೂ ಅದೇ ಮಾಡುತ್ತಿದ್ದೇವೆ.

ಹಣವನ್ನು ಸಂಪಾದಿಸುವಾಗ ಒಂದು ಹೊತ್ತು ಮನೆಯಲ್ಲಿದ್ದರೆ, ಯಾವುದಾದರೂ ಊರಿಗೆ ಹೋದರೂ ವ್ಯಾಪಾರದಲ್ಲಿ ಎಷ್ಟೋ ನಷ್ಟ ಹೋಗುತ್ತೇನೆ ಎಂದು ಹೋಗುವುದಕ್ಕೆ ಇಷ್ಟಪಡುತ್ತಿರಲಿಲ್ಲ, ಯಾವಾಗಲೂ ಅಲ್ಲಿಯೇ ಇದ್ದು ಕಷ್ಟಪಡುತ್ತಿದ್ದೆನು. ಹಾಗೆಯೇ ಈ ಧ್ಯಾನದಲ್ಲಿ ಬಂದ ಮೇಲೆ ಕೂಡಾ ಮನೆಯಲ್ಲಿ ಕುಳಿತುಕೊಳ್ಳಬೇಕೆಂದರೆ, ನಾನು ಎಷ್ಟೋ ನಷ್ಟ ಹೊಂದುತ್ತಿದ್ದೇನೆ, ನಾನು ಜ್ಞಾನವನ್ನು ಸಂಪಾದಿಸಿಕೊಳ್ಳಲಾರದೆ ಹೋಗುತ್ತಿದ್ದೇನೆಂದು ಒಳಗೆ ಆತ್ಮ ಘೋಷಿಸುತ್ತಿತ್ತು.

ತಕ್ಷಣವೇ ಬ್ಯಾಗ್ ತೆಗೆದುಕೊಂಡು ಯಾವುದೋ ಒಂದು ಕಡೆಗೆ ಹೊರಟು ಬಿಡುತ್ತಿದ್ದೆ. ಆಗಾಗ ಪತ್ರಿಜೀಯವರು, ಸುಮ್ಮನೆ ಅಷ್ಟೊಂದು ತಿರುಗುವುದಲ್ಲಯ್ಯ! ಶರೀರಕ್ಕೆ

ಕೂಡಾ ವಿಶ್ರಾಂತಿ ಕೊಡಬೇಕು ಎನ್ನುತ್ತಿದ್ದರು. ಒಂದೊಂದು ಬಾರಿ ಪತ್ರಿಜೀಯವರು ನಮ್ಮ ಮನೆಗೇ ಬರುತ್ತಿದ್ದರು. ಆತನು ನಮ್ಮ ಮನೆಗೆ ಬಂದರೂ ಕೂಡಾ ನಾನು ನನ್ನ ಪ್ರೋಗ್ರಾಂಗಳಲ್ಲಿ ಇರುತ್ತಿದ್ದೆನು.

ಒಂದೊಂದು ಬಾರಿ ಪತ್ರಿಜೀಯವರು ಕಾರ್ಯಕ್ರಮಗಳನ್ನು ರದ್ದು ಮಾಡುವುದನ್ನು ಕೂಡಾ ಕಲಿತುಕೊಳ್ಳಬೇಕಯ್ಯ ಎಂದರು. ಏಕೆಂದರೆ ಎಲ್ಲಿಗಾದರೂ ನಾನು ನಿಶ್ಚಯವಾದರೆ, ಅದು ಎಷ್ಟು ಕಷ್ಟವಾದರೂ, ಎಂತಹ ಪರಿಸ್ಥಿತಿಯಲ್ಲಿ ಹೋಗುತ್ತಿದ್ದೆನು, ರದ್ದು ಮಾಡುತ್ತಿರಲಿಲ್ಲ. ಏಕೆಂದರೆ ಅವರನ್ನು ನಿರುತ್ಸಾಹಪಡಿಸಬಾರದೆಂದು, ಮಾತು ಕೊಟ್ಟರೆ ಖಂಡಿತವಾಗಿ ಹೋಗಬೇಕೆಂದು ಅಂದು ಕೊಳ್ಳುತ್ತಿದ್ದೆನು. ಈ ರೀತಿಯಾಗಿ ಮಾಡಬೇಕಾದ ಕೆಲಸದ ಮೇಲೆ ನನ್ನ ಲಕ್ಷ್ಯದ ಮೇಲೆ ದೃಷ್ಟಿ ಇಡುತ್ತಿದ್ದೆನು.

ಇದು ಯಾವಾಗ ನಡೆಯುತ್ತದೆ ಎಂದರೆ? ಮರಣಿಸಿದ ನಂತರ ನಡೆಯುವುದು ಜೀವಿಸಿರುವಾಗಲೇ ತಿಳಿದುಕೊಂಡವರು ಮಾಡಬಲ್ಲರು. ಕಾರಣ ಜ್ಞಾನವನ್ನು ಹೊಂದಿದರೆ ಇಷ್ಟು ಲಾಭವಿರುತ್ತದೆಂದು ತಿಳಿದಿದೆಯಾದ್ದರಿಂದ! ವ್ಯಾಪಾರ ಮಾಡಿಕೊಂಡಿದ್ದ ನಾನು ಇಷ್ಟು ಜ್ಞಾನವನ್ನು ಹೇಗೆ ಸಂಪಾದಿಸಿದೆನು? ಇಷ್ಟು ವಿಷಯಗಳನ್ನು ಹೇಗೆ ತಿಳಿದುಕೊಳ್ಳಬಲ್ಲವನಾದೆ? ಇಷ್ಟು ಪುಸ್ತಕಗಳನ್ನು ಹೇಗೆ ಬರೆದೆನು? ಇಷ್ಟು ಸಂದೇಶಗಳನ್ನು ಹೇಗೆ ಕೊಡುತ್ತಿದ್ದೇನೆ? ಅಂದರೆ ನಾನು ಯಾರು ಎಂದು ತಿಳಿದುಕೊಂಡಿದ್ದೇನೆಯಾದ್ದರಿಂದ, ತಿಳುವಳಿಕೆ ಮಾಡಿಕೊಂಡಿದ್ದೇನೆಯಾದ್ದರಿಂದ ಈ ಕೆಲಸಗಳನ್ನೆಲ್ಲಾ ಮಾಡಬಲ್ಲವನಾಗಿದ್ದೇನೆ.

ನಮ್ಮ ಮಕ್ಕಳ ಅಭಿರುಚಿಗಳು, ಹವ್ಯಾಸಗಳು ಬೇರೆಯೇ ಇರುತ್ತವೆ, ನಮ್ಮ ಅಭಿರುಚಿಗಳು ಬೇರೆ ಇರುತ್ತವೆ. ಅವರೆಲ್ಲರಿಗೆ ಪ್ರವಾಸ ಹೋಗುವುದು, ಸಂತೋಷಪಡುವುದು, ತರತರಹ ತಿನ್ನುವ ಖುಷಿ! ನಮಗೆ ನಿಮ್ಮೊಂದಿಗೆ ಕಳೆಯುವುದೇ ಖುಷಿ, ಜ್ಞಾನವನ್ನು ಬೋಧಿಸುವುದು, ಪುಸ್ತಕಗಳನ್ನು ಓದುವುದು, ಪುಸ್ತಕಗಳನ್ನು ಬರೆಯುವುದು, ಆ ಪುಸ್ತಕಗಳನ್ನು ಬಿಡುಗಡೆ ಮಾಡುವುದು, ನಮಗೆ ಸಂಭ್ರಮ.

ಈ ರೀತಿಯಾಗಿ ಎಷ್ಟೋ ಸಾವಿರ ಜನರಿಗೆ, ಲಕ್ಷ ಜನರಿಗೆ ಈ ಜ್ಞಾನವನ್ನು ಕೊಡಬಲ್ಲವರಾಗಿದ್ದೇವೆ. ಆ ತೃಪ್ತಿಯೇ ಬೇರೆ ರೀ! ಅದನ್ನು ಅನುಭವಿಸಿದರೆ ತಿಳಿಯುತ್ತದೆ. ಒಬ್ಬೊಬ್ಬರಿಗೆ ಒಂದೊಂದು ಸಂಭ್ರಮ. ನೀನು ಆತ್ಮವೆಂದು ತಿಳಿದುಕೊಂಡಾಗ ನಿನ್ನ ಖುಷಿಗಳು, ನಿನ್ನ ಜವಾಬ್ದಾರಿಗಳು ಎಲ್ಲಾ ಬದಲಾಗಿಬಿಡುತ್ತವೆ. ನೀನು ದೇಹವೆನ್ನುವ ಭಾವದಲ್ಲಿರುವಷ್ಟು ಕಾಲವು ಈ ಸುಖಗಳು, ಭೋಗಗಳ ಮೇಲೆಯೇ ಇರುತ್ತದೆ.

ಯಾವಾಗ ಇದು ನಿಮಗೆ ಚೆನ್ನಾಗಿ ಅರಿವಿಗೆ ಬರುತ್ತದೆಂದರೆ? ನೀವು ತೀವ್ರ ಸಾಧನೆ ಮಾಡಿ, ಬುದ್ಧಿ ಚೆನ್ನಾಗಿ ವಿಕಸಿಸಿಕೊಂಡಾಗ ಇರುತ್ತದೆ. ಆಗ ಚೆನ್ನಾಗಿ ಗ್ರಹಿಸುತ್ತೀರಿ. ಪತ್ರಿಜೀಯವರು ಮನಸ್ಸು 50% ಬುದ್ಧಿ 50% ಇದ್ದರೆ ಪರವಾಗಿಲ್ಲವೆಂದಿದ್ದಾರೆ. ಅಂದರೆ

ಆಧ್ಯಾತ್ಮಿಕದಲ್ಲಿ ಅರ್ಧ, ಪ್ರಾಪಂಚಿಕದಲ್ಲಿ ಅರ್ಧವೆನ್ನುತ್ತಾರೆ. ಅವನ್ನು ನೋಡುತ್ತೀರಿ, ಇವನ್ನು ನೋಡುತ್ತೀರಿ. ಆದರೆ ಮನಸ್ಸಿನ ಶೇಕಡಾ ಕಡಿಮೆಯಾಗಿ ಅಂದರೆ 30%ರೊಳಗೆ ಬಂದು, ಬುದ್ಧಿ 70% ರೊಳಗೆ ಬಂದರೆ, ಬುದ್ಧಿ ಆತ್ಮದ ಕಡೆಗೆ ಹೆಚ್ಚು ಇರುತ್ತದೆ. ಅಂದರೆ ಆಧ್ಯಾತ್ಮಿಕ ಕಾರ್ಯಕ್ರಮಗಳ ಮೇಲೆ ಹೆಚ್ಚು ಆಸಕ್ತಿ ತೋರಿಸುತ್ತಾರೆ, ಪ್ರಾಪಂಚಿಕ ವಿಷಯಗಳ ಮೇಲೆ ಆಸಕ್ತಿ ಕಡಿಮೆಯಾಗುತ್ತದೆ ಎಂದಿದ್ದಾರೆ.

ಬುದ್ಧಿಯ ಶೇಕಡಾ ಇನ್ನೂ ಬದಲಾದಾಗ ಪ್ರಾಪಂಚಿಕ ವಿಷಯಗಳ ಬಗ್ಗೆ ವಿರಕ್ತಿ, ಆತ್ಮ ವಿಷಯಗಳ ಬಗ್ಗೆ ಆಸಕ್ತಿ ಹೆಚ್ಚು ಇರುತ್ತದೆ. ಆ ಶೇಕಡ 10% ಮನಸ್ಸು, 40% ಬುದ್ಧಿಯೊಳಗೆ ಬಂದರೆ ಇನ್ನೂ ಬಹಳ ಬದಲಾಗಿ ಬಿಡುತ್ತದೆ. ಹಾಗೆ ಸಾಧನೆಯನ್ನು ಹೆಚ್ಚಿಸುತ್ತಾ, ಶೇಕಡಾವನ್ನು ಬದಲಾಯಿಸಿ ಕೊಳ್ಳುವುದೇ ಯಾರಾಗಲಿ ಮಾಡಬೇಕಾದದ್ದು.

ತೀವ್ರ ಸಾಧನೆ ಮಾಡುತ್ತಾ, ಈ ಆತ್ಮ ಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದುವುದರಿಂದ, ಮಹನೀಯರ ಸಂದೇಶಗಳನ್ನು ಕೇಳುವುದರಿಂದ ಆತ್ಮ ಮೇಲೆ ಆಸಕ್ತಿ ಉಂಟಾಗುತ್ತದೆ. ಆಗ ಆತ್ಮದ ಮೇಲೆ ದೃಷ್ಟಿ ಇಟ್ಟು ಮಾಡಬೇಕಾದ ಕೆಲಸಗಳನ್ನೇ ಮಾಡುತ್ತಾರೆ, ಕೊನೆಗೆ ಕಬೀರರು ಹೇಳಿದಂತೆ ಅಮರರಾಗುತ್ತಾರೆ.

** ** **

## ಮರಣಿಸುವ ಮೊದಲೇ ಮರಣಿಸಿದರೆ 'ಯಾವ ವಿಷಯಗಳಲ್ಲಿ ತಾನು ಜೀವನದಲ್ಲಿ ನಷ್ಟ ಹೋಗುತ್ತಿದ್ದೇನೆ ಎನ್ನುವುದು ಚೆನ್ನಾಗಿ ತಿಳಿಯುತ್ತದೆ"

ಅಂದರೆ ತನ್ನ ಸಮಯವನ್ನು, ಹಣವನ್ನು, ಮಾತನ್ನು ಎಷ್ಟೋ ವ್ಯರ್ಥ ಮಾಡುತ್ತಿದ್ದೇನೆ ಎನ್ನುವುದು ತಿಳಿಯುತ್ತದೆ. ಹಾಗೆಯೇ ತನ್ನ ಇಂದ್ರಿಯಗಳ ಶಕ್ತಿಗಳನ್ನು, ತನ್ನ ಜೀವನವನ್ನು ಎಷ್ಟೋ ವ್ಯರ್ಥ ಮಾಡುತ್ತಿದ್ದೇನೆ ಎಂಬುದು ಕೂಡಾ ತಿಳಿಯುತ್ತದೆ.

ಈ ವಿಷಯಗಳೆಲ್ಲ ಅರ್ಥವಾದರೆ ಸರಿಯಾದ ರೀತಿಯಲ್ಲಿ ಜೀವಿಸಬಲ್ಲವರಾಗುತ್ತಾರೆ, ಅಮರತ್ವಕ್ಕೆ ಹತ್ತಿರವಾಗುತ್ತಾರೆ, ಈ ಜಂಜಾಟಗಳಿಂದ ದೂರವಾಗುತ್ತಾರೆ, ದುಃಖಕ್ಕೆ ದೂರವಾಗುತ್ತಾರೆ, ಜನ್ಮವಿಲ್ಲದ ಸ್ಥಿತಿಯನ್ನು ಹೊಂದುತ್ತಾರೆ.

ಈ ಜನ್ಮದಲ್ಲಿ ಎಷ್ಟನ್ನು ವ್ಯರ್ಥ ಮಾಡುತ್ತಿದ್ದೀರೋ ನಿಮಗೆ ತಿಳಿಯುತ್ತದೆ. ಪತ್ರಿಜೀಯವರು ಹೇಳುತ್ತಾರಲ್ಲ, ಏಕೆ ವ್ಯರ್ಥವಾಗಿ ಮಾತನಾಡುತ್ತೀಯ! ಆ ಕಡೆಯ ಪಕ್ಕದವರೊಂದಿಗೆ, ಈ ಕಡೆಯ ಪಕ್ಕದವರೊಂದಿಗೆ ಹರಟೆಯ ಮಾತುಗಳು ಏಕೆ?

ಫೋನ್ ಮಾಡಿ ಬೇಕಿಲ್ಲದ ಮಾತುಗಳು ಏಕೆ ಎನ್ನುತ್ತಾರೆ? ಖಾಲಿಯಾಗಿದ್ದರೆ, ವಿರಾಮ ದೊರೆತರೆ ಹಾಯಾಗಿ ಧ್ಯಾನ ಮಾಡಿಕೊ.

ನಿಮ್ಮ ನೋಡುವ ಶಕ್ತಿಯನ್ನು ಆಧ್ಯಾತ್ಮಿಕ ಕಾರ್ಯಕ್ರಮಗಳನ್ನು ನೋಡಲು, ಯೋಗೀಶ್ವರರು ಹೇಳಿದ ಸಂದೇಶಗಳನ್ನು ನೋಡುವುದಕ್ಕೆ ಉಪಯೋಗಿಸಬೇಕು, ಧಾರಾವಾಹಿಗಳನ್ನು ನೋಡುವುದಕ್ಕಲ್ಲ. ನಿಮ್ಮ ಜೀವನದಲ್ಲಿ ಎಷ್ಟು ಧಾರಾವಾಹಿಗಳನ್ನು ನೋಡಿದ್ದಿರೋ ಅಷ್ಟು ಜೀವನವನ್ನು ನೀವು ನಷ್ಟ ಹೊಂದಿದಂತೆ. ಇನ್ನು ಕೆಲವು ಜನ ಅವುಗಳಿಗೆ ಚೆನ್ನಾಗಿ ರೂಢಿಯಾಗಿ, ಧಾರಾವಾಹಿ ನಂತರ ಧಾರಾವಾಹಿ, ಎರಡು–ಮೂರು ಧಾರಾವಾಹಿಗಳನ್ನು ನೋಡದ ಹೊರತು ನಿದ್ದೆಯನ್ನು ಮಾಡರು.

ಹಾಗೆ ಕೆಲವರು ಕೆಲಸಕ್ಕೆ ಬಾರದವುಗಳನ್ನು ಕೇಳುತ್ತಾರೆ, ಇಂದ್ರಿಯಗಳನ್ನು ಇವುಗಳಿಗೆ ಉಪಯೋಗಿಸುತ್ತಾರೆ, ಆದರೆ ಅವುಗಳ ಬದಲು ಚೆನ್ನಾಗಿ ಒಳ್ಳೆಯ ಸಂದೇಶಗಳನ್ನು ಕೇಳಿರಿ. ಅಮರತ್ವವನ್ನು ಹೊಂದುವುದಕ್ಕೆ ಬೇಕಾದವುಗಳು, ಮೋಕ್ಷ ಹೊಂದುವುದಕ್ಕೆ ಬೇಕಾದವುಗಳನ್ನು ಕೇಳಿರಿ, ಅಂತಹ ಸಾಂಗತ್ಯಗಳನ್ನು ಮಾಡಿರಿ.

ಹಾಗೆಯೇ ಜೀವನವನ್ನು ಎಷ್ಟೋ ವ್ಯರ್ಥ ಮಾಡುತ್ತಿದ್ದಾರೆ, ಯಾವುದಕ್ಕೆ ಉಪಯೋಗಿಸಬೇಕೋ ಅದಕ್ಕೆ ಉಪಯೋಗಿಸದೆ, ಕೆಲಸಕ್ಕೆ ಬಾರದವುಗಳಿಗೆ ಉಪಯೋಗಿಸುತ್ತಿದ್ದಾರೆ. ಇಲ್ಲದಿದ್ದರೆ ಇಷ್ಟು ಜನ್ಮಗಳು ಏಕೆ? ಗಮನಿಸಿದರೆ ಮಾನವರು ಒಂದೇ ಜನ್ಮದಲ್ಲಿ ಎಷ್ಟು ವರ್ಷಗಳು ಬದುಕಿದರೂ ಆತ್ಮಕ್ಕಾಗಿ ವ್ಯಯಿಸುವ ಸಮಯ ಬಹು ಸ್ವಲ್ಪ ಮಾತ್ರವೇ ಇರುತ್ತದೆ.

ಹಾಗೆಯೇ ತನ್ನ ಕುಟುಂಬ ಅಂದರೆ ಗಂಡ, ಹೆಂಡತಿ, ಅಗತ್ಯಗಳು ಒಂದು ರೀತಿಯಲ್ಲಿ ಹೇಳಬೇಕೆಂದರೆ ಒಂದು ಜೀವನವನ್ನೇ ವ್ಯಯಿಸುತ್ತಿದ್ದಾರೆ. ಹಣವಿಲ್ಲದವರು ಧನ ಸಂಪಾದನೆಗಾಗಿ ಚೆನ್ನಾಗಿ ಕಷ್ಟಪಡಬೇಕು ತಪ್ಪದು. ಆದರೆ ಕೆಲವರು ಅಗತ್ಯಗಳಿಗೂ ಮೀರಿ ಇದ್ದರೂ ಇನ್ನು ಸಂಪಾದಿಸುತ್ತಲೇ ಇರುತ್ತಾರೆ, ಏಕೆಂದರೆ ನನ್ನ ಮಕ್ಕಳಿಗಾಗಿ ಎನ್ನುತ್ತಾರೆ, ಅವರಿಗೆ ಸರಿಹೋಗುವಷ್ಟು ಇದ್ದರೂ ಮತ್ತೇ ಸಂಪಾದಿಸುತ್ತಲೇ ಇರುತ್ತಾರೆ. ಏನು ಎಂದರೆ? ಮೊಮ್ಮಕ್ಕಳಿಗೆ ಎನ್ನುತ್ತಾರೆ. ಹಾಗೆ ಮಕ್ಕಳಿಗಾಗಿ, ಮೊಮ್ಮಕ್ಕಳಿಗಾಗಿ ಕಷ್ಟಪಡುತ್ತಿದ್ದಾರೆ, ಮತ್ತೆ ತನಗಾಗಿ? ಅಂದರೆ ಆತ್ಮಕ್ಕಾಗಿ ಏನು ಮಾಡುತ್ತಿದ್ದಾರೆ? ಎಂಬುದೇ ತಿಳಿದುಕೊಳ್ಳುತ್ತಿಲ್ಲ.

ನನ್ನ ಜೀವನದಲ್ಲಿಯೇ ನೋಡಿಕೊಂಡರೆ ಅಗತ್ಯಕ್ಕೆ ಮೀರಿ ಇದ್ದರೂ ಇನ್ನೂ ಸಂಪಾದಿಸುವುದಕ್ಕೆ 50 ವರ್ಷಗಳು ಮೇಲೆಯೇ ವ್ಯರ್ಥ ಮಾಡಿದೆನು. ಇದನ್ನು ಪತ್ರಿಜೀಯವರ ಪರಿಚಯದಿಂದ ತಿಳಿದುಕೊಂಡೆನು. ಅದಕ್ಕೆ ತಕ್ಷಣವೇ ವ್ಯಾಪಾರಗಳನ್ನೆಲ್ಲಾ ಬಿಟ್ಟು, ಸಮಯವನ್ನು ವ್ಯರ್ಥ ಮಾಡುವುದನ್ನು ಬಿಟ್ಟೆನು.

ಹಾಗೆಯೇ ಇನ್ನೂ ಕೆಲವರು ಈ ಧನ ಸಂಪಾದನೆಗಾಗಿ ಅಧರ್ಮದಿಂದ ವ್ಯವಹರಿಸುತ್ತಿದ್ದಾರೆ. ಅಂದರೆ ತಪ್ಪುಗಳನ್ನು, ಪಾಪಗಳನ್ನು, ಮೋಸಗಳನ್ನು, ದೌರ್ಜನ್ಯಗಳನ್ನು ಮಾಡಿ ಅಧರ್ಮದಿಂದ ಸಂಪಾದಿಸುತ್ತಿದ್ದಾರೆ, ಜನ್ಮವನ್ನು ನಷ್ಟಪಡಿಸಿಕೊಳ್ಳುತ್ತಿದ್ದಾರೆ. ಇಂತಹ ಕೆಲಸಗಳಿಂದ ನಂತರದ ಜನ್ಮಗಳಲ್ಲಿ ತೀರದಷ್ಟು ಕಷ್ಟಗಳನ್ನು ಅನುಭವಿಸಿ ಆ ಜನ್ಮಗಳನ್ನು ಕೂಡಾ ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ.

ಅಗತ್ಯಗಳಿಗೆ ಸರಿಹೋಗುವಷ್ಟು ಸಂಪಾದಿಸಬೇಕೆಂದರೆ ಅಧರ್ಮದಿಂದ ವ್ಯವಹರಿಸಬೇಕಾದ ಅಗತ್ಯವಿಲ್ಲ. ಮತ್ತೆ ಏಕೆ ಮಾಡುತ್ತಿದ್ದಾರೆಂದರೆ? ಮಮಕಾರವೇ ಅದಕ್ಕೆ ಕಾರಣ, ಕುಟುಂಬ ಸುಖಪಡಬೇಕು ಎನ್ನುತ್ತಾರೆ, ಆ ಹಣವಿದ್ದರೆ ಗೌರವ, ಬೆಲೆ ಇರುತ್ತದೆ ಎನ್ನುತ್ತಾರೆ.

ಹೀಗೆ ಎಷ್ಟೋ ಕಾರಣಗಳಿಂದಾಗಿ ಅಗತ್ಯಕ್ಕೂ ಮೀರಿ ಸಂಪಾದಿಸುವುದಕ್ಕೆ ಮಾಡಬಾರದ ಕೆಲಸಗಳನ್ನು ಮಾಡುತ್ತಾ ಪಾಪವನ್ನು ಸಂಪಾದಿಸಿಕೊಳ್ಳುತ್ತಿದ್ದಾರೆ. ಎಷ್ಟು ಅವಿವೇಕತನ ! ಎಷ್ಟು ಸಮಯ ವ್ಯರ್ಥ ಆಗಿ ಹೋಗುತ್ತದೆ ! ಆ ಸಮಯವನ್ನು ಬುದ್ಧಿ ಬೆಳೆಸಿಕೊಳ್ಳುವುದಕ್ಕೆ, ಸದ್ಗುರುಗಳ ಸಂದೇಶಗಳನ್ನು ಕೇಳುವುದಕ್ಕೆ, ಮರಣದ ನಂತರ ನಡೆಯುವ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೆ ಉಪಯೋಗಿಸಿದರೆ ಜೀವನವನ್ನು ಎಷ್ಟೋ ಸರಿಪಡಿಸಿಕೊಳ್ಳುತ್ತೀರಿ, ಎಷ್ಟೋ ಜನ್ಮಗಳನ್ನು ಕಡಿಮೆ ಮಾಡಿಕೊಳ್ಳುತ್ತೀರಿ.

ಹಾಗೆಯೇ ಕೆಲವರು ಪದವಿಗಳಿಗಾಗಿ, ಹೆಸರು, ಪ್ರತಿಷ್ಠೆಗಳಿಗಾಗಿ, ಜೀವನವನ್ನೇ ಪಣವಾಗಿಡುತ್ತಿದ್ದಾರೆ. ಇನ್ನೂ ಕೆಲವರು ದೊಡ್ಡಸ್ತಿಗೆಗಾಗಿ ಎಷ್ಟೋ ಸಮಯವನ್ನು ವ್ಯಯಿಸುತ್ತಿದ್ದಾರೆ. ಯೌವ್ವನದಲ್ಲಾದರೆ ಮನೋರಂಜನೆಗಾಗಿ, ಆನಂದಕ್ಕಾಗಿ ಜೀವನವನ್ನೇ ಕಳೆಯುತ್ತಿದ್ದಾರೆ, ಇನ್ನೂ ಕೆಲವರು ಸಮಾರಂಭಗಳು, ಪಾರ್ಟಿಗಳು ಎಂದು ಎಷ್ಟೋ ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ.

ರಮಣ ಮಹರ್ಷಿ ಜೀವನವನ್ನು ನೋಡಿಕೊಂಡರೆ ಆತನು ಆತ್ಮದ ಹೊರತು ಯಾವುದಕ್ಕೂ ಪ್ರಾಮುಖ್ಯತೆ ಕೊಡಲಿಲ್ಲ. ಆತನ ಜೀವನವನ್ನು ಪೂರ್ತಿಯಾಗಿ ಆತ್ಮಕ್ಕೇ ಕೊಟ್ಟನು. ಆತನ ಶರೀರವನ್ನು ಆತ್ಮದ ಲಾಭಕ್ಕಾಗಿಯೇ ಇರುವ ಈ ಧ್ಯಾನ ಸಾಧನೆಗೆ ಒದಗಿಸಿದನು. ಆತನು ಪ್ರಾರಂಭದಲ್ಲಿ ತನ್ನ ಮಾತುಗಳನ್ನು ಈ ಜ್ಞಾನವನ್ನು ಬೋಧಿಸುವುದಕ್ಕೇ ಉಪಯೋಗಿಸಿದನು, ಆತನು ಇಂದ್ರಿಯಗಳನ್ನು, ಆತನು ಸಮಯ ಎಲ್ಲಾ ಆತ್ಮಕ್ಕಾಗಿ ಒದಗಿಸಿದನು, ಅದಕ್ಕೆ ಅಷ್ಟು ಮಹನೀಯನಾದನು.

ಆದ್ದರಿಂದ ನೀವಾದರೂ ಸರಿ ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ವಲ್ಪವಾದರೂ ಆತ್ಮದ ಕುರಿತು ಆಲೋಚಿಸಿರಿ, ಅಷ್ಟೇ ಹೊರತು ಜೀವನವನ್ನು ವ್ಯರ್ಥ ಮಾಡಬೇಡಿ, ನೀವು ಬುದ್ಧಿಯನ್ನು ಚೆನ್ನಾಗಿ ಹೆಚ್ಚಿಸಿಕೊಂಡರೆ ಆ ಬುದ್ಧಿಯೇ ನಿಮ್ಮನ್ನು ಆತ್ಮದ ಕಡೆಗೆ ನಡೆಸುತ್ತದೆ, ಯಾರು ಹೇಳಬೇಕಿಲ್ಲ. ಈ ಸ್ಥಿತಿಯಲ್ಲಿ ನೀವು ಇದ್ದೀರಿ, ಆದ್ದರಿಂದ ಇಷ್ಟು

ಆಸಕ್ತಿಯನ್ನು ತೋರಿಸುತ್ತಿದ್ದೀರಿ. ಅದನ್ನು ಚೆನ್ನಾಗಿ ಪಾಲಿಶ್ ಮಾಡಿದರೆ ಎಷ್ಟೋ ಜನ್ಮಗಳು ಕಡಿಮೆಯಾಗುತ್ತವೆ. ಸರಿ ಮಾಡಿಕೊಳ್ಳುವ ಪ್ರಯತ್ನ ಮಾಡಿರಿ, ಖಂಡಿತವಾಗಿಯೂ ಯಶಸ್ಸನ್ನು ಗಳಿಸುತ್ತೀರಿ.

ಖಂಡಿತವಾಗಿ ಕಬೀರರು ಹೇಳಿದಂತೆ ಅಮರರು ಆಗುವುದಕ್ಕೆ ಪ್ರಯತ್ನಿಸಬೇಕು. ಇಲ್ಲದಿದ್ದರೆ ಒಂದೊಂದು ಜನ್ಮದಲ್ಲಿ ಎಷ್ಟು ನೋವುಗಳು ! ಆದ್ದರಿಂದ ರಮಣ ಮಹರ್ಷಿಯಂತಹವರು ಎಷ್ಟೋ ಜನರಿದ್ದಾರೆ, ಅಂತಹವರನ್ನು ಆದರ್ಶವಾಗಿ ತೆಗೆದುಕೊಳ್ಳಿ.

ಆದ್ದರಿಂದ ಯಾರಾಗಲಿ ಸರಿ ಬುದ್ಧಿಯನ್ನು ಬೆಳೆಸಿಕೊಳ್ಳುವುದು ಮುಖ್ಯ. ಅದಕ್ಕೆ ಕೆಲವು ದಿನಗಳು ತೀವ್ರ ಸಾಧನೆಯನ್ನು ಮಾಡಿರಿ. ಬುದ್ಧಿ ಚೆನ್ನಾಗಿ ಹೆಚ್ಚಿದರೆ ಅದೇ ನಿಮ್ಮನ್ನು ನಡೆಸುತ್ತದೆ. ಬೆಳಿಗ್ಗೆ ನಿಮ್ಮನ್ನು ಯಾರೂ ಎಬ್ಬಿಸಬೇಕಾಗಿಲ್ಲ, ಪುಸ್ತಕಗಳನ್ನು ಓದು ಎಂದು ಯಾರು ಹೇಳಬೇಕಾಗಿಲ್ಲ, ಈ ವೀಡಿಯೋಗಳನ್ನು ಕೇಳಿರಿ ಎಂದು ಯಾರೂ ಹೇಳಬೇಕಾಗಿಲ್ಲ, ನಿಮ್ಮ ಬುದ್ಧಿಯೇ ಒಳಗಿನಿಂದ ನಿಮಗೆ ಹೇಳುತ್ತಾ ಇರುತ್ತದೆ.

** ** **

## ಮರಣಿಸಿದ ನಂತರ ನಡೆಯುವುದು ಜೀವಿಸಿಸಿರುವಾಗಲೇ ತಿಳಿದುಕೊಂಡರೆ? "ಭೂಲೋಕದಲ್ಲಿ ಇರುವಷ್ಟು ಕಾಲವೇ ಮಾಯೆಯಲ್ಲಿರುತ್ತಾರೆಂದು, ಮೇಲಿನ ಲೋಕಗಳಿಗೆ ಹೋದನಂತರ ಮಾಯೆಯಲ್ಲಿ ಇರುವುದಿಲ್ಲ, ವಾಸ್ತವದಲ್ಲಿ ಇರುತ್ತಾರೆಂದು ತಿಳಿಯುತ್ತದೆ"

ಮಾಯೆಯಲ್ಲಿ ಇರುವುದು ಎಂದರೆ ಇಲ್ಲದವೆಲ್ಲವು ಇರುವಂತೆ ಅನ್ನಿಸುತ್ತವೆ, ಮತ್ತೆ ಮಾಯವಾಗುತ್ತವೆ, ಅಂದರೆ ಅದೃಶ್ಯವಾಗುತ್ತದೆ ಇದೇ ಮಾಯ.

ನೀವು ಗಮನಿಸಿರಿ ನಿಮ್ಮ ತಂದೆ-ತಾಯಿಗಳು, ತಾತ-ಮುತ್ತಾತಂದಿರು ಒಂದು ಕಾಲದಲ್ಲಿ ಇದ್ದರು, ಈಗ ಇಲ್ಲ, ಇದನ್ನೇ ಮಾಯೆ ಎನ್ನುತ್ತಾರೆ. ಹಾಗೆಯೇ ಸೃಷ್ಟಿಯಲ್ಲಿ ನಿಮಗೆ ಕಾಣಿಸುವುದು ಯಾವುದನ್ನು ತೆಗೆದುಕೊಂಡರೂ, ಎಲ್ಲಾ ಕೆಲವು ಕಾಲಾ ಮಾತ್ರವೇ ಇರುತ್ತವೆ, ನಂತರ ಅದೃಶ್ಯವಾಗುತ್ತವೆ. ಅಂತಹ ಪ್ರಪಂಚದಲ್ಲಿ ಜೀವಿಸುತ್ತಾ ಎಲ್ಲಾ ಇರುವಂತವೇ, ಎಲ್ಲಾ ಇರುತ್ತವೆಂದೇ ಭಾವಿಸುತ್ತಾರೆ, ಅದೇ ಮಾಯೆಯಲ್ಲಿ ಜೀವಿಸುವುದೆಂದರೆ.

ಯಾವುದು ಇರುತ್ತದೋ, ಯಾವು ಇರುವುದಿಲ್ಲವೋ ಭೂಲೋಕದಲ್ಲಿ ಇರುವವರಿಗೆ ತಿಳಿಯದು, ನೋಡುತ್ತಿದ್ದರೂ ಕೂಡಾ ಅವರಿಗೆ ಅರ್ಥವಾಗದು, ಅದೇ

ವಿಚಿತ್ರ. ಅದಕ್ಕೆ ನೀವು ನೋಡಿ, ಈ ಭೂಲೋಕದಲಿರುವವರು ಈ ಶರೀರ ನಾನು ಎಂದುಕೊಳ್ಳುತ್ತಾರೆ. ಆದರೆ ಶರೀರವಿರುತ್ತದೆಯೋ? ಇರದು, ಬೂದಿಯಾಗಿ ಬಿಡುತ್ತದೆ. ಆದರೆ ಶರೀರವು ಇರುವುದು ಎನ್ನುವಂತೆಯೇ ಜೀವಿಸುತ್ತಾರೆ. ಅದೇ ಮಾಯೆಯಲ್ಲಿ ಜೀವಿಸುವುದೆಂದರೆ !

ಯಾರಾಗಲಿ ಸರಿ, ಎಷ್ಟು ಬಾರಿ ಹೇಳಿದರೂ, ಗುರುಗಳು ಎಷ್ಟು ಬಾರಿ ನಿಮ್ಮಿಂದ ಹೇಳಿಸಿದರೂ ಮತ್ತೆ ದೇಹವೆಂಬ ಭಾವದೊಳಗೆ ಬಂದು ಬಿಡುತ್ತೀರಿ ಅದೇ ಮಾಯ. ಆದ್ದರಿಂದ ಭೂಲೋಕದಲ್ಲಿ ಇರುವಷ್ಟು ಕಾಲವೇ ಮಾಯೆಯಲ್ಲಿ ಇರುತ್ತಾರೆ, ಆದರೆ ಮರಣಿಸಿ ಮೇಲಿನ ಲೋಕಗಳಿಗೆ ಹೋದ ನಂತರ ಮಾಯೆಯಲ್ಲಿ ಇರುವುದಿಲ್ಲ, ವಾಸ್ತವದಲ್ಲಿರುತ್ತಾರೆ, ಆದರೆ ಆಗ ಇರುವುದು ಆತ್ಮವೇ ಆದ್ದರಿಂದ.

ಭೂಮಿಯ ಮೇಲಿರುವಾಗ ಶರೀರವಿದೆ, ಆತ್ಮವಿದೆ ಆದರೆ ಆತ್ಮ ಕಾಣಿಸದು, ಶರೀರ ಕಾಣಿಸುತ್ತದೆ. ಆದ್ದರಿಂದ ಕಾಣಿಸುವ ನಾನೇ ಎಂಬ ಭಾವದಲ್ಲಿ ಇರುತ್ತಾರೆ, ಕಾಣಿಸಿದ ಆತ್ಮನ ಕುರಿತು ಹಿಡಿಸಿಕೊಳ್ಳುವುದಿಲ್ಲ.

ಈ ಮಾಯೆಯಲ್ಲಿ ಇರುವುದರಿಂದ ಮಾಡಬೇಕಾದುದಕ್ಕೆ ಭಿನ್ನವಾಗಿ ಮಾಡುತ್ತಾರೆ. ಏಕೆಂದರೆ ಈ ಕಾಣಿಸುವ ದೇಹ ನಾನು ಎಂದು ಅಂದುಕೊಳ್ಳುವುದರಿಂದ. ಆದ್ದರಿಂದ ದೇಹ ಸುಖ, ದೇಹದ ಆರೋಗ್ಯ, ದೇಹದ ಅಂದ ನೋಡಿಕೊಳ್ಳುತ್ತಾರೆ. ದೇಹಕ್ಕಾಗಿಯೇ ಸಂಪಾದಿಸುತ್ತಾರೆ, ದೇಹಕ್ಕಾಗಿಯೇ ಖರ್ಚು ಮಾಡುತ್ತಾರೆ.

ಆದರೆ ಮರಣಿಸಿದ ನಂತರ ಏನು ನಡೆಯುತ್ತದೆಂದು ತಿಳಿದುಕೊಂಡರೆ ತಾನು ದೇಹವಲ್ಲ, ಆತ್ಮವೆಂಬುದು ಅರ್ಥವಾಗುವುದರಿಂದ ಆತ್ಮಕ್ಕೆ ಹೆಚ್ಚಿನ ಪ್ರಾಧ್ಯಾನತೆ, ಆತ್ಮದ ಲಾಭಗಳನ್ನೇ ನೋಡುತ್ತಾರೆ. ಆತ್ಮ ಮೇಲಿನ ಲೋಕಗಳಲ್ಲಿ ಉನ್ನತಿ ಹೊಂದಬೇಕೆಂದು ನೋಡಿಕೊಳ್ಳುತ್ತಾರೆ ಆತ್ಮ ಸೇವೆಗಳನ್ನೇ ಮಾಡುತ್ತಾರೆ ಅದಕ್ಕೇ ನೀವು ನೋಡಿ, ಈ ದೇಹ ನಾನು ಎಂದುಕೊಳ್ಳುತ್ತಾ, ಈ ಭೂಮಿಯ ಮೇಲೆ ಇರುವಷ್ಟುಕಾಲ ದೇಹ ಸೇವೆಗಳು ಅಂದರೆ ಪುಣ್ಯಕರ್ಮಗಳು ಮಾಡುತ್ತಾರೆ. ಆದರೆ ಇದು ತಿಳಿದ ನಂತರ ಆತ್ಮ ಸೇವೆಗಳು ಅಂದರೆ ಮುಕ್ತಿ ಕರ್ಮಗಳನ್ನು ಮಾಡುತ್ತಾರೆ.

ಆತ್ಮ ಸೇವೆಗಳಲ್ಲಿ ಅಂದರೆ ಮುಕ್ತಿ ಕರ್ಮಗಳಲ್ಲಿ ಕೂಡಾ ಬಹಳ ವಿಧಗಳಿವೆ. ಈ ಧ್ಯಾನ ಮಾರ್ಗದಲ್ಲಿ ಮಾಡುವ ಸೇವೆಗಳೆಲ್ಲಾ ಆತ್ಮ ಸೇವೆಗಳೇ. ಧ್ಯಾನ ಯಜ್ಞಗಳಲ್ಲಿ ಮಾಡುವ ಸೇವೆಗಳು, ಶಾಖಾಹಾರ ರ್‍ಯಾಲಿಗಳಲ್ಲಿ ಭಾಗವಹಿಸುವುದಾಗಲಿ, ಅಂತಹವು ಗಳಿಗೆ ಸಹಕರಿಸುವುದಾಗಲಿ, ಧನ ರೂಪದಲ್ಲಿ ಸಹಾಯ ಮಾಡುವುದಾಗಲಿ ಇವೆಲ್ಲಾ ಆತ್ಮ ಸೇವೆಗಳೇ. ಆದರೆ ಇವೆಲ್ಲಾ ಪ್ರಾರಂಭ ಸ್ಥಾಯಿಯಲ್ಲಿ ಮಾಡುವಂತವು, ಇವುಗಳ ಫಲವು ಬಹಳ ಕಡಿಮೆ ಇರುತ್ತದೆ. ಇದು ಆರ್ಥವಾದವನು ಏನು ಮಾಡುತ್ತಾನೆಂದರೆ? ಈ ಆತ್ಮ ಸೇವೆಗಳಲ್ಲಿ ಎಲ್ಲಕ್ಕಿಂತಲೂ ಉತ್ತಮವಾದ ಶ್ರೇಷ್ಠವಾದ ಸೇವೆಯನ್ನು ಮಾಡುತ್ತಾನೆ.

ಅಂದರೆ? ಆತ್ಮ ಜ್ಞಾನವನ್ನು ಸಂಪಾದಿಸಿಕೊಳ್ಳುವುದು, ಆ ಜ್ಞಾನವನ್ನು ಎಲ್ಲರಿಗೂ ಬೋಧಿಸುವುದು, ಹಾಗೆ ಬೋಧಿಸಿ ಎಲ್ಲರಲ್ಲಿರುವ ಅಜ್ಞಾನವನ್ನು ತೊಲಗಿಸುವುದು, ಎಲ್ಲರ ವರ್ತನೆಯಲ್ಲಿ ಬದಲಾವಣೆ ತರುವುದು ಇಂತಹ ಸೇವೆಗಳು ಆತ್ಮ ಸೇವೆಗಳಲ್ಲೇ ಉತ್ತಮವಾದ ಶ್ರೇಷ್ಠವಾದ ಸೇವಾ. ಏತಕೆಂದರೆ ಅಜ್ಞಾನದಲ್ಲಿದ್ದರೆ ಮಾಡಬಾರದ ಕೆಲಸಗಳು, ತಪ್ಪುಗಳು, ಪಾಪಗಳನ್ನು ಮಾಡುತ್ತಾರೆ, ಕಷ್ಟಗಳನ್ನು ತಂದುಕೊಳ್ಳುತ್ತಾರೆ, ಅವರು ನಷ್ಟ ಹೊಂದುತ್ತಾರೆ, ಇತರರಿಗೆ ನಷ್ಟವನ್ನುಂಟು ಮಾಡುತ್ತಾರೆ. ಅಂತಹವರನ್ನು ಜ್ಞಾನವಂತರನ್ನಾಗಿ ಮಾಡಿದರೆ ಅವರು ಮಾಡಬೇಕಾದವನ್ನೇ ಮಾಡುತ್ತಾರೆ, ಮಾಡಲಾರದವುಗಳನ್ನು ಮಾಡರು. ಆದ್ದರಿಂದ ಅವರು ಲಾಭವನ್ನು ಹೊಂದುತ್ತಾರೆ, ಇತರರಿಗೂ ಕೂಡಾ ಲಾಭವನ್ನುಂಟು ಮಾಡುತ್ತಾರೆ.

ಆದ್ದರಿಂದ ಜ್ಞಾನವನ್ನು ಹಂಚುವುದೇ ಎಲ್ಲಕ್ಕಿಂತಲೂ ಬಹಳ ಉತ್ತಮೋತ್ತಮವಾದ ಸೇವೆ. ಉಳಿದವುಗಳಿಗೆ ಒಂದು ರೂಪಾಯಿ ಫಲ ಬಂದರೆ, ಇದಕ್ಕೆ ನೂರು ರೂಪಾಯಿಗಳ ಫಲ ಬರುತ್ತದೆ. ಉಳಿದವುಗಳಿಂದ ಜ್ಞಾನವು ಬರದು, ಅಜ್ಞಾನವು ಹೋಗದು.

ರಮಣ ಮಹರ್ಷಿ, ರಾಮಕೃಷ್ಣ ಪರಮಹಂಸ, ಶಂಕರಾಚಾರ್ಯರು, ಪತ್ರೀಜಿಯಂತವರು ಎಷ್ಟೋ ಅದ್ಭುತವಾದ ಜ್ಞಾನವನ್ನು ಬೋಧಿಸಿದರು, ಹಾಗೆ ಬೋಧಿಸುವುದೇ ಎಲ್ಲಕ್ಕಿಂತಲೂ ಶ್ರೇಷ್ಠ ಸೇವೆ.

ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ ಈ ಭೂಮಿಯ ಮೇಲೆ ಇರುವವೆಲ್ಲಾ, ಇರಲಾರದವೇ ಎಂಬುದು ಅರ್ಥವಾಗುತ್ತದೆ, ಅವುಗಳಿಗೆ ಪ್ರಾಮುಖ್ಯತೆ ಕೊಡರು. ಈ ಭೂಮಿಯ ಮೇಲೆ ಇರುವಂತಹವನ್ನು ಉಪಯೋಗಿಸಿಕೊಂಡು ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾರೆ. ಎಲ್ಲರೂ ಆತ್ಮಗಳೇ, ಆದರೆ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಭೂಮಿಯ ಮೇಲೆ ಒಂದು ದೇಹವನ್ನು ತೆಗೆದುಕೊಳ್ಳುತ್ತಾರೆ. ಆ ದೇಹದೊಂದಿಗೆ ಧ್ಯಾನ ಸಾಧನೆಗಳನ್ನು ಮಾಡಿ ಜ್ಞಾನವಂತವಾದ ಪುಸ್ತಕಗಳನ್ನು ಓದಿ. ಸಂದೇಶಗಳನ್ನು ಕೇಳಿ ಸೇವೆಗಳನ್ನು ಮಾಡುತ್ತಾರೆ.

ಆದ್ದರಿಂದ ದೇಹದ ಅಗತ್ಯಗಳನ್ನು ನೋಡಿಕೊಳ್ಳುತ್ತಾ ಶರೀರವನ್ನು ಬಳಸಿಕೊಳ್ಳುತ್ತಾ, ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಾರೆ. ಆ ಜ್ಞಾನವನ್ನು ಹೆಚ್ಚಿಸಿ–ಕೊಳ್ಳುವುದರಿಂದ ಅವರಿಗೆ ಮರಣಿಸಿದ ನಂತರ ಏನು ನಡೆಯುತ್ತದೋ ಎಲ್ಲಾ ತಿಳಿಯುತ್ತವೆ.

ಆಗ ಇನ್ನೂ ಹೆಚ್ಚು ದೃಷ್ಟಿ ಇಡುತ್ತಾರೆ. ಒಂದು ರೀತಿಯಲ್ಲಿ ಮರಣಿಸುವ ಮೊದಲೇ ಮರಣಿಸಿದವರು ಮಾಯೆಯಿಂದ ಹೊರ ಬೀಳುತ್ತಾರೆಂದು ಹೇಳಬಹುದು. ಮೇಲೆ

ಹೋದ ನಂತರ ಈ ಮಾಯೆಗೆ ಸಂಬಂಧಿಸಿದವು ಯಾವುವು ಇರುವುದಿಲ್ಲ, ವಾಸ್ತವವೇ ಇರುತ್ತದೆ. ಅಲ್ಲಿಯವರನ್ನು ಭೇಟಿ ಮಾಡುತ್ತಾರೆ, ಅವರು ಹೇಳುವ ಸಂದೇಶಗಳು ಕೂಡಾ ಆತ್ಮಕ್ಕೆ ಸಂಬಂಧಿಸಿದವೇ ಇರುತ್ತವೆ, ಆತ್ಮಕ್ಕೆ ಲಾಭಿಸುವಂತವೇ ಇರುತ್ತವೆ. ಅಲ್ಲಿ ಇವರು ತೆಗೆದುಕೊಳ್ಳುವ ನಿರ್ಣಯಗಳು ಕೂಡಾ ಆತ್ಮದ ಕುರಿತೇ ತೆಗೆದುಕೊಳ್ಳುತ್ತಾರೆ.

ಅಲ್ಲಿಯವರೆಗೆ ಇವರು ನನ್ನ ಮಕ್ಕಳು, ಈಕೆ ನನ್ನ ಹೆಂಡತಿ, ಆತನು ನನ್ನ ಗಂಡ ಎಂದುಕೊಳ್ಳುತ್ತಾರೆ. ಮೇಲಿನ ಲೋಕಗಳಿಗೆ ಹೋದಾಗ ಎಲ್ಲಾ ಬೇರೆ ಬೇರೆ ಲೋಕಗಳಿಂದ ಬಂದಿದ್ದಾರೆ, ಎಲ್ಲಾ ಒಂದೇ ಎಂದು ತಿಳಿದುಕೊಳ್ಳುತ್ತಾರೆ. ಇರುವಷ್ಟು ಕಾಲ ಜ್ಞಾನವನ್ನು ಸಂಪಾದಿಸಿಕೊಳ್ಳುವುದಕ್ಕೆ ಇವೆಲ್ಲವು ಅಗತ್ಯವಾದ್ದರಿಂದ ಪ್ರಕೃತಿ ಈ ಏರ್ಪಾಡು ಮಾಡಿದೆ ಎಂದು ಅರ್ಥವಾಗುತ್ತದೆ.

ಆದ್ದರಿಂದ ಅಗತ್ಯಗಳನ್ನು ನೋಡಿಕೊಳ್ಳುತ್ತಾ, ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ.

ಹಾಗೆಯೇ ಮಾಡಿದ ಕರ್ಮಗಳನ್ನಾಧರಿಸಿ ಮರಣದ ನಂತರ ಕರೆದುಕೊಂಡು ಹೋಗುವ ಲೋಕಗಳು ಆಧಾರವಾಗಿರುತ್ತವೆ. ಪಾಪ ಕರ್ಮಗಳನ್ನು ಮಾಡುವುದರಿಂದ ಈ ಲೋಕಕ್ಕೆ ಬಂದಿದ್ದೇನೆ. ಈ ಬಾರಿ ಹೋದಾಗ ಇನ್ನು ಪಾಪಕರ್ಮಗಳನ್ನು ಮಾಡಬಾರದು ಎಂದು ನಿರ್ಣಯಿಸಿಕೊಳ್ಳುತ್ತಾರೆ. ಪುಣ್ಯಕರ್ಮಗಳನ್ನು ಮಾಡಿ ಸ್ವರ್ಗ ಲೋಕದಂತಹ ಲೋಕಗಳಿಗೆ ಹೋಗುತ್ತಾರೆ. ಆಗ ಅಂದುಕೊಳ್ಳುತ್ತಾರೆ, ಓ, ನಾನು ಪುಣ್ಯ ಕರ್ಮಗಳನ್ನು ಮಾಡಿ ಬಂದಿದ್ದರಿಂದಲೇ ಈ ಲೋಕಕ್ಕೆ ಬಂದೆನು ಎಂದು.

ಹಾಗೆಯೇ ಜ್ಞಾನವನ್ನು ಸಂಪಾದಿಸಿಕೊಂಡವನು ಊರ್ಧ್ವ ಲೋಕಗಳಿಗೆ ಅಂದರೆ ಜನಾಲೋಕದ ಮೇಲೆ ಇರುವಂತಹ ಲೋಕಗಳಿಗೆ ಸೇರಿಕೊಂಡಾಗ ಅಂದುಕೊಳ್ಳುತ್ತಾನೆ! ಓ.... ನಾನು ಭೂಮಿಯ ಮೇಲೆ ಇರುವಾಗ ಜ್ಞಾನವನ್ನು ಸಂಪಾದಿಸಿಕೊಂಡಿದ್ದರಿಂದಲೇ ಈಗ ಇಂತಹ ಶ್ರೇಷ್ಠವಾದ ಲೋಕಕ್ಕೆ ಸೇರಬಲ್ಲವನಾದೆನೆಂದು.

ಅಂದರೆ ಭೂಮಿಯ ಮೇಲೆ ಇರುವಾಗ ಪಾಪ ಕರ್ಮಗಳನ್ನು, ಪುಣ್ಯ ಕರ್ಮಗಳನ್ನು ಅಲ್ಲ, ಆತ್ಮ ಕರ್ಮಗಳೇ ಮಾಡಬೇಕು. ಅದರಲ್ಲಿಯೂ ಬಹಳ ಶ್ರೇಷ್ಠ ಫಲಿತಾಂಶ ಕೊಡುವಂತಹ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು, ಆಗಲೇ ಮೇಲಿನ ಲೋಕಗಳಲ್ಲಿ ಅವರು ಶ್ರೇಷ್ಠರಂತೆ ಭಾವಿಸಲ್ಪಡುತ್ತಾರೆ ಎಂಬುದು ಅರ್ಥವಾಗುತ್ತದೆ.

ಆದ್ದರಿಂದ ಭೂಲೋಕದಲ್ಲಿ ಇದ್ದರೆ ಇರಲಾರದವುಗಳಿಗೆ ಪ್ರಾಮುಖ್ಯತೆ ಕೊಡುತ್ತಾರೆ. ಆದರೆ ಮೇಲಿನ ಲೋಕಗಳಿಗೆ ಹೋದರೂ, ಮೇಲಿನ ಲೋಕಗಳಲ್ಲಿ ಏನು ನಡೆಯುತ್ತದೆಂದು ತಿಳಿದುಕೊಂಡರೂ ಇರುವವುಗಳಿಗೇ ಪ್ರಾಮುಖ್ಯತೆ ಕೊಡುತ್ತೀರಿ. ನೀವು ಎಷ್ಟು ಜ್ಞಾನವನ್ನು ಸಂಪಾದಿಸಿಕೊಂಡರೆ ಅಷ್ಟು ಉನ್ನತವಾದ ಸ್ಥಿತಿಗೆ ಬೆಳೆಯುತ್ತೀರಿ,

ಅದಕ್ಕೆ ಜ್ಞಾನದ ಮೇಲೆ ದೃಷ್ಟಿ ಇಡಿರಿ. ಎಷ್ಟು ಜ್ಞಾನ ಹೆಚ್ಚಿದರೆ ನಿಮ್ಮ ಜನ್ಮಗಳು ಅಷ್ಟು ಕಡಿಮೆಯಾಗುತ್ತದೆ, ಜ್ಞಾನವು ಬೆಳೆಯದಿದ್ದರೆ ಜನ್ಮಗಳು ಬೆಳೆಯುತ್ತಲೇ ಇರುತ್ತವೆ.

ಜ್ಞಾನವನ್ನು ಹೊಂದಬೇಕೆಂದರೆ ಮಾಡಬೇಕಾದ "ಶ್ವಾಸದ ಮೇಲೆ ಗಮನ" ಧ್ಯಾನವನ್ನು ಮಾಡಬೇಕು, ಆಹಾರ ನಿಯಮಗಳನ್ನು ಪಾಲಿಸಬೇಕು, ಜ್ಞಾನವಂತವಾದ ಪುಸ್ತಕಗಳನ್ನು ಓದಬೇಕು. ನೀವು ನಿಮ್ಮ ಜ್ಞಾನ ಪರಿಧಿಯನ್ನು ಹೆಚ್ಚಿಸಿಕೊಳ್ಳಬೇಕೆಂದರೆ ನೀವು ತಿಳಿದುಕೊಂಡ ಜ್ಞಾನಪರವಾದ ವಿಷಯಗಳನ್ನು ಎಲ್ಲವನ್ನೂ ಕೂಡಾ ಒಂದು ಪುಸ್ತಕದಲ್ಲಿ ಬರೆದುಕೊಳ್ಳುತ್ತಿರಬೇಕು.

ಆದ್ದರಿಂದ ತಿಳಿದುಕೊಳ್ಳಿ, ನೀವು ಭೂಲೋಕದಲ್ಲಿ ಇರುವಷ್ಟು ಕಾಲವೇ ಮಾಯೆಯಲ್ಲಿರುತ್ತಿರಿ. ಮರಣದ ನಂತರ ನಡೆಯುವುದು ತಿಳಿದುಕೊಂಡರೆ ಮಾಯೆಯಲ್ಲಿರುವುದಿಲ್ಲ, ವಾಸ್ತವದಲ್ಲಿರುತ್ತೀರಿ. ಮಾಡಬೇಕಾದವನ್ನೇ ಮಾಡುತ್ತೀರಿ, ಹೊಂದಬೇಕಾದವುಗಳನ್ನೆಲ್ಲಾ ಹೊಂದುತ್ತೀರಿ, ಅದ್ಭುತವಾಗಿ ಬೆಳೆಯುತ್ತೀರಿ, ಕಬೀರರು ಹೇಳಿದಂತೆ ಅಮರರಾಗುತ್ತೀರಿ.

** ** **

## ಮರಣಿಸಿದ ನಂತರ ನಡೆಯುವುದು, ನೀವು ತಿಳಿದುಕೊಂಡರೆ "ನೀವು ಸಂಪಾದಿಸಿಕೊಂಡ ಜ್ಞಾನವೇ ನಿಮಗೆ ಲಾಭಿಸುತ್ತದೆಂದು ತಿಳಿದುಕೊಳ್ಳುತ್ತೀರಿ"

ಮೇಲಿನ ಲೋಕಗಳಲ್ಲಿ ಉನ್ನತ ಸ್ಥಿತಿ ಹೊಂದಬೇಕೆಂದರೆ ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕೆಂದು ತಿಳಿಯುತ್ತದೆ. ಏಕೆಂದರೆ ಮೇಲೆ ಹೋದ ನಂತರ ಜ್ಞಾನವು ಇರುವವನಿಗೆ ಹೆಚ್ಚು ಬೆಲೆ ಇರುತ್ತದೆ. ಜ್ಞಾನವಿಲ್ಲದವನಿಗೆ ಅಲ್ಲಿ ಹೆಚ್ಚು ಬೆಲೆ ಇರುವುದಿಲ್ಲ. ಅದೇ ಭೂಮಿಯ ಮೇಲೆ ಆದರೆ ಹಣವಿರುವವನಿಗೆ ಎಷ್ಟೋ ಗೌರವ, ಬೆಲೆ ಕೊಡುತ್ತಾರೆ, ಹಣವಿಲ್ಲದವನನ್ನು ಬಹಳ ಹೀನವಾಗಿ ನೋಡುತ್ತಾರೆ.

ಹಾಗೆ ಮೇಲೆ ಹೋದ ಮೇಲೆ ಭೂಮಿಯ ಮೇಲೆ ಕೋಟಿಗಳಿದ್ದರೂ ಸರಿ, ಮುಖೇಶ್ ಅಂಬಾನಿಯಂತವನಾದರೂ ಸರಿ, ಜ್ಞಾನವನ್ನು ಹೊಂದದಿದ್ದರೆ ಬಹಳ ಕಡಿಮೆಯಾಗಿ ನೋಡುತ್ತಾರೆ. ಅಲ್ಲಿ ನಿಜವಾಗಿ ಭೂಮಿಯ ಮೇಲೆ ನಮಗೆ ಏನಿದೆ? ಎಂಬುದು ಅವರ್ಯಾರು ಹಿಡಿಸಿಕೊಳ್ಳುವುದಿಲ್ಲ, ಮಾಡುವ ಕೆಲಸಗಳನ್ನಾಧರಿಸಿ ಗೌರವ ಇರುತ್ತದೆಯಾಗಲಿ ಧನವನ್ನು ಆಧರಿಸಿ ಇರುವುದಿಲ್ಲ.

ಆದ್ದರಿಂದ ಮರಣಿಸುವ ಮೊದಲೇ ಮರಣಿಸಿದರೆ ಮೇಲಿನ ಲೋಕಗಳಲ್ಲಿ ಉನ್ನತ ಸ್ಥಿತಿಯನ್ನು ಹೊಂದುವುದಕ್ಕೆ, ಅಲ್ಲಿ ಗೌರವ, ಬೆಲೆ ಬೆಳೆಯುವುದಕ್ಕೆ ಜ್ಞಾನವನ್ನು

ಹೆಚ್ಚಿಸಿಕೊಳ್ಳಬೇಕೆಂದು ತಿಳಿಯುತ್ತದೆ. ಆದ್ದರಿಂದ ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡವರು ಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾರೆ, ಜ್ಞಾನವನ್ನು ಹೊಂದುವುದಕ್ಕೆ ಪ್ರಯತ್ನಿಸುತ್ತಾರೆ, ಅದಕ್ಕೆ ಬೇಕಾದ ಕೃಷಿ ಮಾಡುತ್ತಾರೆ.

ಆದರೆ ಲೋಕದಲ್ಲಿ ಹೆಚ್ಚು ಶೇಕಡಾ ಜನರು ಜ್ಞಾನದ ಮೇಲೆ ದೃಷ್ಟಿ ಇಡುತ್ತಿಲ್ಲ, ಜ್ಞಾನದ ಬೆಲೆಯನ್ನು ತಿಳಿದುಕೊಳ್ಳುತ್ತಿಲ್ಲ, ಎಷ್ಟು ಹೊತ್ತೂ ಸಂಸಾರ, ಮಕ್ಕಳು, ಮೊಮ್ಮಕ್ಕಳು, ಹಣದ ಮೇಲೆ ದೃಷ್ಟಿ ಇಡುತ್ತಾರೆ. ಅದಕ್ಕೆ ಕಾರಣ ಮರಣಿಸಿದ ನಂತರ ನಡೆಯುವುದರ ಕುರಿತು ತಿಳುವಳಿಕೆಯು ಇಲ್ಲದಿರುವುದೇ.

** ** **

## ಯಾರಾಗಲಿ ಮರಣಾನಂತರ ಜೀವನವನ್ನು ಕುರಿತು ತಿಳಿದುಕೊಂಡಾಗ "ಆತ್ಮ ಬಂಧುಗಳೊಂದಿಗೆ ಕಳೆಯುವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾರೆ, ಅವರೊಂದಿಗೆ ಮಾತನಾಡುವುದಕ್ಕೆ ಆಸಕ್ತಿ ತೋರಿಸುತ್ತಾರೆ"

ಸಹಜವಾಗಿ ಯಾರಾದರೂ ದೇಹ ಬಂಧುಗಳೊಂದಿಗೆ ಹೆಚ್ಚು ಕಾಲ ಕಳೆಯುತ್ತಾರೆ, ಅಂದರೆ ರಕ್ತ ಸಂಬಂಧಿಕರು ಕಾಣಿಸಿದರೂ, ಫೋನ್ ಕರೆ ಮಾಡಿದರೂ ಎಷ್ಟೋ ಆಸಕ್ತಿಯಿಂದ ಮಾತನಾಡುತ್ತಾರೆ, ಮಾತನಾಡಿಸುತ್ತಾರೆ.

ಆದರೆ ಮರಣಾನಂತರ ಜೀವನವನ್ನು ಕುರಿತು ತಿಳಿದುಕೊಂಡಾಗ, ಆತ್ಮದ ಮೇಲೆ ಆಸಕ್ತಿ ಹೆಚ್ಚುತ್ತದೆ. ಆಗ ಧ್ಯಾನಿಗಳು ಕಾಣಿಸಿದರೂ, ಧ್ಯಾನಿಗಳು ಫೋನ್ ಮಾಡಿದರೂ, ಅವರೊಂದಿಗೆ ಗಂಟೆ ಗಟ್ಟಲೆ ಮಾತಾಡುತ್ತಾರೆ. ಆಸಕ್ತಿ ತೋರಿಸುತ್ತಾರೆ. ರೈಲಿನಲ್ಲಿ ಪ್ರಯಾಣ ಮಾಡಿದರೂ ಅಷ್ಟೇ, ಏನೂ ಮಾಡಿದರೂ ಸರಿ, ಆತ್ಮ ಸಂಬಂಧವಾದ ಸಂಭಾಷಣೆಗಳೇ ಇರುತ್ತವೆ.

ನಾನು ಆತ್ಮವೆನ್ನುವುದು ಅರಿವಾದಾಗ ಅಂತಹ ಆಸಕ್ತಿ ತಿಳಿಯದಂತೆ ಹೆಚ್ಚುತ್ತದೆ, ಹೆಚ್ಚಬೇಕು ಕೂಡಾ. ಹಾಗೆ ಬೆಳೆಯವುದೇ ನಾನು ಆತ್ಮ ಅನ್ನುವಂತೆ ಜೀವಿಸುವುದು, ಇದೊಂದು ಅದ್ಭುತ ಬದಲಾವಣೆ, ಇಂತಹ ಲಕ್ಷಣವು ನಿಮ್ಮಲ್ಲಿ ಕಾಣಿಸಿದರೆ ಖಂಡಿತವಾಗಿ ನೀವು ನಾನು ಆತ್ಮವೆನ್ನುವಂತೆ ಜೀವಿಸುತ್ತಿದ್ದಂತೆಯೇ ಲೆಕ್ಕ. ಹಾಗೆಯೇ ಸಮಾರಂಭಗಳಿಗೆ ಹೋಗುವುದರ ಮೇಲೆ ಅಷ್ಟು ಆಸಕ್ತಿ ಇರುವುದಿಲ್ಲ. ಆದರೆ ಈ ಆತ್ಮ ಕಾರ್ಯಕ್ರಮಗಳೀಗೆ, ಧ್ಯಾನ ಕಾರ್ಯಕ್ರಮಗಳಿಗೆ ಬಹಳ ಆಸಕ್ತಿಯಿಂದ ಹೋಗುತ್ತಿರುತ್ತಾರೆ.

ಈ ಮಾರ್ಗದಲ್ಲಿ ನೀವು ಎಷ್ಟು ಬೆಳೆದರೆ ನಿಮಗಷ್ಟು ಜ್ಞಾನವು ಬೆಳೆಯುತ್ತಿದ್ದಂತೆ ಲೆಕ್ಕ. ಜ್ಞಾನವು ಎಷ್ಟು ಬೆಳೆಯುತ್ತಾ ಇದ್ದರೆ ನಿಮ್ಮ ದುಃಖವು ಅಷ್ಟು ಕಡಿಮೆಯಾಗುತ್ತಾ ಇರುತ್ತದೆ. ಒಂದು ರೀತಿಯಲ್ಲಿ ಹೇಳಬೇಕೆಂದರೆ ! ದೇಹ ಬಂಧುಗಳಿಗಿಂತ, ಆತ್ಮ ಬಂಧುಗಳ ಜೊತೆ ಕಳೆಯುವುದಕ್ಕೆ, ಮಾತನಾಡುವುದಕ್ಕೆ ಹೆಚ್ಚು ಆಸಕ್ತಿಯನ್ನು ತೋರಿಸುತ್ತೀರಿ.

** ** **

## "ಮರಣಿಸಿದ ನಂತರ ನಡೆಯುವುದು ತಿಳಿದರೆ ! ಕುಟುಂಬದಲ್ಲಿಯವರೆಲ್ಲಾ ಅಂದರೆ ನನ್ನ ಹೆಂಡತಿ, ನನ್ನ ಗಂಡ, ನನ್ನ ಮಕ್ಕಳು ಅಂದುಕೊಳ್ಳುವವರೆಲ್ಲಾ ನನ್ನವರು ಅಲ್ಲ ಎಂದು ತಿಳಿಯುತ್ತದೆ"

ಏಕೆಂದರೆ ತಾನು ಆತ್ಮನು ಎಂದು ಹೇಗೆ ತಿಳಿದುಕೊಳ್ಳುತ್ತಾರೋ ತನ್ನವರು ಅಂದುಕೊಳ್ಳುವವರೆಲ್ಲಾ ಕೂಡಾ ಆತ್ಮಗಳೇ! ತಾನು ಯಾವುದೋ ಒಂದು ಲೋಕದಿಂದ ಒಂದು ದೇಹವನ್ನು ಹೇಗೆ ತೆಗೆದುಕೊಂಡಿದ್ದಾನೋ ! ಅವರೆಲ್ಲಾ ಇತರ ಲೋಕಗಳಿಂದ ಬಂದು ದೇಹಗಳನ್ನು ತೆಗೆದುಕೊಂಡವರೇ ಎಂದು ಅರ್ಥವಾಗುತ್ತದೆ.

ತನ್ನ ಕೆಲಸ ಪೂರ್ತಿ ಆದರೆ ತಾನು ಹೇಗೆ ನಿಷ್ಕ್ರಮಿಸ್ತಾನೋ ಅವರು ಕೂಡಾ ಅವರ ಕೆಲಸ ಪೂರ್ತಿ ಆದರೆ ಹಾಗೇ ನಿಷ್ಕ್ರಮಿಸಬೇಕಾದವರೇ ಎಂದು ಅರ್ಥವಾಗುತ್ತದೆ.

ಆದಕಾರಣ ಹೆಂಡತಿಯ ಮೇಲೆ, ಗಂಡ ಮೇಲೆ, ಮಕ್ಕಳ ಮೇಲೆ ಮಮಕಾರ ಇರುವುದಿಲ್ಲ, ಧನ ಮೇಲೆ ವ್ಯಾಮೋಹ ಹೋಗುತ್ತದೆ, ಆದಕಾರಣ ಕುಟುಂಬದಲ್ಲಿರುವವರಿಗಾಗಿ ತಪ್ಪುಗಳನ್ನು, ಪಾಪಗಳನ್ನು ಮಾಡುವುದಿಲ್ಲ. ಅಧರ್ಮದಿಂದ ಸಂಪಾದಿಸರು. ಪಾಪದ ಮೂಟೆಯನ್ನು ಕಟ್ಟಿಕೊಳ್ಳುವುದಿಲ್ಲ. ಇವೆಲ್ಲವು ಅಮರರಾಗಲು ಎಷ್ಟೋ ಉಪಕರಿಸುತ್ತವೆ.

ಹಾಗೆಯೇ ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ! "ಕುಟುಂಬದ ಸದಸ್ಯರಿಗೆ, ಬಂಧುಗಳಿಗೆ ಯಾರಿಗೆ ಏನಾದರೂ ಅಂದರೆ ದೂರವಾದರೂ, ಮರಣಿಸಿದರೂ ಅಳುವುದಿಲ್ಲ, ದುಃಖಿಸರು. ಆದರೆ ಅವರಿಗೆ ಬೇಕಾದ ಸಹಾಯವನ್ನು ಮಾಡುತ್ತಾರೆ, ಸೇವೆಗಳನ್ನು ಮಾಡುತ್ತಾರೆ, ಬೇಕಾದವುಗಳನ್ನೆಲ್ಲಾ ನೋಡಿಕೊಳ್ಳುತ್ತಾರೆ".

ಎಲ್ಲರ ಮೇಲೆ ಮಮಕಾರ ಇಲ್ಲದೆ ಇರುವುದರಿಂದ ಮರಣಿಸಿದ ನಂತರ ಬಂದ ಸಹಾಯಕರೊಡನೆ ಮೇಲಿನ ಲೋಕಗಳಿಗೆ ಹೋಗಿ ಬಿಡುತ್ತಾರೆ. ಪ್ರೇತಾತ್ಮಗಳಾಗುವುದಿಲ್ಲ, ಎಷ್ಟೋ ಸಮಯವನ್ನು ಉಳಿತಾಯ ಮಾಡಿಕೊಳ್ಳುತ್ತಾರೆ.

** ** **

## ಮರಣಿಸಿದ ನಂತರ ನಡೆಯುವುದು ತಿಳಿದರೆ ! ಕುಟುಂಬದಲ್ಲಿಯವರೆಲ್ಲಾ "ಪ್ರಸ್ತುತ ಹೆಂಡತಿ, ಮಕ್ಕಳೇ ಅಲ್ಲಾ, ಅದಕ್ಕೂ ಮೊದಲು ಕೂಡಾ ಎಷ್ಟೋ ಮಂದಿ ಹೆಂಡತಿಯರು, ಗಂಡಂದಿರು, ಮಕ್ಕಳು ಇದ್ದಾರೆಂದು ತಿಳಿಯುತ್ತದೆ"

ಸಹಜವಾಗಿ ಪ್ರಸ್ತುತ ಇರುವ ಹೆಂಡತಿಯನ್ನೇ ಹೆಂಡತಿ ಎಂದು ಕೊಳ್ಳುತ್ತಾರೆ. ಗಂಡನನ್ನೇ ಗಂಡನೆಂದುಕೊಳ್ಳುತ್ತಾರೆ. ಮಕ್ಕಳನ್ನೇ ಮಕ್ಕಳು ಎಂದು ಕೊಳ್ಳುತ್ತಾರೆ. ಆದರೆ ಮರಣಿಸಿದ ನಂತರ ನಡೆಯುವುದು ತಿಳಿದರೆ ಅದಕ್ಕೂ ಮೊದಲು ಜನ್ಮಗಳಲ್ಲಿ ಎಷ್ಟೋ ಮಂದಿ ಹೆಂಡತಿಯರು, ಗಂಡಂದಿರು ಮಕ್ಕಳು ಇದ್ದಾರೆಂದು ತಿಳಿಯುತ್ತದೆ.

ಇದು ನಮಗೆ ಚೆನ್ನಾಗಿ ಅರ್ಥವಾಗಬೇಕೆಂದರೆ ಮಹಾಭಾರತದಲ್ಲಿ ಅಭಿಮನ್ಯುವಿನ ವಿಷಯದಲ್ಲಿ ನಡೆದುದನ್ನು ತಿಳಿದುಕೊಂಡರೆ ತಿಳಿಯುತ್ತದೆ. ಮಹಾಭಾರತ ಯುದ್ಧದಲ್ಲಿ ಅಭಿಮನ್ಯನು ಪದ್ಮವ್ಯೂಹದಲ್ಲಿ ಸಿಕ್ಕಿ ಬಿದ್ದು ಮರಣಿಸಿದನು. ಅರ್ಜುನನು ಯುದ್ಧದಿಂದ ತಿರುಗಿ ಬಂದ ಮೇಲೆ ಈ ವಿಷಯವು ತಿಳಿಯಿತು.

ಆಡ ಅರ್ಜುನನು ತನ್ನ ಮಗನು ಅಭಿಮನ್ಯನು ಸತ್ತು ಹೋದನೆಂದು ವಿಪರೀತವಾಗಿ ಅತ್ತನು. ನಿನ್ನಿಂದಲೇ ಇದೆಲ್ಲಾ ನಡೆಯಿತೆಂದು ಶ್ರೀ ಕೃಷ್ಣನನ್ನು ನಿಂದಿಸಿದನು. ಆಗ ಶ್ರೀ ಕೃಷ್ಣನು ಅರ್ಜುನನನ್ನು ಸೂಕ್ಷ್ಮ ಶರೀರದೊಂದಿಗೆ ಅಭಿಮನ್ಯು ಇರುವ ಲೋಕಕ್ಕೆ ಕಳುಹಿಸಿದನು.

ಆಗ ಅಲ್ಲಿ ಅಭಿಮನ್ಯುವನ್ನು ನೋಡಿ ಅರ್ಜುನನು ಮಾತನಾಡಿಸಿದನು. ಆಗ ಅಭಿಮನ್ಯನು ಯಾರು ನೀನು? ಎಂದನು. ಅರ್ಜುನನು ಆಶ್ಚರ್ಯಗೊಳ್ಳುತ್ತಾನೆ. ನಿನ್ನ ತಂದೆ ಎಂದು ಉತ್ತರ ನೀಡಿದನು. ಆಗ ಅಭಿಮನ್ಯನು ಯಾವ ತಂದೆ ಎಂದು ಪ್ರಶ್ನಿಸಿದರೆ ಅರ್ಜುನನ್ನು ಆಶ್ಚರ್ಯ ಪಡುತ್ತಾನೆ. ಆಗ ಅರ್ಥವಾಯಿತು ಅವನೊಂದಿಗೆ ಅನುಬಂಧವು ತೀರಿ ಹೋಯಿತೆಂದು ತಿಳಿದುಕೊಂಡನು. ತಿರುಗಿ ಶ್ರೀ ಕೃಷ್ಣನ ಬಳಿಗೆ ಬಂದನು, ನಡೆದದ್ದನ್ನು ಹೇಳಿ ಮತ್ತೇ ಯುದ್ಧಕ್ಕೆ ಸಿದ್ಧನಾದನು.

ಇದನ್ನು ಆಧರಿಸಿ ಪ್ರತಿಯೊಬ್ಬರಿಗೆ ಇನ್ನೂ ಇಷ್ಟೋ ಮಂದಿ ಹೆಂಡತಿಯರು, ಗಂಡಂದಿರು, ಮಕ್ಕಳು, ತಂದೆ-ತಾಯಿಗಳು ಇದ್ದಾರೆಂದು ತಿಳಿದುಕೊಳ್ಳಬಹುದು. ಇದೆಲ್ಲಾ ಮರಣಿಸಿದ ನಂತರ ನಡೆಯುತ್ತದೆಂದು ತಿಳಿದುಕೊಳ್ಳುವುದರಿಂದ ತಿಳಿಯುತ್ತದೆ. ಆದ್ದರಿಂದ ಅವರೆಲ್ಲರ ಮೇಲೆ ಇದ್ದ ಮಮಕಾರವು ವ್ಯಾಮೋಹವು ಹೋಗುತ್ತದೆ.

** ** **

## ಮರಣಿಸಿದ ನಂತರ ನಡೆಯುವುದು ತಿಳಿದುಕೊಂಡರೆ? "ತಾನು ಸಂಪಾದಿಸಿದವು ಯಾವುವು ಮರಣಿಸಿದ ನಂತರ ಹಿಂದೆ ಬರುವುದಿಲ್ಲವೆಂದು ತಿಳಿದುಕೊಳ್ಳುತ್ತಾರೆ"

**ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ ತಾನು ಸಂಪಾದಿಸಿದದಾಗಲಿ, ನನ್ನವು ಎಂದು ಕೊಂಡತಹವಾಗಲಿ, ನನ್ನವರು ಎಂದು ಕೊಂಡವರಾಗಲಿ, ಪದವಿಗಳು, ಘನತೆ, ಬಿರುದುಗಳು, ಅವಾರ್ಡ್‌ಗಳು, ಉನ್ನತವಾದ ಉದ್ಯೋಗಗಳಾಗಲಿ ಎಷ್ಟು ಶ್ರೇಷ್ಠವಾದವು ಆಗಿರಲಿ ಸರಿ, ಕೂಡಾ ಬರುವುದಿಲ್ಲವೆಂದು, ಮೇಲೆ ಹೋಗುವಂತಹ ತನಗೆ ಅಂದರೆ ಆತ್ಮಕ್ಕೆ ಉಪಯೋಗವಾಗವು ಎಂದು ತಿಳಿದುಕೊಳ್ಳುತ್ತಾರೆ.**

ತಾನು ಕಷ್ಟಪಟ್ಟು ಸಂಪಾದಿಸಿದವು, ಸಂಗ್ರಹಿಸಿದವು, ನನ್ನವು ಎಂದುಕೊಂಡವು ಅಂದರೆ ಹಣ, ಸಂಪತ್ತುಗಳು, ಆಸ್ತಿಗಳು, ಭೂಮಿಗಳು ಎಲ್ಲವು ತನ್ನವಲ್ಲವೆಂದು, ತನ್ನ ಕೂಡಾ ಬರುವುದಿಲ್ಲ ತಿಳಿದುಕೊಳ್ಳುತ್ತಾರೆ.

ಮರಣಿಸಿದ ನಂತರ ನಡೆಯುವುದು ತಿಳಿದುಕೊಂಡರೆ **"ಧನ ಸಂಪಾದನೆಯ ಮೇಲೆ ಆಸಕ್ತಿ ಕಡಿಮೆಯಾಗುತ್ತದೆ, ಇರುವುದರಲ್ಲಿಯೇ ತೃಪ್ತಿಯಾಗಿ ಜೀವಿಸುತ್ತಾರೆ"** ಆದ್ದರಿಂದ ಯಾವಾಗಲೂ ಇರುವುದಲ್ಲಿಯೇ ತೃಪ್ತಿಪಡಿರಿ, ನಿಮಗೆ ಅರ್ಹತೆ ಬೆಳೆದರೆ ನೀವು ಪ್ರಯತ್ನಿಸದಿದ್ದರೂ, ಸಹಜವಾಗಿ ಎಲ್ಲಾ ಬರುತ್ತವೆ. ಈ ವಿಷಯವನ್ನು ಗುರುತಿಸದೇ ಆಸೆಪಟ್ಟು ಮಾಡಬಾರದ ಕೆಲಸಗಳನ್ನು ಮಾಡಿದರೆ ಇರುವಂತಹವೂ ಹೋಗುತ್ತವೆ. ಆದ್ದರಿಂದ ಇರುವುದರಲ್ಲಿಯೇ ತೃಪ್ತಿಯಾಗಿ ಜೀವಿಸಿರಿ. ಅಗತ್ಯಗಳಿಗೆ ಪರಿಮಿತವಾದರೆ ನೀವು ಬಹಳ ತೃಪ್ತಿಯಿಂದ ಇರುತ್ತೀರಿ, ಜೀವನದಲ್ಲಿ ಯಾವ ಕೊರತೆಯೂ ಬಾರದು.

ನನ್ನ ಜೀವನದಲ್ಲಿ ಅದೇ ನಡೆಯಿತು. ನಾನು 2002 ನವೆಂಬರ್‌ನಲ್ಲಿ ಪತ್ರೀಜಿಯವರ ಪರಿಚಯವಾದ ಮೇಲೆ ವ್ಯಾಪಾರಗಳನ್ನು ಬಿಟ್ಟೆನು. 2003 ಫೆಬ್ರವರಿಯಲ್ಲಿ ಮೇಡಂಗೆ ಅಗ್ನಿ ಅಪಘಾತವಾಯಿತು. ಅದಕ್ಕೆ ಲಕ್ಷಗಳ ಮೇಲೆಯೇ ಹಣ ಖರ್ಚು ಮಾಡಬೇಕು, ಅಷ್ಟೇ ಅಲ್ಲದೆ, ಮಕ್ಕಳನ್ನು ಹೊರಗೆ ಕಳುಹಿಸಿ ಬಿಟ್ಟೆನು. ಅವರೆಲ್ಲರಿಗೆ ಕೊಡಬೇಕಾದ ಅಂದರೆ ಹಣ, ಆಸ್ತಿಗಳನ್ನು ಅವರಿಗೆ ಕೊಟ್ಟು ಬಿಟ್ಟೆನು. ಆಗ ಇರುವ ಪರಿಸ್ಥಿತಿ ನೋಡಿದರೆ ಆಸ್ತಿಗಳು ಕೋಟಿಗಟ್ಟಲೆ ಇವೆ, ಹಣದ ಪರವಾಗಿ ನೋಡಿದರೆ ಬಹಳ ಕಡಿಮೆಯಾಯಿತು.

ಇದರಲ್ಲಿ ಬಂದ ಮೇಲೆ ಈ ಸೇವೆಗಳ ನಿಮಿತ್ತ ಕೆಲವು ಖರ್ಚುಗಳು ಬೆಳೆದವು, 3 ದಿನಗಳ ಕ್ಲಾಸ್‌ಗಳನ್ನು ಇಡುವುದು, ಅದರ ನಿರ್ವಹಣೆ, ಪ್ರಚಾರಕ್ಕಾಗಿ ಎಲ್ಲಾ ಕಡೆ ತಿರುಗುವುದು, ಹಾಗೇ ಸಹಜವಾಗಿರುವ ಅಗತ್ಯಗಳಿಂದಾಗಿ ಖರ್ಚು ಹೆಚ್ಚಿತು, ಸ್ವಲ್ಪ ಸಮಸ್ಯೆಗೀಡಾದೆನು. ನಾಲ್ಕು ವರ್ಷಗಳಾಗುವುದರಲ್ಲಿ ಈ ಪುಸ್ತಕಗಳ ಪ್ರಿಂಟ್ ಮಾಡುವುದಕ್ಕೆ ಮತ್ತೇ ಎಷ್ಟೋ ಹಣದ ಅಗತ್ಯವಾಯಿತು.

ಒಚಿದು ರೀತಿಯಲ್ಲಿ ಆ ಸಮಯದಲ್ಲಿ ಆರ್ಥಿಕವಾಗಿ ಕಷ್ಟಪಟ್ಟೆನು. ಆದರೂ ಸದರಿ ಅಗತ್ಯಗಳಿಗೆ ಪರಿಮಿತವಾಗಿ ಅಲ್ಲಿಗಲ್ಲಿಗೇ ಕಕ್ಕುಲಾತಿಯಿಂದ ಜೀವಿಸಿದೆನು. ಹಾಗೆ 2012ರವರೆಗೆ ಒಂದು ರೀತಿಯಲ್ಲಿ ಹೇಳಬೇಕೆಂದರೆ 10 ವರ್ಷಗಳು ಅಷ್ಟು ಕಷ್ಟವಿದ್ದರೂ ಮತ್ತೆ ವ್ಯಾಪಾರ ಮಾಡಿ ಸಂಪಾದಿಸುವ ಪ್ರಯತ್ನ ಮಾಡಲಿಲ್ಲ. ಏಕೋ ತಿಳಿಯದು ಈ ಮಾರ್ಗದಲ್ಲಿ ತಿರುಗುವುದು, ಈ ಜ್ಞಾನವನ್ನು ಕೊಡುವುದು, ಈ ಸೇವೆಗಳಲ್ಲಿ ಪಾಲ್ಗೊಳ್ಳುವುದೇ ಮಾಡಿದೆನು.

ಆಗ ಕಡ್ತಾಲ್‌ಗೆ ದೇಣಿಗೆ ಕೊಡಬೇಕೆಂದರೆ 3–4 ತಿಂಗಳಿಂದಲೇ ಉಳಿತಾಯ ಮಾಡಿ ಮೇಡಂಗೆ ಕೊಡುತ್ತಿದ್ದೆನು. ಅವಳು ಒಂದು ಲಕ್ಷ, 2 ಲಕ್ಷಗಳು ಆದ ಮೇಲೆ ತೆಗೆದುಕೊಂಡು ಹೋಗಿ ಸಾರ್ ಕೈಗೆ ಕೊಡುತ್ತಿದ್ದಳು. ಆ ಪರಿಸ್ಥಿತಿ ಹಾಗಿತ್ತು. ನಾವು ಮಾಡಿದ ಸೇವೆಗಳಿಂದಲೋ, ಪುಣ್ಯಗಳಿಂದಲೋ 2013ರಿಂದ ಬಹಳ ಬದಲಾವಣೆಗಳು ಬಂದವು. ವ್ಯಾಪಾರವನ್ನು ಮಾಡದಿದ್ದರೂ ಆರ್ಥಿಕವಾಗಿ ಬಹಳ ಬಲಗೊಳ್ಳುವುದು ಪ್ರಾರಂಭವಾಯಿತು.

ಆದ್ದರಿಂದ ಇರುವುದರಲ್ಲಿಯೇ ತೃಪ್ತಿಯಾಗಿರಿ, ಅತ್ಯಾಸೆಗೆ ಹೋಗಬೇಡಿರಿ. ನಿಮಗೆ ಯೋಗ್ಯತೆ ಇದ್ದರೆ, ಅರ್ಹತೆ ಇದ್ದರೆ ಸಹಜವಾಗಿ ಯಾವುದೋ ರೂಪದಲ್ಲಿ ಬರುತ್ತದೆ. ಏನೋ ಸಂಪಾದಿಸಿ ಬಿಡೋಣ ಎಂದು ಮಾಡಬಾರದ ಕೆಲಸಗಳನ್ನು ಮಾಡಿದರೆ ಇದ್ದವು ಹೋಗುತ್ತವೆ, ಅರ್ಹತೆ ಎಷ್ಟು ಇದ್ದರೆ ಅಷ್ಟೇ ಬರುತ್ತದೆ. ಅರ್ಹತೆಯನ್ನಾಧರಿಸಿ ಅಂತಹ ಕುಟುಂಬಗಳಲ್ಲಿ ಹುಟ್ಟಿದ್ದೀರಿ, ಅಂತಹ ಕುಟುಂಬಗಳಲ್ಲಿ ಜೀವಿಸುತ್ತಿದ್ದೀರಿ, ಆದ್ದರಿಂದ ಇರುವುದರಲ್ಲಿಯೇ ತೃಪ್ತಿಪಡಬೇಕು.

ನಿಮಗಿರುವ ಧನವನ್ನು ಆತ್ಮಕ್ಕಾಗಿ ಅಂದರೆ ನಿಮಗಾಗಿ ಖರ್ಚ ಮಾಡಿದರೆ ಖಚಿತವಾಗಿ ನೀವು ಲಾಭವನ್ನು ಹೊಂದುತ್ತೀರಿ. ಇದು ನನ್ನ ಜೀವನದಲ್ಲಿ ನಡೆದಿದೆ. ನನ್ನ ಒಟ್ಟಾರೆ ಜೀವನದಲ್ಲಿ ಕಕ್ಕುಲಾತಿಯಿಂದ ಬದುಕಿದ ಸುಮಾರು ಆ 10 ವರ್ಷಗಳು ಎಂದಿಗೂಹಾಗೆ ಬದುಕಲಿಲ್ಲ. ಅದು ಪ್ರಕೃತಿ ಪರೀಕ್ಷೆ ಎಂದುಕೊಂಡೆ.

ಇರುವ ಹಣವನ್ನು ಆತ್ಮ ಕಾರ್ಯಗಳಿಗೆ, ಆತ್ಮ ಸೇವೆಗಳಿಗೆ ಖರ್ಚು ಮಾಡಿದೆನು, ಮೋಜುಗಳಿಗೆ, ಆಡಂಬರಿಗಳಿಗೆ ಇಂತಹವು ಏನೂ ಇಲ್ಲ. ಆದ್ದರಿಂದ ಧನವನ್ನು ಭೌತಿಕ ಸುಖಗಳಿಗೆ ಅಲ್ಲದೆ ಆತ್ಮ ಉನ್ನತಿಗೆ, ಆತ್ಮದ ಲಾಭಗಳಿಗೆ ಉಪಯೋಗಿಸಬೇಕು, ಅಂದರೆ ಆತ್ಮ ಸೇವೆಗಳು ಮಾಡಬೇಕು.

** ** **

## ಮರಣಿಸಿದ ನಂತರದನ್ನು ಕುರಿತು ತಿಳಿದುಕೊಂಡರೆ? "ಇರಲಾರದವುಗಳಿಗೆ ಪ್ರಾಮುಖ್ಯತೆ ಕೊಡುವುದಿಲ್ಲ, ಇರುವಂತಹವುಗಳಿಗೇ ಪ್ರಾಮುಖ್ಯತೆ ಕೊಡುತ್ತಾರೆ"

ಮರಣದ ನಂತರ ನಡೆಯುವುದನ್ನು ತಿಳಿದುಕೊಂಡರೆ ತಾನು ಅಲ್ಲಿಯವರೆಗೆ ಮಾಡಿದವು, ಸಾಧಿಸಿದವು, ಸಂಪಾದಿಸಿಕೊಂಡು ಸಂಭ್ರಮಿಸಿದ್ದು ಯಾವುವು ಇರುವುದಿಲ್ಲ. ಹಿಂದೆ ಬರುವುದಿಲ್ಲ ಎಂದು ತಿಳಿಯುತ್ತದೆ. ಯಾವುವು ಉಪಯೋಗವಾಗವು, ಪಟ್ಟ ಕಷ್ಟವೆಲ್ಲಾ ವ್ಯರ್ಥವೆಂದು ತಿಳಿಯುತ್ತದೆ.

ಮತ್ತೆ ನಾನು ಕೂಡಾ ಪತ್ರೀಜಿಯವರ ಪರಿಚಯವಾಗುವ ಮೊದಲು ಈ ಶರೀರ ಶಾಶ್ವತ ಎಂದುಕೊಂಡೆನು, ಈ ಶರೀರ ಸುಖವೇ ನನ್ನ ಸುಖ ಎಂದುಕೊಂಡೆನು. ಈ ಶರೀರಕ್ಕೆ ಆಗುವ ಲಾಭವೇ ನನ್ನ ಲಾಭವೆಂದುಕೊಂಡೆನು. ಸಂಪಾದಿಸಿದವೆಲ್ಲಾ ನೋಡಿಕೊಂಡು ಅಹಂಕರಿಸಿದೆನು. ಯಾವಾಗಾದರೆ ಪತ್ರೀಜಿಯುವರು ಪರಿಚಯವಾದರೋ ಯಾವ ಶರೀರಕ್ಕಾಗಿ 53 ವರ್ಷಗಳು ನಾನು ಕಷ್ಟಪಟ್ಟೆನೋ ಆ ಶರೀರ ನಾನಲ್ಲ ಎಂದನಾತ.

ಪತ್ರೀಜಿಯವರು ನಮಗೆಲ್ಲರಿಗೂ ದಿಕ್ಸೂಚಿಯಂತವರು. ದಿಕ್ಸೂಚಿ ಯಾವಾಗಲೂ ಕೂಡಾ ಉತ್ತರದ ಕಡೆಗೇ ತೋರಿಸುತ್ತಾ ಇರುತ್ತದೆ. ಹಾಗೆಯೇ ಏನು ಮಾಡಬಾರದೋ? ಹೇಗೆ ನಡೆದುಕೊಳ್ಳಬೇಕೋ? ಹೇಗೆ ನಡೆದುಕೊಳ್ಳಬಾರದೋ? ಹೇಗೆ ಮಾತನಾಡಬೇಕು? ಹೇಗೆ ಮಾತನಾಡಬಾರದೋ? ಎಂದು ಅರ್ಥವಾಗುವ ರೀತಿಯಲ್ಲಿ ಬೋಧಿಸುತ್ತಾರೆ.

ಪತ್ರೀಜಿಯವರು ನಿಮ್ಮ ಜೀವನದಲ್ಲಿ ಪ್ರವೇಶಿಸುವ ಮೊದಲು ನಿಮ್ಮ ಜೀವನಗಳು ಒಂದು ರೀತಿಯಾಗಿ ಇದ್ದವು, ಆತನು ಪ್ರವೇಶಿಸಿದ ನಂತರ ಸಂಪೂರ್ಣವಾಗಿ ಬದಲಾಗಿ ಬಿಟ್ಟವು. ಅದಕ್ಕೂ ಮೊದಲು ಎಲ್ಲಾ ಅರ್ಥವಿಲ್ಲದ ಜೀವನವನ್ನು ಜೀವಿಸಿದೆವು, ಆದರೆ ಈಗ ಅರ್ಥವಂತವಾದ ಜೀವನವನ್ನು ಜೀವಿಸುತ್ತಾ ಇದ್ದೇವೆ.

ಪತ್ರೀಜಿಯವರು ಶರೀರವು ಬೂದಿಯಾದರೂ, ಆತ್ಮವಿರುತ್ತದೆಂದು ಹೇಳಿದ್ದಾರೆ. ಅಂದರೆ ಇರುವುದು ಆತ್ಮ, ಇರಲಾರದ್ದು ಶರೀರವು ಎಂಬುದು ನನಗೆ ಅರ್ಥವಾಯಿತು. ಪ್ರತಿ ವಿಷಯವನ್ನು ಬಹಳ ಆಳವಾಗಿ ಆಲೋಚಿಸುತ್ತಿರುವವನು, ನಾನು ಕುರುಡಾಗಿ ನಂಬುತ್ತಿರಲಿಲ್ಲ, ಹಿಂದಿನಿಂದಲೂ ಬರುತ್ತಿದೆಯೆಂದು ಕುರುಡಾಗಿ ಅನುಸರಿಸುವವನು ಅಲ್ಲ, ಯಾರಾದರೂ ದೊಡ್ಡವರು ಹೇಳಿದರೆ ಸ್ವಲ್ಪ ಆಲೋಚಿಸುತ್ತಿದ್ದೆನು. ಹಾಗೆ

ಪತ್ರೀಜಿಯವರು ಹೇಳಿದೊಡನೆಯೇ ಆಲೋಚನೆಯಲ್ಲಿಬಿದ್ದೆನು. ನಾನು ತಿಳಿದುಕೊಂಡದ್ದು ಸ್ವಲ್ಪವೇ, ಅವರಿಗೆ ಎಷ್ಟೋ ಗೊತ್ತು, ನಿಜವಾಗಿಯೂ ಮೊದಲು ಅಂತಹ ಶ್ರೇಷ್ಠರೆಲ್ಲರು ಹೇಳಿದಾಗ ಆಚರಿಸಬೇಕೆಂಬ ಅಭಿಪ್ರಾಯವು ಕೂಡಾ ಇತ್ತು.

ಆದ್ದರಿಂದ ಇಲ್ಲಿರುವುದು ಆತ್ಮ, ಇರಲಾರದ್ದು ಶರೀರ ಎಂಬುದು ಅರ್ಥವಾಯಿತು. ಅದಕ್ಕೆ ಸ್ವಲ್ಪ ಅಧ್ಯಯನ ಮಾಡಿದೆನು. ಹಿಂದೆ ಬಾರದ ಧನ ಸಂಪಾದಿಸುವದಕ್ಕೆ ಏಕೆ ಇಷ್ಟು ಕಷ್ಟಪಡುವುದು? ಎಂದು ಅನಿಸಿತು. ಆ ಧನವನ್ನು ಅಧರ್ಮವಾಗಿ ಸಂಪಾದಿಸುತ್ತಿದ್ದೇನೆಂದು ನನಗೆ ಗೊತ್ತು. ಇರದ ಹಣವನ್ನು ಅಧರ್ಮವಾಗಿ ಸಂಪಾದಿಸುವುದು, ತಪ್ಪುಗಳನ್ನು ಮಾಡುತ್ತಾ ಸಂಪಾದಿಸುವುದೆಂದರೇನು ಎಂದು ಅನಿಸಿತು, ತಕ್ಷಣವೇ ವ್ಯಾಪಾರಗಳನ್ನು ಬಿಟ್ಟೆನು.

ಈಗ ನಾನು ಸಂಪಾದಿಸದಿದ್ದರೂ ನನಗಾಗಲಿ, ನನ್ನ ಕುಟುಂಬಕ್ಕಾಗಲಿ ಯಾವ ಕೊರತೆಯೂ ಇಲ್ಲ. ಇನ್ನು ಏಕೆ ನಾನು ಕಷ್ಟಪಡುವುದು? ಈ ಇರಲಾರದವುಗಳಿಗಾಗಿಯೇ? ಈ ದೇಹಕ್ಕಾಗಿಯೇ? ಎಂದು ಹೇಳಿ ಅವನ್ನೆಲ್ಲಾ ಪೂರ್ತಿಯಾಗಿ ಬಿಟ್ಟೆನು. ಇರುವ ಆತ್ಮದ ಕುರಿತು ಆಲೋಚಿಸಿದೆನು, ಆತ್ಮಕ್ಕೆ ಪ್ರಾಮುಖ್ಯತೆ ಕೊಟ್ಟೆನು. ಆತ್ಮಕ್ಕೆ ಲಾಭಿಸುವಂತವೇ, ಆತ್ಮಕ್ಕೆ ಉನ್ನತಿಯುಂಟು ಮಾಡುವಂತವೇ ಸಂಪಾದಿಸಲು ಪ್ರಾರಂಭಿಸಿದೆನು.

ಆತ್ಮಕ್ಕೆ ನಷ್ಟವನ್ನುಂಟು ಮಾಡುವ ಅಧರ್ಮವಾದ ಕೆಲಸಗಳನ್ನು, ಪಾಪದ ಕೆಲಸಗಳನ್ನು, ಅನ್ಯಾಯದ ಕೆಲಸಗಳನ್ನೆಲ್ಲಾ ಬಿಟ್ಟೆನು. ಹಾಗೆಯೇ ನನಗಿರುವ ಧನವನ್ನು ಆತ್ಮದ ಉನ್ನತಿಗೆ ಖರ್ಚು ಮಾಡಿದರೆ ಎಷ್ಟು ಲಾಭವನ್ನು ಹೊಂದುತ್ತೇನೋ ಎಂದು ತಿಳಿದ ಮೇಲೆ, ಅಲ್ಲಿಯವರೆಗೆ ದೇಹ ಲಾಭಗಳಿಗಾಗಿ, ದೇಹ ಸುಖಕ್ಕಾಗಿ, ದೇಹಕ್ಕಾಗಿ ಅನಗತ್ಯವಾಗಿ ಖರ್ಚು ಮಾಡುತ್ತಿದ್ದವುಗಳನ್ನು ಆತ್ಮ ಸೇವೆಗಳಿಗೆ ಉಪಯೋಗಿಸಲು ಪ್ರಾರಂಭಿಸಿದೆನು.

ನಮಗಿರುವ ಧನವನ್ನು ಆತ್ಮಕ್ಕೆ ಲಾಭಿಸುವ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಉಪಯೋಗಿಸಿಕೊಳ್ಳುತ್ತಿದ್ದೇವೆ. ಅದಕ್ಕೆ ಈ ಸ್ಥಾಯಿಗೆ ಬಂದೆವು.

ಆದ್ದರಿಂದ ಆತ್ಮಕ್ಕೆ ಲಾಭಿಸುವ ಕರ್ಮಗಳೆಂದರೆ ಮುಕ್ತಿ ಕರ್ಮಗಳೇ ಮಾಡಲು ಆರಂಭಿಸಿದೆ.

ಇದಕ್ಕೂ ಮೊದಲು ಇದ್ದ ಅಭ್ಯಾಸಗಳು, ಇಷ್ಟಗಳು ದೇಹಕ್ಕೆ ಲಾಭಿಸುವಂತೆಯೇ ಇದ್ದವು. ಈಗಿರುವ ಅಭ್ಯಾಸಗಳು, ಇಷ್ಟಗಳು ಆತ್ಮಕ್ಕೆ ಲಾಭಿಸುವಂತವೇ ಇವೆ. ಆದ್ದರಿಂದ ನೀವಾದರೂ ಸರಿ, ಕೊಟ್ಟಿರುವುದರಲ್ಲಿಯೇ ತೃಪ್ತಿಯಾಗಿ ಜೀವಿಸಬೇಕು.

ನಿಮಗಿರುವುದರಲ್ಲಿಯೇ ಸ್ವಲ್ಪ ಆತ್ಮ ಲಾಭಕ್ಕೆ ಆತ್ಮ ಸೇವೆಗಳಿಗೆ, ಆತ್ಮೋನ್ನತಿಗೆ ಖರ್ಚು ಮಾಡಬೇಕು.

ನಿಮ್ಮ ಸಮಯವನ್ನು ಕೂಡಾ ವ್ಯರ್ಥ ಮಾಡಬಾರದು. ನಿಮ್ಮ ಮಾತುಗಳು ಕೂಡಾ ಆತ್ಮಕ್ಕೆ ಲಾಭಿಸುವಂತೆಯೇ ಇರಬೇಕು. ಆವೇಶಗಳು, ಕೋಪಗಳು, ಹಠಗಳು, ಜಿದ್ದುಗಳು ಏನು ಬೇಡ. ಎಲ್ಲಾ ಒಂದೇ ಎಂಬುದು ಮರೆಯಬೇಡಿರಿ. ಅವರು ಅಜ್ಞಾನದಲ್ಲಿದ್ದಾರೆ, ನೀವು ಜ್ಞಾನವನ್ನು ಹೆಚ್ಚಿಸಿಕೊಳ್ಳುತ್ತಿದ್ದೀರಿ. ಅವರು ಆವೇಶಪಟ್ಟರೂ ನೀವು ಆವೇಶಪಡಬಾರದು, ಅವರು ಅವಸರ ಪಟ್ಟರೂ ನೀವು ಅವಸರ ಪಡಬಾರದು.

ಆದ್ದರಿಂದ ಮರಣಿಸಿದ ನಂತರ ನಡೆಯುವುದು ನೀವು ತಿಳಿದುಕೊಂಡಿರಾದರೆ **"ಇರುವುದಕ್ಕೇ ಅಂದರೆ ಮರಣಿಸಿದ ನಂತರ ಇರುವಂತವುಗಳಿಗೆ ಪ್ರಾಮುಖ್ಯತೆ ಕೊಡುತ್ತೀರಿ, ಇರಲಾರದವುಗಳಿಗೆ ಪ್ರಾಮುಖ್ಯತೆ ಕಡಿಮೆ ಮಾಡುತ್ತೀರಿ'.**

ಇಂತಹ ಬದಲಾವಣೆ ನಿಮ್ಮಲ್ಲಿ ಕಾಣಿಸುತ್ತಿದ್ದರೆ, ನಿಮಗೆ ಎಲ್ಲಿ ಎಂತಹ ಜೀವನವಿದ್ದರೂ, ಎಂತಹ ಪರಿಸ್ಥಿತಿಯಲ್ಲಿ ನೀವಿದ್ದರೂ, ಶರೀರವನ್ನು ಬಿಟ್ಟ ನಂತರ ಅದ್ಭುತವಾದ ಲೋಕಗಳನ್ನು ಸೇರಿಕೊಳ್ಳುತ್ತೀರಿ, ಅದ್ಭುತವಾದ ಭವಿಷ್ಯತ್ತು ಇರುತ್ತದೆ.

ಆದರೆ ಭೂಮಿಯ ಮೇಲೆ ನೋಡಿಕೊಂಡರೆ ನನ್ನ ಜೀವನವು ಹೀಗೆ ಬದಲಾಗಿ ಹೋಯಿತೇಕೆ? ಎಂದು ಕೊಳ್ಳುತ್ತೀರಿ. ಇದಕ್ಕೂ ಮೊದಲಿಗಿಂತಲೂ ಪೂರ್ತಿಯಾಗಿ ಭಿನ್ನವಾಗಿ, ವಿರುದ್ಧವಾಗಿ ಇದೆಯಲ್ಲಾ? ಎಂದುಕೊಳ್ಳುತ್ತೀರಿ. ಖಂಡಿತವಾಗಿ ಇತರರಿಗೆ ನೀವು ಹುಚ್ಚರಂತೆ ಕಾಣಿಸುತ್ತೀರಿ.



**"ಒಬ್ಬ ಮಹಾತ್ಮ ನಾದವನು, ಪೂರ್ಣ ಜ್ಞಾನಿ ಯಾವ ಕೆಲಸಕ್ಕಾಗಿ ಭೂಮಿಗೆ ಬಂದನೋ ಅಂತಿಮ ಕ್ಷಣದವರೆಗೆ ಆ ಕೆಲಸವನ್ನು ಮಾಡುವುದೇ ಉನ್ನತವಾದ ವಿಷಯ"**

**- ಬ್ರಹ್ಮರ್ಷಿ ಪಿತಾ ಮಹಾ ಪತ್ರೀಜಿ**

## ಮರಣಿಸಿದ ನಂತರ ನಡೆಯುವುದನ್ನು ಜೀವಿಸಿರುವಾಗಲೇ ತಿಳಿದುಕೊಂಡರೆ "ದೇಹಕ್ಕಾಗಿ ಮಾಡುವ ಬಹಳ ಖರ್ಚುಗಳನ್ನು ವ್ಯರ್ಥವೆಂದು ತಿಳಿದುಕೊಳ್ಳುತ್ತಾರೆ".

ಜೀವಿಸಿರುವಾಗಲೇ ದೇಹಕ್ಕೆ ಆಗುವ ಲಾಭಗಳೆಲ್ಲಾ ತನಗೆ ಆಗುವ ಲಾಭಗಳು ಎಂದುಕೊಳ್ಳುತ್ತಾರೆ. ಆದರೆ **"ಮರಣಿಸಿದ ನಂತರ ನಾನು ದೇಹವಲ್ಲ ಆತ್ಮವೆಂದು ತಿಳಿದುಕೊಳ್ಳುತ್ತಾರೆ"**. ದೇಹಕ್ಕಾಗಿ, ದೇಹ ಲಾಭಕ್ಕಾಗಿ ಕಷ್ಟಪಟ್ಟು ಸಂಪಾದಿಸಿಕೊಂಡವು ಎಲ್ಲಾ ಹಿಂದೆ ಬರುವುದಿಲ್ಲ, ಅವುಗಳಿಂದ ಆತ್ಮರಾದ ನನಗೆ ಯಾವ ಉಪಯೋಗವಿಲ್ಲವೆಂಬುದು ತಿಳಿಯುತ್ತದೆ.

ಪ್ರತಿಯೊಬ್ಬರು ಎಷ್ಟೋ ಕಷ್ಟಪಟ್ಟು ಹಣ ಸಂಪಾದಿಸುತ್ತಿದ್ದಾರೆ. ಈ ಸಂಪಾದಿಸಿದ ಹಣವನ್ನು ದೇಹಕ್ಕಾಗಿ, ದೇಹದ ಅಗತ್ಯಗಳಿಗಾಗಿಯೇ ಖರ್ಚು ಮಾಡುತ್ತಿದ್ದಾರೆ, ಯಾರ ಆರ್ಥಿಕ ಸ್ಥಿತಿಯನ್ನು ಆಧರಿಸಿ ಅವರು ಖರ್ಚು ಮಾಡುತ್ತಿದ್ದಾರೆ ಸಾವಿರಗಳನ್ನು ಖರ್ಚು ಮಾಡುವವರು ಇದ್ದಾರೆ, ಲಕ್ಷಗಳನ್ನು ಖರ್ಚು ಮಾಡುವವರೂ ಇದ್ದಾರೆ, ಕೋಟಿಗಳನ್ನು ಕೂಡಾ ಖರ್ಚು ಮಾಡುವವರಿದ್ದಾರೆ.

ಮರಣಿಸಿದ ನಂತರ ನಡೆಯುವುದನ್ನು ಯಾವಾಗಾದರೆ ತಿಳಿದುಕೊಳ್ಳುತ್ತಾರೋ ಆಗ, ಅವೆಲ್ಲಾ ವ್ಯರ್ಥವೆಂಬ ವಿಷಯ ತಿಳಿಯುತ್ತದೆ. ಅವರು ಮಾಡುವ ಖರ್ಚುಗಳು ಬದಲಾಗಿ ಬಿಡುತ್ತವೆ. ತನಗಿರುವ ಧನವನ್ನು ಆತ್ಮಕ್ಕಾಗಿ, ಆತ್ಮ ಲಾಭಕ್ಕಾಗಿ, ಆತ್ಮ ಜ್ಞಾನವನ್ನು ಸಂಪಾದಿಸಿಕೊಳ್ಳುವುದಕ್ಕಾಗಿ ಉಪಯೋಗಿಸುತ್ತಾರೆ.

ನನ್ನ ವಿಷಯಕ್ಕೆ ಬಂದರೆ ನಾನು ಚೆನ್ನಾಗಿಯೇ ಸಂಪಾದಿಸುತ್ತಿದ್ದೇನೆ, ಆಗಿರುವ ತಿಳುವಳಿಯಿಂದ ಏನೋ ಪುಣ್ಯಕಾರ್ಯಗಳು ಮಾಡಿದರೆ ಭೋಗಗಳು ಬರುತ್ತವೆ, ದೇಹದೊಂದಿಗೆ ಸುಖಪಡಬಹುದು ಎಂಬ ಭಾವನೆಯಿಂದ ಆ ಹಣವನ್ನು ದೇಹ ಸೇವೆಗಳಿಗೆ ಹೆಚ್ಚಾಗಿ ಉಪಯೋಗಿಸುತ್ತಿದ್ದೆನು. ಅಂತಹ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದ್ದೆನು. ಉಚಿತವಾಗಿ ಹೋಮಿಯೋಪತಿ ಹಾಸ್ಪಿಟಲನ್ನು ನಿರ್ವಹಿಸುತ್ತಿದ್ದೆವು. ನಮ್ಮ ಮೇಡಂ 25 ವರ್ಷಗಳಿಂದ ಹೆಣ್ಣು ಮಕ್ಕಳಿಗೆ ಕರಕುಶಲ ವೃತ್ತಿಯ ತರಬೇತಿಗಳನ್ನು ಉಚಿತವಾಗಿ ಕೊಡುತ್ತಿದ್ದಳು, ಹೀಗೆ ಕೆಲವು ಸೇವೆಗಳನ್ನು ಮಾಡುತ್ತಿದ್ದೆವು.

ಪತ್ರೀಜಿಯವರ ಪರಿಚಯವಾದ ಮೇಲೆ 'ನೀನು ದೇಹವಲ್ಲ ಆತ್ಮ' ಎಂದರು. ಆಶ್ಚರ್ಯವಾಯಿತು ! ನಂತರ ಇನ್ನೊಂದು ಹೇಳಿದರು 'ಮಾನವ ಸೇವೆಯೇ ಮಾಧವನ ಸೇವೆ' ಎನ್ನುತ್ತಾರೆ ಆದರೆ ಅಲ್ಲ, 'ಮಾಧವ ಸೇವೆಯೇ ಮಾನವ ಸೇವೆ' ಎಂದು

ಹೇಳಿದರು. ಆತನು ಮಾನವನಿಗೆ ಅಂದರೆ ದೇಹಕ್ಕೆ ಮಾಡುವ ಸೇವೆಗಳಿಂದ ಆತ್ಮಕ್ಕೆ ಲಾಭವಿಲ್ಲ, ಆತ್ಮಕ್ಕೆ ಮಾಡುವ ಸೇವೆಯೇ ಮಾನವನಿಗೆ ಲಾಭಿಸುವುದು ಎಂದು ಹೇಳಿದರು.

## "ಮರಣಿಸಿದ ನಂತರ ನಡೆಯುವುದನ್ನು ಜೀವಿಸಿರುವಾಗಲೇ ತಿಳಿದುಕೊಂಡರೆ ಆತ್ಮ ಸೇವೆಗಳನ್ನು ಮಾಡುತ್ತಾರೆ"

ಆತ್ಮ ಸೇವೆಗಳನ್ನು ಮಾಡಬೇಕೆಂದು ತಿಳಿದ ತಕ್ಷಣವೇ ನಾವಿಬ್ಬರೂ ದೇಹಕ್ಕೆ ಲಾಭಿಸುವ ಸೇವೆಗಳನ್ನು ನಿಲ್ಲಿಸಿ, ಆತ್ಮಕ್ಕೆ ಲಾಭಿಸುವ ಮೂರು ದಿನಗಳ ಆತ್ಮ ಜ್ಞಾನ ಶಿಕ್ಷಣ ಶಿಬಿರವನ್ನು ಪ್ರಾರಂಭಿಸಿದೆವು. ಆಗ ದೇಹ ಸೇವೆಗಳಿಗೆ ಖರ್ಚು ಮಾಡುವ ಆ ಹಣವನ್ನು, ಆತ್ಮ ಸೇವೆಗಳಿಗೆ ಖರ್ಚು ಮಾಡುತ್ತಿದ್ದೆವು. ಆದರೆ ಇದು ಅರ್ಥವಾದ ನಂತರ ಆ ಹಣವನ್ನು ಜ್ಞಾನ ಸಂಪಾದನೆಗೆ ಖರ್ಚು ಮಾಡುತ್ತಿದ್ದೇವೆ. ಮನಸ್ಸನ್ನು ಸಂತೋಷಪಡಿಸುವುದಕ್ಕಾಗಿ ಮಾಡುವ ವಿನೋದಗಳಿಂದ ಯಾವ ಪ್ರಯೋಜನವಿಲ್ಲವೆಂದು ತಿಳಿದುಕೊಂಡೆವು.

ನಾನು ಖರ್ಚುಗಳ ವಿಷಯದಲ್ಲಿ ಬಹಳ ಪಿಸಿನಾರಿತನದಿಂದ ಇರುತ್ತಿದ್ದೆನು. ಏಕೆಂದರೆ ವ್ಯರ್ಥವಾಗಿ ಖರ್ಚು ಮಾಡುವ ಬದಲು ಆ ಹಣವನ್ನು ಯಾವುದೋ ಪುಣ್ಯ ಕಾರ್ಯಕ್ಕೆ, ಲೋಕ ಕಲ್ಯಾಣಕ್ಕೆ ಉಪಯೋಗಿಸಿದರೆ ಒಳ್ಳೆಯದು ಎಂಬ ಭಾವದಲ್ಲಿರುತ್ತಿದ್ದೆ. ಇದರಲ್ಲಿ ಬಂದ ಮೇಲೆ ಕೂಡಾ ಅದೇ ಅಭ್ಯಾಸವು ಮುಂದುವರಿಯಿತು.

ನೀವು ನನ್ನ ಚಪ್ಪಲಿಗಳನ್ನು ನೋಡಿದರೆ 100 ರೂ ಒಳಗೆ ಇರುತ್ತವೆ. ಅವುಗಳನ್ನೇ ಬಳಸುತ್ತೇನೆ. 3000, 4000 ರೂಗಳವು ಕೂಡಾ ಇವೆ. ನನ್ನ ಆಲೋಚನೆ ಏನೆಂದರೆ? ಇವು ಎಷ್ಟು ಕಾಲ ಬಾಳಿಕೆ ಬರುತ್ತವೋ, ಅವು ಅಷ್ಟು ಕಾಲವೇ ಬಾಳಿಕೆ ಬರುತ್ತವೆ. ಆ 3000, 4000 ರೂ ಏಕೆ ವ್ಯರ್ಥ ಮಾಡಬೇಕು? ಆ ಹಣವನ್ನು ಲೋಕ ಕಲ್ಯಾಣಕರವಾದ ಕೆಲಸಕ್ಕೆ ಉಪಯೋಗಿಸಿದರೆ ಆ ಫಲಿತಾಂಶವು ನನಗೆ ಎಷ್ಟೋ ಲಾಭಗಳನ್ನು ತರುತ್ತವೆ ಎಂದೂ ಕೂಡಾ ಆಲೋಚಿಸುತ್ತಿದ್ದೆನು.

ಹಾಗೆಯೇ ನನ್ನ ಬಟ್ಟೆಗಳು ಮಾಸಿ ಹೋಗಿ, ಗಿಡ್ಡವಾಗಿರುತ್ತಿದ್ದವು. ಆ ಬಟ್ಟೆಗಳನ್ನು ಉಟ್ಟು ಕ್ಲಾಸ್ ಹೇಳಲು ಹೋದರೆ ಇವನಾ ಕ್ಲಾಸ್ ಹೇಳುವುದು? ಎಂಬ ಭಾವದಿಂದ ಇರುತ್ತಿದ್ದರು. ವಿಷಯವನ್ನು ಕೇಳಿದ ನಂತರ ಮಧ್ಯಾಹ್ನಕ್ಕೆ ನನ್ನ ಮೇಲೆ ನಂಬಿಕೆ ಬರುತ್ತಿತ್ತು.. ಓ ಈತನ ಬಳಿ ಬಹಳಷ್ಟು ವಿಷಯವಿದೆ, ಹೇಳಬಲ್ಲನು ಎಂದು.

ನಂತರ ಅರ್ಥವಾಯಿತು, ಕ್ಲಾಸ್‌ಗಳನ್ನು ಹೇಳಬೇಕು ಅಂದರೆ ವಸ್ತ್ರ ಸಂಹಿತೆ ಕೂಡಾ (ಡ್ರಸ್ ಕೋಡ್) ಚೆನ್ನಾಗಿರಬೇಕೆಂದು 'First Impression is the best impression' ಎನ್ನುತ್ತಾರಲ್ಲಾ? ಅದಕ್ಕೆ ನಾನು ಈಗ ಅದನ್ನೇ ಆಚರಿಸುತ್ತಿದ್ದೇನೆ.

ಎಲ್ಲರಿಗೂ ಅದೇ ಹೇಳುತ್ತೇನೆ. ಮೊದಲು ನಮ್ಮ ಮಾತುಗಳನ್ನು ಕೇಳಬೇಕೆಂದರೆ ಡ್ರಸ್‌ಕೋಡ್ ಚೆನ್ನಾಗಿರಬೇಕೆಂದು ಬದಲಾಯಿಸಿಕೊಂಡೆನು.

ಹಾಗೆಯೇ ರೈಲಿನಲ್ಲಿ ಪ್ರಯಾಣಿಸುತ್ತಿರುವಾಗ ಸ್ಲೀಪರ್‌ನಲ್ಲಿಯೇ ಹೋಗುತ್ತಿದ್ದೆನು, ಆಸ್ತಿ ನೋಡಿದರೆ ಕೋಟಿಗಳ ಮೇಲೆ ಇದೆ. ಏಕೆ ಕಕ್ಕುಲಾತಿ? ಅದಕ್ಕೆ ಖರ್ಚು ಮಾಡುವ ಬದಲು ಆ ಹಣವನ್ನು ಉಳಿತಾಯ ಮಾಡಿದರೆ, ಕ್ಲಾಸಿನಲ್ಲಿ ಪುಸ್ತಕಗಳನ್ನು ಉಚಿತವಾಗಿ ಕೊಡಬಹುದು, ಪುಸ್ತಕಗಳಿಗೆ ಒಳ್ಳೆಯ ರಿಯಾಯಿತಿ (ಡಿಸ್ಕೌಂಟ್) ಕೊಡಬಹುದೆಂದು ಆಲೋಚಿಸುತ್ತಿದ್ದೆನು. ಆ ಹಣವನ್ನು ಆತ್ಮ ಲಾಭಗಳಿಗಾಗಿ ಉಪಯೋಗಿಸುವುದರಿಂದ ಮರಣಿಸಿದ ನಂತರ ಎಷ್ಟೋ ಲಾಭಿಸುತ್ತದೆಂದು ತಿಳಿದುಕೊಂಡೆನು. ಆದ್ದರಿಂದ ಆತ್ಮದ ಅಗತ್ಯಗಳಿಗೆ ಧನವನ್ನು ಖರ್ಚು ಮಾಡುತ್ತಿದ್ದೆನು. ಆತ್ಮ ಲಾಭಕ್ಕಾಗಿ ಮಾಡುವ ಖರ್ಚುಗಳೆಲ್ಲವು ಹೇಗೆ ಲಾಭಿಸುತ್ತವೆಯೋ! ಮರಣಿಸಿದ ನಂತರ ನಮ್ಮನ್ನು ಸಹಾಯಕರು ಉನ್ನತ ಲೋಕಗಳಿಗೆ ಕರೆದುಕೊಂಡು ಹೋಗುವಾಗ ಅರ್ಥ ಆಗುತ್ತದೆ.

ಒಂದು ದೊಡ್ಡ ಅರಮನೆಯಲ್ಲಿ ವಾಸವಿರುವುದು, ಮಹಡಿಗಳ ಮನೆಯಲ್ಲಿ ಇದ್ದರೆ ಹೇಗೆ ಇರುತ್ತದೆ? ಯಾವುದೋ ಹಂಚಿನ ಮನೆಯಲ್ಲೋ, ಒಂದು ಶೀಟ್‌ಗಳ ಶೆಡ್‌ನಲ್ಲೋ ಇದ್ದರೆ ಹೇಗೆ ಇರುತ್ತದೆ? ಆಲೋಚಿಸಿರಿ. ಹಾಗೆಯೇ ಮರಣಿಸಿದ ನಂತರ ಅಧೋ ಲೋಕಗಳಿಗೆ ಸೇರಿಕೊಳ್ಳುವುದು ಬೇರೆ, ಶ್ರೇಷ್ಠವಾದ ಊರ್ಧ್ವ ಲೋಕಗಳಿಗೆ ಸೇರಿಕೊಳ್ಳುವುದು ಬೇರೆ. ಅಧೋ ಲೋಕಗಳಿಗೆ ಕರ್ಮಗಳನ್ನಾಧರಿಸಿ ಹೋಗುತ್ತಾರೆ, ಊರ್ಧ್ವಲೋಕಗಳಿಗೆ ಆತ್ಮ ಜ್ಞಾನವುಳ್ಳವರು, ಆತ್ಮಕ್ಕೆ ಲಾಭಿಸುವ ಸೇವೆಗಳನ್ನು ಮಾಡಿದವರು ಸೇರಿಕೊಳ್ಳುತ್ತಾರೆ.

ಅಧೋ ಲೋಕಗಳಿಗೆ ಸೇರಿಕೊಂಡವರಿಗೆ ಕರ್ಮಕ್ಕನುಸಾರವಾಗಿ ಜನ್ಮವಿರುತ್ತದೆ. ಊರ್ಧ್ವ ಲೋಕಗಳನ್ನು ಸೇರಿಕೊಂಡವರಿಗೆ ಎಂತಹ ಜನ್ಮ ಬೇಕೆಂದರೆ ಅಂತಹ ಜನ್ಮವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿರುತ್ತದೆ. ಸ್ತ್ರೀಯಾಗಿಯೇ? ಪುರುಷನಾಗಿಯೇ? ಧನವಂತನಾಗಿಯೇ? ಬಡವನಾಗಿಯೇ? ಎಂತಹ ಕುಟುಂಬದಲ್ಲಿ ಹುಟ್ಟಬೇಕು? ಎಂಬ ಅವಕಾಶ ಇರುತ್ತದೆ. ಆಗ ಬೇಗನೇ ಈ ಜನ್ಮಗಳನ್ನು ಪೂರ್ತಿ ಮಾಡಿಕೊಳ್ಳುತ್ತಾರೆ.

ಆದ್ದರಿಂದ ಈ ಮಾರ್ಗದೊಳಗೆ ಬಂದ ನೀವು ಇದನ್ನು ಅರ್ಥ ಮಾಡಿಕೊಂಡು ನಿಮಗಿರುವ ಸಮಯವನ್ನು, ಧನವನ್ನು, ಶಕ್ತಿಯನ್ನು, ವಾಕ್ಕನ್ನು, ಯಾವ ಸಂಪನ್ಮೂಲಗಳಿದ್ದರೆ ಆ ಸಂಪನ್ಮೂಲಗಳನ್ನು ಆತ್ಮ ಲಾಭಕ್ಕೆ, ಆತ್ಮೋನ್ನತಿಗೆ, ಆತ್ಮದ ಬೆಳವಣಿಗೆಗೆ, ಆತ್ಮಜ್ಞಾನವನ್ನು ಹೊಂದುವುದಕ್ಕೆ ಉಪಯೋಗಿಸಿರಿ. ಕಬೀರ್ ಮಹಾಶಯರು ಹೇಳಿದಂತೆ ಅಮರರಾಗಿರಿ.

## ಮರಣಿಸುವ ಮೊದಲೇ ಮರಣಿಸಿದವರಿಗೆ 'ನಡೆಯುತ್ತಿರುವ ಜೀವನ ಶಾಶ್ವತವಲ್ಲವೆಂದು ತಿಳಿಯುತ್ತದೆ'.

ಈ ಜೀವನ ಶಾಶ್ವತವೆಂದುಕೊಳ್ಳುತ್ತಾ, ತಾನು ಸಂಪಾದಿಸಿಕೊಂಡವು, ತಾನು ಬೆಳೆಸಿಕೊಂಡವು ಶಾಶ್ವತವಾಗಿ ತನ್ನೊಂದಿಗೆ ಇದ್ದು ಬಿಡುತ್ತವೆಂದು ಕೊಳ್ಳುತ್ತಾ... ಅವುಗಳಿಗಾಗಿ ಎಷ್ಟೋ ತಪ್ಪುಗಳನ್ನು, ಪಾಪಗಳನ್ನು, ಘೋರ ಅಪರಾಧಗಳನ್ನು ಮಾಡುತ್ತಿದ್ದಾರೆ. ಮಾಡಬಾರದ ಕೆಲಸಗಳನ್ನು ಮಾಡುತ್ತಾ, ಸೃಷ್ಟಿ ವಿರುದ್ಧವಾಗಿ ವರ್ತಿಸುತ್ತಿದ್ದಾರೆ. ಅವುಗಳ ಫಲವಾಗಿ ಭವಿಷ್ಯತ್ತಿನಲ್ಲಿ ಘೋರವಾದ ನರಕವನ್ನು ಕೂಡಾ ಅನುಭವಿಸುತ್ತಿದ್ದಾರೆ.

ನೀವು ನೋಡಿ, ಕೆಲವು ರಾಜಕೀಯ ನಾಯಕರುಗಳು ಎಷ್ಟು ಸಂಪಾದಿಸುತ್ತಾರೋ ಅವರಿಗೇ ಗೊತ್ತಿಲ್ಲ. ಎಷ್ಟು ಕೋಟಿಗಳನ್ನು ಸಂಪಾದಿಸಿದರೂ ತೃಪ್ತಿಯಿಲ್ಲ. ಸಂಪಾದಿಸಿದ್ದು ಕೂಡಾ ಅಲ್ಲಿ ಇಲ್ಲಿ ಬಚ್ಚಿಡುವುದಕ್ಕೆ, ಅದನ್ನು ಕಾಪಾಡಿಕೊಳ್ಳುವುದಕ್ಕೆ ಕಷ್ಟಪಡುತ್ತಾರೆ. ಅಷ್ಟು ಸಂಪಾದಿಸಿಕೊಂಡರೂ ಸ್ವಂತದವರನ್ನು ಅನ್ಯಾಯ ಮಾಡುತ್ತಾರೆ. ಇದೆಲ್ಲಾ ಏಕೆ ಮಾಡುತ್ತಿದ್ದಾರೆ? ನಡೆಯುತ್ತಿರುವ ಜೀವನವೆಲ್ಲಾ ಶಾಶ್ವತವೆಂದು ಕೊಂಡಿರುವುದರಿಂದ.

ಆದ್ದರಿಂದ ಯಾರಾಗಲಿ ಸರಿ, ಈ ಜೀವನ ಶಾಶ್ವತವಲ್ಲ, ಈ ಜೀವನದಲ್ಲಿ ಇರುವವು ಶಾಶ್ವತವಲ್ಲ, ಯಾವುವೂ ತನ್ನ ಹಿಂದೆ ಬಾರವು ಎಂದು ತಿಳಿಯಬೇಕು. ಅಷ್ಟೇ ಅಲ್ಲ ಯಾವುದಕ್ಕಾಗಿ ತಾಪತ್ರಯ ಪಟ್ಟರೋ ಅವು ಯಾವುವು ಕೂಡಾ ಬರುವುದಿಲ್ಲವೆಂಬ ವಿಷಯವನ್ನು ತಿಳಿದುಕೊಳ್ಳಬೇಕು.

ಇದು ಅರ್ಥವಾದವನು ಹಿಂದೆ ಬರುವವು ಯಾವುವೆಂದು ತಿಳಿದುಕೊಳ್ಳುತ್ತಾನೆ. ಅವುಗಳಿಗೆ ಪ್ರಾಮುಖ್ಯತೆ ಕೊಡುತ್ತಾನೆ. ಮರಣಿಸಿದ ನಂತರವೂ ಕೂಡಾ ಬರುವಂತವು ವಾಸನೆಗಳು, ಸಂಸ್ಕಾರಗಳು, ಕರ್ಮಗಳು, ಜ್ಞಾನ, ಇವುಗಳ ಹೊರತು ಇನ್ನೇನೂ ಹಿಂದೆ ಬಾರವು ಎಂದು ತಿಳಿದುಕೊಂಡವನು, ಈ ನಮ್ಮ ಹಿಂದೆ ಬರುವಂತವುಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾನೆ, ಹಿಂದೆ ಬಾರದವುಗಳಿಗೆ ಪ್ರಾಮುಖ್ಯತೆಯನ್ನು ಕಡಿಮೆ ಮಾಡುತ್ತಾನೆ ಅಂದರೆ ಅಗತ್ಯಗಳಿಗೆ ಪರಿಮಿತವಾಗುತ್ತಾನೆ.

ಈ ಆಧ್ಯಾತ್ಮಿಕ ಮಾರ್ಗದೊಳಗೆ ಬಂದ ಮೇಲೆ ಕೋರಿಕೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು, ವ್ಯಾಮೋಹಗಳನ್ನು ಕಡಿಮೆ ಮಾಡಿಕೊಳ್ಳಬೇಕು. ಬಾರದವುಗಳಿಗಾಗಿ ಸಮಯ, ಶಕ್ತಿ, ತಮ್ಮ ಜೀವನ, ವಾಕ್ (ಮಾತು) ವ್ಯರ್ಥ ಮಾಡಬಾರದು.

ಬಹಳಷ್ಟು ಜನಕೊಟ್ಟಿರುವ ಅವಕಾಶವನ್ನು 'ನಿರುಪಯೋಗ' ಅಂದರೆ ಏನೂ ಉಪಯೋಗವಿಲ್ಲದಂತೆ ಪೂರ್ತಿಯಾಗಿ ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಇನ್ನು ಕೆಲ ಜನರು 'ದುರ್ವಿನಿಯೋಗ' ಮಾಡುತ್ತಿದ್ದಾರೆ, ಅಂದರೆ ನಷ್ಟವನ್ನುಂಟು ಮಾಡುವ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ನಿರ್ವಿನಿಯೋಗ, ದುರ್ವಿನಿಯೋಗ ಮಾಡುವದರಿಂದಲೇ ಮಾನವನು ಇಷ್ಟು ಜನ್ಮಗಳನ್ನು ತಿಳಿದುಕೊಳ್ಳಬೇಕಾಗಿ ಬರುತ್ತದೆ.

ಆದರೆ ಯಾರಾದರೆ ಸದ್ವಿನಿಯೋಗ ಮಾಡಿಕೊಳ್ಳುತ್ತಾರೋ ಅವರು ಜೀವನದಲ್ಲಿ ಲಾಭವನ್ನು ಹೊಂದುತ್ತಾರೆ, ಯಶಸ್ವಿಯಾಗುತ್ತಾರೆ, ಶ್ರೇಷ್ಠರಾಗಬಲ್ಲರು. ಯಾರಾದರೆ ಆತ್ಮಕ್ಕೆ ಪ್ರಾಮುಖ್ಯತೆ ಕೊಡುವ ಕೆಲಸಗಳನ್ನೇ ಮಾಡುತ್ತಾರೋ, ಆತ್ಮ ಉನ್ನತಿಗೆ ಸಹಕರಿಸುವ ಕೆಲಸಗಳನ್ನು ಮಾಡುತ್ತಿರುತ್ತಾರೋ ಅವರು ಸದ್ವಿನಿಯೋಗ ಮಾಡಿಕೊಂಡಂತೆ ಲೆಕ್ಕ.

ಕೆಲವರು ಜೀವನವೆಲ್ಲಾ ಧನವನ್ನು ಸಂಪಾದಿಸುವುದಕ್ಕೆ ವ್ಯಯಿಸುತ್ತಾರೆ. ಕೊನೆಗೆ ಶರೀರವನ್ನು ಬಿಡುತ್ತಾರೆ. ಜೀವನವೆಲ್ಲಾ ಕಷ್ಟಪಟ್ಟು ಸಂಪಾದಿಸಿದವು ಒಂದೂ ಹಿಂದೆ ಬರುವುದಿಲ್ಲ. ಮೇಲಿನ ಲೋಕಗಳಿಗೆ ಸೇರಿಕೊಂಡ ಮೇಲೆ ಏನು ಸಂಪಾದಿಸಿದ್ದೀರಿ ಎಂದರೆ ಏನೂ ಇರುವುದಿಲ್ಲ. ನಿಜವಾಗಿ ಆ ಸಮಯದಲ್ಲಿ ಅವರು ಆತ್ಮಕ್ಕೆ ಲಾಭವನ್ನುಂಟು ಮಾಡುವ ಕೆಲಸಗಳನ್ನು ಮಾಡಿದರೆ ಜನ್ಮವನ್ನು ಎಷ್ಟೋ ಸದ್ವಿನಿಯೋಗ ಮಾಡಿಕೊಂಡವರಾಗುತ್ತಾರೆ.

ಈಗ ನೀವು ಆತ್ಮಕ್ಕಾಗಿ, ಆತ್ಮ ಲಾಭಕ್ಕಾಗಿ ಎಷ್ಟು ಕೃಷಿ ಮಾಡಿದರೆ ಈ ಜನ್ಮವನ್ನು ಅಷ್ಟು ಸದ್ವಿನಿಯೋಗ ಮಾಡಿಕೊಂಡಂತೆ ಲೆಕ್ಕ. ಭೂಮಿಗೆ ಬಂದ ಕೆಲಸವನ್ನು ನೀವು ನೆರವೇರಿಸಿಕೊಂಡಂತೆ ಲೆಕ್ಕ. ಈಗ ನೀವು ಯೋಗ ಮಾರ್ಗದಲ್ಲಿ ಇದ್ದೀರಿ. ಈ ಮಾರ್ಗವು ಬಹಳ ಶ್ರೇಷ್ಟವಾದದ್ದೆಂದು ಶ್ರೀ ಕೃಷ್ಣನೂ ಕೂಡಾ ಹೇಳಿದ್ದಾನೆ.

ಎಲ್ಲಾ ರೀತಿಯ ಕೆಲಸಗಳನ್ನು ಮಾಡುವವನಿಗಿಂತ ಯೋಗಿ ಶ್ರೇಷ್ಟನು. ಕಾರಣವೇನೆಂದರೆ? ಯೋಗಿಯೇ ಆತ್ಮ ಲಾಭಕ್ಕಾಗಿ ಕೃಷಿ ಮಾಡುತ್ತಾನೆ. ಉಳಿದವರೆಲ್ಲಾ ದೇಹ ಲಾಭಗಳಿಗೆ, ಮನೋಲಾಭಗಳಿಗಾಗಿ ಕೃಷಿ ಮಾಡುತ್ತಾರೆ. ಅದರಲ್ಲಿ ಅವರು ದಾಖಲೆಗಳನ್ನು ಮಾಡಬಹುದು, ಅವಾರ್ಡ್‌ಗಳನ್ನು ಪಡೆಯಬಹುದು, ದೊಡ್ಡವರಾಗಬಹುದು, ಎಷ್ಟೋ ಜನರನ್ನು ಆಕರ್ಷಿಸಬಹುದು. ಆದರೆ ದಾಖಲೆಗಳನ್ನು ಮುರಿಯದಿದ್ದರೂ, ಅವಾರ್ಡ್‌ಗಳನ್ನು ಹೊಂದದೇ ಇದ್ದರೂ ಯೋಗ ಮಾರ್ಗದಲ್ಲಿ ಮುಂದುವರಿಯುವವನೇ ಎಷ್ಟೋ ಶ್ರೇಷ್ಠನಾದವನು.

ನಾವೆಲ್ಲಾ ಆ ಕೆಲಸವನ್ನೇ ಮಾಡುತ್ತಿದ್ದೇವೆ, ಆದರೆ ಸ್ವಲ್ಪ ಭಯವನ್ನು ತೊಲಗಿಸಿಕೊಳ್ಳಿ. ನಾನೂ ನೋಡುತ್ತಿದ್ದೇನೆ, ಎಷ್ಟೋ ಜನ ಕೆಲವು ತಿಂಗಳುಗಳಿಂದ ಭೀಮವರಂಗೆ ಬರುವವರು ಇದ್ದಾರೆ ಆದರೆ, ಎಲ್ಲಿಯೋ ಹಿಂದೆ ಕುಳಿತುಕೊಳ್ಳುತ್ತಾರೆ.

ಎಲ್ಲಾ ಕೇಳಿಸಿಕೊಳ್ಳುತ್ತಾರೆ, ಎಲ್ಲಾ ಮಾಡುತ್ತಾರೆ, ಪರಿಚಯ ಮಾಡಿಕೊಳ್ಳರು, ಎದುರಿಗೆ ಬಾರದಂತೆ ಹೋಗಿಬಿಡುತ್ತಾರೆ.

ಹಾಗೆಯೇ ಜೂಮ್‌ನಲ್ಲಿಯೂ ಕೂಡಾ ಬರುತ್ತಾರೆ, ಸೇರಿಕೊಳ್ಳುತ್ತಾರೆ, ವೀಡಿಯೋ ಆನ್ ಮಾಡರು, ಮಾತನಾಡುವುದಕ್ಕೆ ಪ್ರಯತ್ನಿಸರು, ಭಯಪಟ್ಟರೆ ಯಾರು ನಷ್ಟ ಹೊಂದುತ್ತಾರೆ? ಗುರುವು ಹೇಳದೇ ನಿಮ್ಮಲ್ಲಿರುವ ಸಣ್ಣ ಸಣ್ಣ ಲೋಪಗಳು, ತಪ್ಪುಗಳು ಹೇಗೆ ತಿಳಿಯುತ್ತವೆ? ಹೇಗೆ ಸರಿ ಮಾಡಿಕೊಳ್ಳುತ್ತೀರಿ? ಆದ್ದರಿಂದ ಮೊದಲು ಭಯವನ್ನು ತೊಲಗಿಸಿಕೊಳ್ಳಿ. ಈಗ ನೀವು ಸಾಧಿಸುವುದಕ್ಕಿಂತ ಎರಡರಷ್ಟು ಸಾಧಿಸುತ್ತೀರಿ. ಹಾಗೆ ಧೈರ್ಯದಿಂದ ಮಾತನಾಡಿದವರು ಈಗ ಎಷ್ಟೋ ಬೆಳೆದಿದ್ದಾರೆ.

ನಾನೂ ಕೂಡಾ ಪತ್ರೀಜಿಯವರ ಬಳಿ ಇದ್ದಾಗ ತಪ್ಪು ಮಾಡಬಾರದು, ಆತನಿಂದ ಏನು ಅನಿಸಿಕೊಳ್ಳಬಾರದು ಎಂದುಕೊಳ್ಳುತ್ತಿದ್ದೆನು. ವಿಚಿತ್ರವೇನೆಂದರೆ ಎಷ್ಟು ಪ್ರಯತ್ನಿಸಿದರೂ ಯಾವುದೋ ಒಂದು ರೀತಿಯಲ್ಲಿ ಆತನಿಗೆ ಸಿಕ್ಕಿ ಬಿಡುತ್ತಿದ್ದೆ, ಬೈಯ್ಗುಳನ್ನು ತಿನ್ನುತ್ತಿದ್ದೆ. ಆದರೆ ತಪ್ಪು ಮಾಡದಂತೆ ಹೇಗೆ ಬೆಳೆಯುತ್ತೇವೆ?

ಬಹಳಷ್ಟು ಜನ ಏನೆಂದುಕೊಳ್ಳುತ್ತಾರೆಂದರೆ? ಅವರು ಬೆಳೆದವರು ಅವರಿಗೇನು ಪರವಾಗಿಲ್ಲ, ನಾನು ಇನ್ನೂ ಬೆಳೆದಿಲ್ಲ. ಆದ್ದರಿಂದ ನಾವು ತಪ್ಪುಗಳನ್ನು ಮಾಡುತ್ತಿದ್ದೇವೆಂದುಕೊಳ್ಳುತ್ತಾರೆ. ಒಂದು ಸಂದರ್ಭದಲ್ಲಿ ಪತ್ರೀಜಿಯವರು, ಯಾರೂ ಯಾವ ಸ್ಥಾಯಿಯಲ್ಲಿದ್ದರೆ ಆ ಸ್ಥಾಯಿಯಲ್ಲಿ ತಪ್ಪುಗಳನ್ನು ಮಾಡುತ್ತಾರೆಂದರು.

ಪತ್ರೀಜಿಯಂತವರಿಗೆ ಎಲ್ಲರ ತಪ್ಪುಗಳು ಕಾಣಿಸುತ್ತಿರುತ್ತವೆ. ಕಾರಣ ತಪ್ಪುಗಳು ಮಾಡದಂತೆ ಯಾರೂ ಇರುವುದಿಲ್ಲ. 'ಎ' ಸ್ಥಾಯಿಯಲ್ಲಿ ಇದ್ದವನು 'ಎ' ಸ್ಥಾಯಿಯಲ್ಲಿ ತಪ್ಪುಗಳನ್ನು ಮಾಡುತ್ತಾನೆ, 'ಎಫ್' ಸ್ಥಾಯಿಯಲ್ಲಿ ಇದ್ದವನು 'ಎಫ್' ಸ್ಥಾಯಿಯಲ್ಲಿ ತಪ್ಪು ಮಾಡುತ್ತಾನೆ. 'ವೈ' ಸ್ಥಾಯಿಯಲ್ಲಿರುವವನು ಆ ಸ್ಥಾಯಿಯಲ್ಲಿ ತಪ್ಪುಗಳನ್ನು ಮಾಡುತ್ತಾನೆ. ಹಾಗೆ ಯಾವ ಸ್ಥಾಯಿಯಲ್ಲಿದ್ದವರು ಆ ತಪ್ಪುಗಳನ್ನು ಮಾಡುತ್ತಾರೆ.

ಪತ್ರೀಜಿಯವರು ಷಿರಿಡಿಬಾಬಾ, ಸತ್ಯಸಾಯಿಬಾಬಾ, ರಾಮಕೃಷ್ಣ ಪರಮಹಂಸ ರಂತಹರವರಲ್ಲಿರುವ ಸಣ್ಣ ಸಣ್ಣ ಲೋಪಗಳನ್ನು ಹೇಳುತ್ತಿದ್ದರು. ಅಂದರೆ ಸೃಷ್ಟಿಯಲ್ಲಿ ಯಾವ ಸ್ಥಾಯಿಯಲ್ಲಿದ್ದರೆ ಆ ರೀತಿಯಾದ ತಪ್ಪುಗಳನ್ನು ಮಾಡುತ್ತಾರೆ. ಆದ್ದರಿಂದ ಅಂತಹವುಗಳನ್ನು ಸರಿ ಮಾಡಿಕೊಳ್ಳುವುದಕ್ಕೆ ಭಯಪಡುವ ಕೆಲಸವಿಲ್ಲ. ನಾನು ತಪ್ಪುಗಳನ್ನು ಮಾಡುತ್ತಿದ್ದೇನೆಂಬ ನ್ಯೂನತಾ ಭಾವ, ಕೀಳರಿಮೆ ಇಲ್ಲದಂತೆ ಇರಬೇಕು.

ತಪ್ಪುಗಳನ್ನು ಸರಿ ಮಾಡಿಕೊಳ್ಳಲು ಬಂದಿದ್ದೀರಿ, ತಪ್ಪುಗಳನ್ನು ಬಚ್ಚಿಟ್ಟುಕೊಳ್ಳಲು ಬಂದಿಲ್ಲ. ಧೈರ್ಯದಿಂದ ಮುಂದಕ್ಕೆ ಬರಬೇಕು. ಒಬ್ಬ ಸದ್ಗುರುವನ್ನು ಆಶ್ರಯಿಸಿದಾಗ ನಿರ್ಭಯವಾಗಿ ಅವರ ಬಳಿ ವರ್ತಿಸಿದಾಗ ನಿಮ್ಮ ಬೆಳವಣಿಗೆಗೆ ಅವರು ಕೃಷಿ

ಮಾಡುತ್ತಾರೆ. ನಿಮಗೆ ಜ್ಞಾನವನ್ನು ಹೆಚ್ಚಿಸುವುದಕ್ಕೆ ಅವರಿದ್ದಾರೆ, ಜ್ಞಾನವು ಬೆಳೆದರೇನೆ ದುಃಖವು ಹೋಗುತ್ತದೆ.

ಆ ದುಃಖವನ್ನು ಕಳೆದುಕೊಳ್ಳುವ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ನೀವು ಹಿಂಜರಿದರೆ ಹೇಗೆ? ಆದ್ದರಿಂದ ನಡೆಯುತ್ತಿರುವ ಈ ಜೀವನವು ಶಾಶ್ವತ ಅಲ್ಲವೆಂದು ತಿಳಿದುಕೊಳ್ಳಬೇಕು. ಯಾವುದಕ್ಕಾಗಿ ನೀವು ಕಷ್ಟಪಡುತ್ತಿರುವಿರೋ ಅವು ಯಾವುವೂ ಹಿಂದೆ ಬಾರವು ಎಂಬ ವಿಷಯವನ್ನು ತಿಳಿದುಕೊಳ್ಳಬೇಕು.

** ** **

# ಮರಣಿಸುವ ಮೊದಲೇ ಮರಣಿಸಿದರೆ "ಮೇಲಿನ ಲೋಕವೇ ನಿಜವಾದ ಲೋಕ, ಭೂಲೋಕ ನನಗೆ ಪರಲೋಕ ಎಂದು ತಿಳಿದುಕೊಳ್ಳುತ್ತಾರೆ".

ಪ್ರತಿಯೊಬ್ಬರು ಭೂಲೋಕವೇ ನನ್ನ ಅಸಲು ಲೋಕವೆಂಬಂತೆ ಜೀವಿಸುತ್ತಿದ್ದಾರೆ. ಅದಕ್ಕೆ ಭೂಲೋಕದಲ್ಲಿಯೇ ಶ್ರೇಷ್ಠರಾಗಲು ಪ್ರಯತ್ನವನ್ನು ಮಾಡುತ್ತಿದ್ದಾರೆ. ಭೂಲೋಕದಲ್ಲಿ ಹಣವನ್ನು ಸಂಪಾದಿಸಿಕೊಂಡರೆ ನಾನು ದೊಡ್ಡವನೆಂದು ಭಾವಿಸುತ್ತಾರೆ! ಹಾಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಆಲೋಚಿಸಿ ಅದರಲ್ಲಿ ಮೇಧಾವಿಗಳಾಗುವುದಕ್ಕೆ, ನಿಷ್ಣಾತರಾಗುವುದಕ್ಕೆ, ದೊಡ್ಡವರಾಗುವುದಕ್ಕೆ ಕೃಷಿ ಮಾಡುತ್ತಿದ್ದಾರೆ.

ನಾನು ದೇಹವೆಂದು, ನನ್ನ ಲೋಕ ಭೂಲೋಕವೆಂದು ಭಾವಿಸುವುದರಿಂದ ದೇಹ ಸುಖವೇ ತನ್ನ ಸುಖವೆಂದುಕೊಳ್ಳುತ್ತಾರೆ. ಈ ದೇಹವನ್ನು ಸುಖವಾಗಿಡುವುದಕ್ಕೆ, ಹಣವನ್ನು ಸಂಪಾದಿಸುವುದಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಿದ್ದಾರೆ. ಅದಕ್ಕೆ ಯಾರಾಗಲಿ ಸರಿ, ತನ್ನ ಜೀವನದಲ್ಲಿ ಹೆಚ್ಚು ಸಮಯವನ್ನು ಹಣ ಸಂಪಾದನೆಗೆ ವ್ಯಯಿಸುತ್ತಾ ಇರುತ್ತಾರೆ. ಕೆಲವರಿಗೆ ಹಣವು ಅಗತ್ಯಕ್ಕೂ ಮೀರಿ ಇರುತ್ತದೆ, ಆದರೂ ಸರಿ ಇನ್ನೂ ಸಂಪಾದಿಸುತ್ತಾ ಇರುತ್ತಾರೆ.

ಇನ್ನು ಕೆಲವರು ನಿವೃತ್ತಿಯ ನಂತರ ಏನು ಮಾಡಬೇಕೆಂದು ತಿಳಿಯದೆ, ಶಕ್ತಿ, ತಾಳ್ಮೆಯಿರುವವರೆಗೂ ಹಣವಿದ್ದರೆ ಯಾವುದೋ ಒಂದಕ್ಕೆ ಉಪಯೋಗವಾಗುತ್ತದೆಂದು

ಮತ್ತೇ ಯಾವುದೋ ಖಾಸಗಿಯಾಗಿ ಕೆಲಸ ಮಾಡುತ್ತಾರೆ.

ಕೆಲವರು ಕ್ರೀಡೆಗಳಲ್ಲಿ ಶ್ರೇಷ್ಠರಾಗಲು ಅಭ್ಯಾಸ ಮಾಡುತ್ತಿರುತ್ತಾರೆ. ಕೆಲವರು ದೊಡ್ಡ ಹುದ್ದೆಯನ್ನು ಸಂಪಾದಿಸಿರೆ ಅದೇ ಗೌರವವೆಂದುಕೊಳ್ಳುತ್ತಾರೆ. ಕೆಲವರು ಸಿನಿಮಾ ರಂಗದಲ್ಲಿ ನಿರ್ದೇಶಕರಾಗಬೇಕೆಂದು, ನಟರಾಗಬೇಕೆಂದು, ಕೆಲವರು ಸಂಗೀತದಲ್ಲಿ ಶ್ರೇಷ್ಠರಾಗಬೇಕೆಂದು, ಹಾಗೆಯೇ ಕೆಲವರು ಸಾಹಸಗಳನ್ನು ಮಾಡಿ ಗಿನ್ನಿಸ್ ಬುಕ್‌ನಲ್ಲಿ ಹತ್ತಬೇಕೆಂದುಕೊಳ್ಳುತ್ತಾರೆ. ಅಂದರೆ ಯಾರಾದರೂ ಈ ಭೂಲೋಕದಲ್ಲಿ ಶ್ರೇಷ್ಠನಾಗಿ ಹೆಸರು ಸಂಪಾದಿಸಿಕೊಳ್ಳಬೇಕೆಂದೆ ನಿರೀಕ್ಷಿಸುತ್ತಾರೆ.

ಇವನ್ನೆಲ್ಲಾ ಏಕೆ ಮಾಡುತ್ತಿದ್ದಾರೆ? ಏಕೆ ಇಷ್ಟು ಕಷ್ಟಪಡುತ್ತಿದ್ದಾರೆ? ಅಂದರೆ ಭೂಲೋಕವೇ ತನ್ನ ನಿಜವಾದ ಲೋಕವೆಂದುಕೊಳ್ಳುವುದರಿಂದ, ಇನ್ನೂ ಕೆಲವರು ಮಾಡಬಾರದ ಕೆಲಸಗಳನ್ನು ಮಾಡುತ್ತಾರೆ. ತಪ್ಪುಗಳನ್ನು, ಪಾಪಗಳನ್ನು ಮಾಡುತ್ತಾರೆ. ತಾನು ದೇಹವೆಂದುಕೊಳ್ಳುತ್ತಾ, ತಾನು ಸುಖಪಡಬೇಕೆಂದುಕೊಳ್ಳುತ್ತಾ, ಆ ಪ್ರಾಣಿಗಳನ್ನು ಪಕ್ಷಿಗಳನ್ನು ಸಾಯಿಸುತ್ತಾರೆ, ಹಿಂಸಿಸುತ್ತಾರೆ. ಅವುಗಳ ಫಲವಾಗಿ ಕಷ್ಟಗಳನ್ನು ಅನುಭವಿಸುತ್ತಾರೆ.

ಹಣವನ್ನು ಕೂಡಾ ಅಡ್ಡ ಮಾರ್ಗಗಳಿಂದ, ಅಧರ್ಮದ ಮಾರ್ಗಗಳಿಂದ ಸಂಪಾದಿಸುವ ಪ್ರಯತ್ನ ಮಾಡುತ್ತಾರೆ. ಏಕೆ ಇಂತಹ ಕೆಲಸಗಳನ್ನು ಮಾಡುತ್ತಾರೆ? ಅಂದರೆ ಈ ದೇಹ ನಾನು, ಈ ಭೂಲೋಕ ನನ್ನ ಅಸಲು ಲೋಕ ಅಂದುಕೊಳ್ಳುವುದರಿಂದ. ಆದರೆ ಯಾವಾಗಾದರೆ ಮರಣಾನಂತರ ಜೀವನದ ಕುರಿತು ತಿಳಿದುಕೊಳ್ಳುತ್ತಾರೋ ಅವರಿಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ. **"ನಾನು ದೇಹವಲ್ಲ, ನಾನು ಆತ್ಮನು, ನನ್ನ ಲೋಕ ಭೂಲೋಕವಲ್ಲ, ಪರಲೋಕವೇ ನನ್ನ ನಿಜವಾದ ಲೋಕವೆಂದು"** ತಿಳಿದುಕೊಳ್ಳುತ್ತಾರೆ. ಅಷ್ಟೇ ಅಲ್ಲ ಭೂಲೋಕ ನನಗೆ ಪರಲೋಕವೆಂದು ತಿಳಿದುಕೊಳ್ಳುತ್ತಾರೆ.

ಇದು ಯಾವಾಗಾದರೆ ತಿಳಿದುಕೊಳ್ಳುತ್ತಾರೋ ಅವರಲ್ಲಿ ಎಷ್ಟೋ ಬದಲಾವಣೆ ಬರುತ್ತವೆ. ಏಕೆಂದರೆ ನೀವು ಭೂಮಿಯ ಮೇಲೆ ಇರುವಾಗ ಭಾರತ ದೇಶದಲ್ಲಿ ಇರುವವರಾದರೆ, ಇತರ ದೇಶಗಳಿಗೆ ಹೋಗಿ ಚೆನ್ನಾಗಿ ಸಂಪಾದಿಸಿ, ಆ ಹಣದಿಂದ ಭಾರತ ದೇಶಕ್ಕೆ ಬಂದ ಮೇಲೆ ಆಸ್ತಿಗಳು, ಹೊಲಗಳನ್ನು ಸಂಪಾದಿಸಿಕೊಂಡು ಹಾಯಾಗಿ ಜೀವಿಸಬಹುದೆಂದು ಪ್ರಯತ್ನಿಸುತ್ತೀರಿ.

ಅದಕ್ಕೆ ನೀವು ಅಮೇರಿಕಾಗೆ ಹೋದರೂ, ಆಸ್ಟ್ರೇಲಿಯಾ, ಇಂಗ್ಲೆಂಡ್‌ಗೆ, ಅರಬ್ ದೇಶಗಳಿಗೆ, ಎಲ್ಲಿಗೆ ಹೋದರೂ, ಅಲ್ಲಿ ಎಷ್ಟು ವರ್ಷಗಳಿಂದ ಇದ್ದರೂ 20 ವರ್ಷಗಳಿಂದ

30 ವರ್ಷಗಳಿಂದ ಇದ್ದರೂ ಕೂಡಾ ಅದು ಪರದೇಶವೆಂದೇ ಭಾವಿಸುತ್ತೀರಿ, ನನ್ನ ಸ್ವದೇಶ ಭಾರತ ದೇಶವೆಂದು ಭಾವಿಸುತ್ತೀರಿ. ಆದ ಕಾರಣ ಸ್ವದೇಶದಲ್ಲಿ ಚೆನ್ನಾಗಿರುವುದಕ್ಕೆ ಪ್ರಯತ್ನಿಸುತ್ತೀರಿ.

ಹಾಗೆಯೇ ಭೂಲೋಕವು ಸ್ವಲೋಕವೆಂಬ ಭಾವದಿಂದ ಇರುವುದರಿಂದ ಇರುವಷ್ಟು ಕಾಲವು ಭೂಲೋಕದಲ್ಲಿ ಶ್ರೇಷ್ಠರಾಗುವುದಕ್ಕೇ ಪ್ರಯತ್ನಿಸುತ್ತಾರೆ. ಆದರೆ ಯಾವಾಗಾದರೆ ಪರಲೋಕವೇ ನಿಮ್ಮ ಸ್ವಲೋಕವೆಂದು ಅರ್ಥವಾಗುತ್ತದೋ ಪರದಲ್ಲಿ ಶ್ರೇಷ್ಠರಾಗುವುದಕ್ಕೆ ನೀವು ಪ್ರಯತ್ನಿಸುತ್ತೀರಿ.

ಅದಕ್ಕೆ ನೀವು ನೋಡಿ, ಯಾವ ದೇಶಕ್ಕೆ ಹೋದರೂ ಅಲ್ಲಿ ಆಸ್ತಿಯನ್ನು ಕೊಂಡುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಹಾಗೆಯೇ ಭೂಲೋಕವು ಪರಲೋಕವೆಂದು ನಿಮಗೆ ಅರ್ಥವಾದಾಗ ಇಲ್ಲಿ ಏನನ್ನು ಸಂಪಾದಿಸುವುದಕ್ಕಾಗಲಿ, ಏನನ್ನು ಮಾಡುವುದಕ್ಕಾಗಲಿ ಪ್ರಾಮುಖ್ಯತೆ ಕೊಡುವುದಿಲ್ಲ, ಇಲ್ಲಿ ಏನನ್ನು ಜೋಡಿಸಿಕೊಂಡರೂ, ಏನನ್ನು ಹೊಂದಿದರೂ ಏನೂ ಇರುವುದಿಲ್ಲ, ಒಂದನ್ನು ತೆಗೆದುಕೊಂಡುಹೋಗಲಾರೆವು ಎಂದು ನಿಮಗೆ ಅರ್ಥವಾಗುತ್ತದೆ.

ಆಗ ಹಿಂದೆ ತೆಗೆದುಕೊಂಡು ಹೋಗುವ ಜ್ಞಾನವನ್ನು ಸಂಪಾದಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾರೆ. ಪರಲೋಕಕ್ಕೆ ಹೋದ ನಂತರ ಎಷ್ಟು ಜ್ಞಾನವಿದ್ದರೆ ಅವನು ಅಷ್ಟು ಉನ್ನತವಾದ ಲೋಕಗಳನ್ನು ಸೇರಿಕೊಳ್ಳುತ್ತಾನೆ, ಉನ್ನತವಾದ ಸ್ಥಿತಿಗೆ ಸೇರಿಕೊಳ್ಳುತ್ತಾನೆ, ಅಲ್ಲಿ ಶ್ರೇಷ್ಠನಾಗಿ ಕೀರ್ತಿಸಲ್ಪಡುತ್ತಾನೆ ಎಂಬುದು ಅರ್ಥವಾಗುತ್ತದೆ. ಭೂಮಿಯ ಮೇಲೆ ಏನಿದ್ದರೂ ಅದೇನು ಶಾಶ್ವತವಲ್ಲ, ಎಲ್ಲಾ ಬಿಟ್ಟು ಬಿಡುವಂತವೇ, ಎಲ್ಲಾ ಹೋಗುವವೇ ಎಂಬುದು ಅರ್ಥವಾಗುತ್ತದೆ.

ಅದಕ್ಕೆ ನೋಡಿ, ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ ಮಾಡುವ ಸೇವೆಗಳು ಬದಲಾಗಿ ಬಿಡುತ್ತವೆ, ಕೆಲಸಗಳು ಬದಲಾಗುತ್ತವೆ. ಇಲ್ಲಿರುವವರು ಯಾರೂ ನನ್ನವರಲ್ಲ ಎಂಬುದು ಸಹ ಅರ್ಥವಾಗುತ್ತದೆ. ಆದಕಾರಣ ಅವರ ಜೊತೆ ಇರುತ್ತಾರಾಗಲಿ ಮಮಕಾರವನ್ನು ಬೆಳೆಸಿಕೊಳ್ಳುವುದಿಲ್ಲ. ಯಾರಾದರೂ ವಿದೇಶಗಳಿಗೆ ಹೋದಾಗ ಎಲ್ಲಾ ಇರುತ್ತವೆ, ಎಲ್ಲಾ ನೋಡಿಕೊಳ್ಳುತ್ತಾ ಇರುತ್ತಾರೆ ಆದರೆ ಇದು ಪರದೇಶವೇ ಎಂಬ ಭಾವದಿಂದ ಇರುತ್ತಾರೆ.

ಮರಣಾನಂತರ ಜೀವನವನ್ನು ತಿಳಿದುಕೊಂಡವರು ಭೂಮಿಯು ಪರಲೋಕವೆಂಬ ಭಾವದಿಂದ ಇರುತ್ತಾರೆ. ಸ್ವಲೋಕವಾದರೂ ಆ ಪರಲೋಕದಲ್ಲಿ ಸಾಧಿಸಿದ ಶ್ರೇಷ್ಠತೆಗಿಂತ ಈ ಭೂಲೋಕದಲ್ಲಿ ಇರುವ ಶ್ರೇಷ್ಠತೆಯು ಶ್ರೇಷ್ಠತೆ ಅಲ್ಲವೆಂದು ಅರ್ಥ ಮಾಡಿಕೊಳ್ಳುತ್ತಾರೆ. ಎಷ್ಟಿದ್ದರೂ ಇರುವಂತಹವು ಅಲ್ಲ. ಅವುಗಳನ್ನು ನೋಡಿ ಸಂಭ್ರಮಿಸುವವನು ಬಹಳ ಅಜ್ಞಾನಿ ಎಂದು ಅರ್ಥವಾಗುತ್ತದೆ.

ಹಾಗೆಯೇ ಪರಲೋಕವು ನನ್ನ ಸ್ವಲೋಕವೆಂದುಕೊಂಡಾಗ ಆತ್ಮ ಉನ್ನತಿಯೇ ನನ್ನ ಕರ್ತವ್ಯವೆಂದುಕೊಳ್ಳುತ್ತಾನೆ. ಭೂಮಿಯ ಮೇಲೆ ದೊಡ್ಡವನು ಆಗುವುದಕ್ಕೆ ಅಲ್ಲ, ಮೇಲಿನ ಲೋಕಗಳಲ್ಲಿ ದೊಡ್ಡವನಾಗುವುದಕ್ಕೆ ಪ್ರಯತ್ನಿಸುತ್ತಾನೆ. ಎಷ್ಟು ಜ್ಞಾನವನ್ನು ಸಂಪಾದಿಸಿಕೊಂಡರೆ ಅಲ್ಲಿ ಅಷ್ಟು ದೊಡ್ಡವರಾಗಬಹುದೆಂದುಕೊಳ್ಳುತ್ತಾನೆ.

ಪ್ರತೀಜಿಯವರು ಕೂಡಾ ಇನ್ನು ಇನ್ನು ಶ್ರೇಷ್ಠರಾಗುವುದಕ್ಕೆ ಅಷ್ಟೆಲ್ಲಾ ಕೃಷಿ ಮಾಡಿದರು. ಈ ಜ್ಞಾನವನ್ನು ಎಲ್ಲರಿಗೆ ಬೋಧಿಸುತ್ತಾ, ತನ್ನ ಜ್ಞಾನವನ್ನು ಇನ್ನೂ ಹೆಚ್ಚಿಸಿಕೊಳ್ಳುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದರು. ಎಷ್ಟೋ ಕಷ್ಟಪಡುತ್ತಿದ್ದರು. ಅವರು ಭೂಮಿಯ ಮೇಲೆ ಬಂದ ಅವಕಾಶವನ್ನು ಪೂರ್ತಿಯಾಗಿ ಉಪಯೋಗಿಸಿಕೊಂಡರು.

ಹಾಗೆ ರಮಣ ಮಹರ್ಷಿ, ಷಿರಿಡಿ ಬಾಬಾ, ಹೀಗೆ ಯಾರನ್ನು ತೆಗೆದುಕೊಂಡರೂ, ಅವರೆಲ್ಲಾ ಆತ್ಮಕ್ಕಾಗಿಯೇ ಕೃಷಿಪಟ್ಟರು. ಆದ ಕಾರಣ ಮೇಲಿನ ಲೋಕವೇ ನಿಜವಾದ ಲೋಕ, ಭೂಲೋಕ ನನಗೆ ಪರಲೋಕವೆಂದು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ಆದ್ದರಿಂದ ಯಾರಿಗೋ ಏನೋ ಇದೆ ಎಂದು ನೀವೇನು ದುಃಖಿಸುವ ಅಗತ್ಯವಿಲ್ಲ. ಅಸೂಯೆ ಪಡಬೇಕಾಗಿಲ್ಲ, ಧನ ಸಂಪಾದನೆಯ ಮೇಲೆ ಸ್ಪರ್ಧೆ ಅನಗತ್ಯ. ನಿಮ್ಮ ಅಗತ್ಯ ಗಳಿಗೆ ಸರಿಹೋಗುವಷ್ಟು ಇದೆಯೋ? ಇಲ್ಲವೋ? ಎಂಬುದನ್ನು ನೋಡಿಕೊಳ್ಳಿ ಸಾಕು.

ಧನವನ್ನು ಸರಿ ಹೋಗುವಷ್ಟು ಸಂಪಾದಿಸಿಕೊಳ್ಳುತ್ತಾ ಇರುವ ಸಮಯವನ್ನು, ಇರುವ ಅವಕಾಶಗಳನ್ನು ಪೂರ್ತಿಯಾಗಿ ಆತ್ಮಕ್ಕೆ ಲಾಭಿಸುವ, ಆತ್ಮೋನ್ನತಿಯನ್ನುಂಟು ಮಾಡುವ, ಆತ್ಮಕ್ಕೆ ಊರ್ಧ್ವ ಲೋಕ ಪ್ರಾಪ್ತಿಯಾಗುವಂತಹ ಕೆಲಸಗಳ ಮೇಲೆ ದೃಷ್ಟಿ ಇಡಿರಿ. ಅದಕ್ಕೆ ಏನು ಮಾಡಬೇಕೋ? ಅವನೆಲ್ಲಾ ಮಾಡಿರಿ, ಭೂಮಿಯ ಮೇಲೆ ದೊಡ್ಡವರಾದ ಮಾತ್ರಕ್ಕೆ ಪ್ರಯೋಜನವಿಲ್ಲ.

ಭೂಮಿಯ ಮೇಲೆ ಎಲ್ಲರಿಗಿಂತ ಹೀನವಾಗಿದ್ದೇವೆಂದು ನೀವು ಏನು ದುಃಖಿಸುವ ಅಗತ್ಯವಿಲ್ಲ. ಅದ್ಭುತವಾದ ಜ್ಞಾನವನ್ನು ನೀವು ಸಂಪಾದಿಸಿಕೊಳ್ಳುತ್ತಿದ್ದೀರಿ, ಆದ ಕಾರಣ ಗರ್ವದಿಂದ ಫೀಲ್ ಆಗಬಹುದು. ಭೂಲೋಕದಲ್ಲಿ ಹಣವಿದ್ದವನೇ ದೊಡ್ಡವನು, ಆದರೆ ಮೇಲಿನ ಲೋಕದಲ್ಲಿ ಜ್ಞಾನ ಇದ್ದವನು ಶ್ರೇಷ್ಠನು.

ಏಕೆಂದರೆ ಅಜ್ಞಾನಿಗೆ ಯಾವುದು? ಏಕೆ? ನಡೆಯುತ್ತದೆಯೋ ತಿಳಿಯದು. ಅವನಿಗೆ ಯಾವ ಕಷ್ಟ? ಏಕೆ ಬಂದಿತೋ? ತಿಳಿಯದು, ಕಷ್ಟ ಬಂದರೆ ಏನು ಮಾಡಬೇಕೋ? ತಿಳಿಯದು. ಆದರೆ ಜ್ಞಾನಿಗೆ ಎಲ್ಲಾ ತಿಳಿಯುತ್ತವೆ, ಗಂಭೀರವಾಗಿರುತ್ತಾನೆ, ಧೈರ್ಯದಿಂದ ಇರುತ್ತಾನೆ. ಆದ್ದರಿಂದ ನಿಮ್ಮ ಸ್ವಲೋಕ ಪರಲೋಕವೇ ಹೊರತು ಭೂಲೋಕವಲ್ಲ ಎಂದು ಪ್ರತಿಯೊಬ್ಬರು ಖಂಡಿತವಾಗಿ ತಿಳಿದುಕೊಳ್ಳಬೇಕು, ಆಗ ಮಾತ್ರ ನಿಮ್ಮ ಕೆಲಸಗಳೆಲ್ಲವೂ ಬದಲಾಗುತ್ತವೆ.

ಈ ಲೋಕದಲ್ಲಿ ಒಬ್ಬ ರಮಣ ಮಹರ್ಷಿಯಂತೆ, ಒಬ್ಬ ಪತ್ರೀಜಿಯವರಂತೆ ನೀವು ಜೀವಿಸಿ ಮೇಲಿನ ಲೋಕಗಳಿಗೆ ಹೋದಾಗ ಎಷ್ಟೋ ಉನ್ನತ ಸ್ಥಿತಿಯನ್ನು ಹೊಂದುತ್ತೀರಿ, ಎಷ್ಟೋ ಸಂತೋಷಿಸುತ್ತಾ, ನಾನು ಬಹಳ ಅದೃಷ್ಟವಂತನು ಎಂದು ಖಂಡಿತವಾಗಿ ಅಂದುಕೊಳ್ಳುತ್ತೀರಿ.

** ** **

## ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ 'ಭೂಮಿಯ ಮೇಲೆ ಈ ಜೀವನ ಬಹಳ ಅಲ್ಪವೆಂಬುದು ಅರ್ಥವಾಗುತ್ತದೆ'

ನೋಡಿರಿ ಪ್ರತಿದಿನ ಮೂರು ಹೊತ್ತು ಊಟ ಮಾಡುತ್ತೀರಿ, ಆದರೆ ಗಮನಿಸಿದರೆ ಮರಣಿಸಿದವರ ಹೆಸರಿನಿಂದ ವರ್ಷಕ್ಕೆ ಒಂದು ಬಾರಿಯೇ ಪಿಂಡವನ್ನು ಇಡುತ್ತಾರೆ. ಮತ್ತೆ ಈ ಆಚಾರದ ಮೂಲಕ ಪೂರ್ವಿಕರು ನಮಗೆ ಏನನ್ನು ತಿಳಿಸಿದ್ದಾರೆಂದರೆ? ಭೂಮಿಯ ಮೇಲೆ ಒಂದು ವರ್ಷ, ಮೇಲಿನ ಲೋಕದಲ್ಲಿ ಒಂದು ದಿನಕ್ಕೆ ಸಮಾನವೆಂದು ತಿಳಿಸಿದ್ದಾರೆ. 100 ವರ್ಷಗಳು ಬದುಕಿದರೆ ಅಬ್ಬಾ! 100 ವರ್ಷಗಳು ಬದುಕಿದನು ಎಂದುಕೊಳ್ಳುತ್ತೇವೆ. ಆದರೆ ಮೇಲಿನ ಲೋಕಗಳಲ್ಲಿ ಇರುವವನಿಗೆ ಅದು 100 ದಿನಗಳು ಮಾತ್ರವೇ.

ಎಲ್ಲರು ಭೂಮಿಯ ಮೇಲಿರುವಾಗ ಬಹಳ ಜೀವನವಿದೆಯೆಂದು ಕೊಳ್ಳುತ್ತಾರೆ. ಆದರೆ ಇರುವುದು ಸ್ವಲ್ಪ ಜೀವನವೇ! 60 ವರ್ಷ ಬರುವುದರೊಳಗೆ ನಿವೃತ್ತಿಯಾಗುತ್ತಿದ್ದಾರೆ. ಶಕ್ತಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಅನಾರೋಗ್ಯದ ಪಾಲಾಗುತ್ತಿದ್ದಾರೆ. ಇರುವ ಯೌವ್ವನದಲ್ಲಿ ಅರ್ಧ ನಿದ್ದೆಗೆ ಸರಿ ಹೋಗುತ್ತದೆ, ಉಳಿದ ಅರ್ಧದಲ್ಲಿ ಸಂಪಾದನೆಗೆ, ಅಗತ್ಯಗಳು ಅಂದರೆ ತಿಂಡಿ, ಬಟ್ಟೆ, ಮನೆ, ಒಪ್ಪ ಓರಣ ಮಾಡಿಕೊಳ್ಳುವುದಕ್ಕೆ ಸ್ವಲ್ಪ ಸಮಯ ಹೋಗುತ್ತದೆ. ಹಾಗೆಯೇ ಮನೆ ಕೆಲಸಗಳು, ಅಡುಗೆ ಕೆಲಸಗಳನ್ನು ಮಾಡಿಕೊಳ್ಳುವುದರೊಳಗೆ ಜೀವನದಲ್ಲಿ ಎಷ್ಟೋ ಸಮಯ ಕಳೆಯುತ್ತದೆ. ಆಲೋಚಿಸಿರಿ.

ಮಕ್ಕಳನ್ನು ಪೋಷಿಸುವುದಕ್ಕೆ, ಓದಿಸುವುದಕ್ಕೆ, ತಿದ್ದಿತೀಡುವುದಕ್ಕೆ ಎಷ್ಟೋ ಸಮಯವನ್ನು ಒದಗಿಸಿಕೊಳ್ಳಬೇಕು. ಇವೆಲ್ಲಾ ಮಾಡಿದಾಗ ಉಳಿಯುವುದು ಬಹಳ ಸ್ವಲ್ಪ ಸಮಯ. ಆ ಸಮಯವನ್ನು ಕೂಡಾ ವಿನೋದಗಳಿಗೆ, ಹೊರ ಸಂಚಾರಕ್ಕೆ ವ್ಯರ್ಥ ಮಾಡಿದರೆ, ಅಮರರಾಗುವುದಕ್ಕೆ ಇವರಿಗೆ ಸಮಯವೆಲ್ಲಿದೆ? ನೀವು ಮಾಡಬೇಕಾದದ್ದನ್ನು ಯಾವಾಗ ಮಾಡುತ್ತೀರಿ? ನಿಜವಾಗಿ ನೀವು ಯಾರು? ಏಕೆ ಭೂಮಿಗೆ ಬಂದಿದ್ದೀರಿ? ಏನನ್ನು ಸಂಪಾದಿಸಿಕೊಳ್ಳುವುದಕ್ಕೆ ಬಂದಿದ್ದೀರಿ? ಇವೆಲ್ಲವನ್ನು ಆಲೋಚಿಸಬೇಕು.

ಆ .... ಏನಿದೆ ಕೆಲವು ದಿನ ಹಾಯಾಗಿ ಜೀವಿಸಿ ಹೋಗಿ ಬಿಡುವುದೇ ಅಲ್ಲಾ ಎಂದು ಕೊಳ್ಳುವಿರಿ. ನೆನಪಿಟ್ಟುಕೊಳ್ಳಿ ಯಾರೂ ಹೋಗಿ ಬಿಡುವುದ್ದಕ್ಕೆ ಭೂಮಿಗೆ ಬಂದಿಲ್ಲ. ಈ ವಿಷಯ ನಿಮಗೆ ಮರಣಿಸಿದ ನಂತರ ತಿಳಿಯುತ್ತದೆ. ನೀವು ಒಂದು ಪ್ರಣಾಳಿಕೆಯೊಂದಿಗೆ ಬಂದಿದ್ದೀರಿ. ಆತ್ಮರಾದ ನೀವು ಸತ್ಯ ಲೋಕವನ್ನು ಸೇರಿಕೊಳ್ಳಬೇಕು. ಅದೇ ನಿಮ್ಮ ಲಕ್ಷ್ಯ, ಆವಾಗಲೇ ಅಮರರಾಗುವುದು. ಅದಕ್ಕೆ ಅಗತ್ಯವಾದ ಜ್ಞಾನವನ್ನು ಸಂಪಾದಿಸಿಕೊಳ್ಳುವುದಕ್ಕೆ ಭೂಮಿಗೆ ಬಂದಿದ್ದೀರಿ.

ಮತ್ತೇ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆಂದರೆ ಇರುವ ಈ ಅತ್ಯಲ್ಪ ಸಮಯದಲ್ಲಿ ಎಷ್ಟು ಕಷ್ಟಪಡಬೇಕು? ಎಷ್ಟು ಕೃಷಿ ಮಾಡಬೇಕು? ಅದರ ಮೇಲೆ ಎಷ್ಟು ದೃಷ್ಟಿಯಿಡಬೇಕು? ಈ ಧ್ಯಾನ ಮಾರ್ಗದೊಳಗೆ, ಜ್ಞಾನ ಮಾರ್ಗದೊಳಗೆ ಬಂದರೂ ಕೂಡಾ ಉಳಿದವುಗಳ ಮೇಲೆ ದೃಷ್ಟಿಯಿಟ್ಟರೆ ಎಷ್ಟು ನಷ್ಟ ಹೊಂದುತ್ತೀರಿ ಹೇಳಿ!.

ನಾನು ಪತ್ರೀಜಿಯವರನ್ನು ಗಮನಿಸಿದ್ದೇನೆ, ಆತನು ನಿಜವಾಗಿಯೂ ಸಮಯವನ್ನು ವ್ಯರ್ಥ ಮಾಡರು. ಅವರು ಜ್ಞಾನವನ್ನು ಇನ್ನೂ ಹೆಚ್ಚಿಸಿಕೊಳ್ಳುವುದಕ್ಕೇ ಪ್ರಯತ್ನಿಸುತ್ತಾರೆ, ಮತ್ತೇ ಆತನಿಗೆ ಜ್ಞಾನವಿಲ್ಲವೇ ಅಂದರೆ ! ಅವರೇ ಹೇಳಿದ್ದಾರೆ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಶಿವನೇ ಇನ್ನು ಧ್ಯಾನ ಮಾಡುತ್ತಿದ್ದಾನೆ, ಮತ್ತೇ ನಾವೆಷ್ಟು? ಎಂದರು.

ಸಹಜವಾಗಿ ಗುರುಗಳು ಅವರ ಬಳಿಗೆ ಬಂದವರಿಗೆ ಜ್ಞಾನವನ್ನು ಬೋಧಿಸುತ್ತಾರೆ, ಆದರೆ ಪತ್ರೀಜಿಯವರು ಊರೂರು ತಿರುಗಿ ಜ್ಞಾನವನ್ನು ಬೋಧಿಸಿದರು. ಅವರು ಬುದ್ಧನನ್ನು, ಶಂಕರಾಚಾರ್ಯರನ್ನು ಆದರ್ಶವಾಗಿ ತೆಗೆದುಕೊಂಡರು.

ಪ್ರತಿ ಊರನ್ನು ತಿರುಗುತ್ತಾ, ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾ, ಖಾಲಿ ಸಮಯದಲ್ಲಿ ಧ್ಯಾನ ಜಗತ್, ಪುಸ್ತಕಗಳನ್ನು ತಿದ್ದುವುದನ್ನು ಮಾಡುತ್ತಿದ್ದರು. ಹಾಗೆಯೇ ಒಂದು ವರ್ಷ ಪ್ರತಿದಿನ ಬೆಳಿಗ್ಗೆ ಒಂದೊಂದು ಸಂದೇಶವನ್ನು ತಯಾರು ಮಾಡಿ ಕೊಡುತ್ತಿದ್ದರು. ಇವೆಲ್ಲಾ ಕೂಡಾ ಪ್ರಜೆಗಳನ್ನು ಜ್ಞಾನವಂತರನ್ನಾಗಿ ಮಾಡಲಿಕ್ಕೆ. ನಾವು ಸ್ವಲ್ಪ ಸುಸ್ತಾದರೆ ಒಂದೆರಡು, ಮೂರು ದಿನಗಳು ವಿಶ್ರಾಂತಿ ತೆಗೆದುಕೊಳ್ಳಬಹುದು ಎಂದುಕೊಳ್ಳುತ್ತೇವೆ. ಆದರೆ ಅವರು ವಿಶ್ರಾಂತಿ ತೆಗೆದುಕೊಳ್ಳರು, ಅವರಿಗೆ ಸಮಯದ ಮೌಲ್ಯ ಗೊತ್ತು.

ಪತ್ರೀಜಿಯವರು ಹೇಳುತ್ತಾರೆ **"ಭೂಮಿಯ ಮೇಲೆ ಪ್ರಣಾಳಿಕೆ ಪ್ರಕಾರ ಜೀವಿಸಿದರೆ ಜೀವಿಸಿದಂತೆ, ಇಲ್ಲದಿದ್ದರೆ ಅವನು ಮರಣಿಸಿದಂತೆ"** ಎಂದಿದ್ದಾರೆ. ಆದ್ದರಿಂದ ನಾನು ಆತನನ್ನೇ ಆದರ್ಶವಾಗಿ ತೆಗೆದುಕೊಂಡಿದ್ದೇನೆ. ಅವರು ಎಷ್ಟೋ ಕಷ್ಟಪಡುತ್ತಾರೆ, ತಾಳ್ಮೆ ಮೀರಿ ನಡೆಯಲಾಗದಿದ್ದರೂ ಮನುಷ್ಯರ ಸಹಾಯವನ್ನಾದರೂ ತೆಗೆದುಕೊಂಡು ನಡೆಯುತ್ತಾರೆ, ಮಾಡಬೇಕಾದ ಕೆಲಸವನ್ನು ಮಾಡುತ್ತಾರೆ. ಆತನ ಬಳಿ ಅದ್ಭುತವಾದ ಬುದ್ಧಿವಂತಿಕೆ ಇದೆ, ಅಪಾರವಾದ ಜ್ಞಾನ ಸಂಪತ್ತಿದೆ. ಅದನ್ನು ಎಲ್ಲರಿಗೂ ಹಂಚುವುದೇ ಅವರು ಮಾಡುವ ಕೆಲಸ, ಎಲ್ಲರನ್ನು ಜ್ಞಾನವಂತರನ್ನಾಗಿ ಮಾಡುವುದೇ ಅವರ ಒಂದು ಆಶಯ. ಹಾಗೆ ಹಗಲು–ರಾತ್ರಿ ಕಷ್ಟಪಡುತ್ತಿದ್ದರು, ನಮ್ಮ ಮನೆಗೂ ಬರುತ್ತಿದ್ದರು. ಸಾಯಂಕಾಲ ಹಿಂತಿರುಗಿ ಬಂದಾಗ ಸುಸ್ತಾಗಿ ಹಾಗೆ ವಾಲಿಕೊಳ್ಳುತ್ತಿದ್ದರು. ಅಷ್ಟು ಸುಸ್ತಾಗಿದ್ದರೂ ಅವರು ಮಾಡಬೇಕಾದ ಕೆಲಸವನ್ನು ಬಿಡುತ್ತಿರಲಿಲ್ಲ, ಅದೇ ನನಗೆ ಆಶ್ಚರ್ಯವಾಗುತ್ತಿತ್ತು, ಅದೇ ನನಗೆ ಸ್ಫೂರ್ತಿ.

ಅವರು ಅಷ್ಟು ಕಷ್ಟಪಟ್ಟರೆ ನಾನು ಸ್ವಲ್ಪವಾದರೂ ಕಷ್ಟಪಡಬೇಕಲ್ಲವೇ? ನನ್ನ ಸಮಯವನ್ನು ಏಕೆ ವ್ಯರ್ಥ ಮಾಡಬೇಕು? ಎನ್ನಿಸಿತು. ಅದಕ್ಕೆ ಮಕ್ಕಳನ್ನು, ಎಲ್ಲರನ್ನು ಹೊರಗೆ ಕಳುಹಿಸಿಬಿಟ್ಟೆನು, ವ್ಯಾಪಾರಗಳನ್ನು ಬಿಟ್ಟೆನು, ನನಗಿರುವ ಪದವಿಗಳನ್ನೂ ಬಿಟ್ಟೆನು, ಕೊನೆಗೆ ಈ ಸೊಸೈಟಿಯಲ್ಲಿ ಪದವಿಗಳನ್ನು ಕೊಟ್ಟರೂ ಕೂಡಾ ನಾನು ಸ್ವೀಕರಿಸಲಿಲ್ಲ, ಅವರ ಮಾರ್ಗದಲ್ಲಿಯೇ ಪಯಣಿಸುತ್ತಿದ್ದೇನೆ.

ಪತ್ರೀಜಿಯವರು ಈ ಜ್ಞಾನವನ್ನು ಬೋಧಿಸುವುದಕ್ಕೆ ಎಷ್ಟೋ ಕೃಷಿ ಮಾಡಿದ್ದಾರೆ. ನೀವು ಗಮನಿಸಿರಿ, ಆತನ ಬಳಿ ಹಣವೇನೂ ಇಲ್ಲ, ಆದರೆ ಆತನು ವಿಮಾನಗಳಲ್ಲಿ ತಿರುಗುತ್ತಿದ್ದರು, ಕೊನೆಯ ದಿನಗಳಲ್ಲಿ ಕೇರವಾನ್‌ಗಳಲ್ಲಿ ಕೂಡಾ ತಿರುಗುವಂತ ಅವಕಾಶ ಬಂದಿತು. ಏಕೆ ಬಂದಿತು? ಪ್ರಕೃತಿ ಸಹಕರಿಸಿತು, ಆತನು ಮಾಡುವ ಕಾರ್ಯಕ್ರಮಗಳು ಅಷ್ಟು ಮಹತ್ವವಾದವು, ಅದಕ್ಕೆ ನಾನೂ ಕೂಡಾ ಆ ಕೆಲಸಗಳನ್ನೇ ಮಾಡುತ್ತಿದ್ದೇನೆ.

ಆದ್ದರಿಂದ ನೆನಪಿಟ್ಟುಕೊಳ್ಳಿ ಯಾರಾಗಲಿ ಸರಿ ಏನೋ ಇನ್ನು ಬಹಳ ಜೀವನವಿದೆ, ಕೊನೆಯಲ್ಲಿ ನೋಡೋಣ, ಕೊನೆಯಲ್ಲಿ ಮಾಡಿಕೊಳ್ಳೋಣ ಎಂದುಕೊಳ್ಳುತ್ತಾರೆ. ಯಾವಾಗಲೋ ಮುದಿ ವಯಸ್ಸಿನಲ್ಲಿ ಶಕ್ತಿ ಕಡಿಮೆಯಾದಾಗ ಇಂದ್ರಿಯಗಳ ಶಕ್ತಿ ಕುಂದಿದಾಗ ಏನು ಮಾಡುತ್ತೀರಿ? ಏನನ್ನು ಸಾಧಿಸುತ್ತೀರಿ? ಏನನ್ನು ಹೊಂದುತ್ತೀರಿ? ಆದ್ದರಿಂದ ಎಲ್ಲಾ ಇರುವಾಗಲೇ ಜೀವನ ಲಕ್ಷ್ಯವಾದ ಅಮರತ್ವವನ್ನು ಸಾಧಿಸುವ ಪ್ರಯತ್ನ ಮಾಡಿರಿ. ಕಬೀರ್ ಮಹಾಶಯರು ಹೇಳಿದಂತೆ, ಮರಣಿಸುವ ಮೊದಲೇ ಮರಣಿಸಿರಿ, ಪರಲೋಕ ಜ್ಞಾನವನ್ನು ಹೆಚ್ಚಿಸಿಕೊಳ್ಳಿ, ಕಷ್ಟಪಡಿರಿ. ಸಂಸಾರವನ್ನು ನೋಡಿಕೊಳ್ಳುತ್ತಾ, ಇರುವ ಸಮಯವನ್ನು ವ್ಯರ್ಥ ಮಾಡದಂತೆ ಜ್ಞಾನವನ್ನು ಸಂಪಾದಿಸಿಕೊಳ್ಳುವ ಪ್ರಯತ್ನ ಮಾಡಿರಿ.

## ಮರಣಿಸಿದ ನಂತರ ನಡೆಯುವುದನ್ನು ಜೀವಿಸಿರುವಾಗಲೇ ತಿಳಿದುಕೊಂಡರೆ 'ಸತ್ತ ನಂತರ ಮೇಲಿನ ಲೋಕಗಳಿಂದ ಬಂದ ಸಹಾಯಕರೊಂದಿಗೆ ನಿಶ್ಚಿಂತೆಯಾಗಿ ಹೋಗಿ ಬಿಡುತ್ತೀರಿ. ಪ್ರೇತಾತ್ಮರಾಗಿ ಅಂದರೆ ದೆವ್ವಗಳಾಗುವುದಿಲ್ಲ'

**'ಆದ್ದರಿಂದ ಕೆಲವು ನೂರುಗಳೇ ಅಲ್ಲ ಸಾವಿರ ವರ್ಷಗಳ ಕಾಲ ಸಮಯ ವ್ಯರ್ಥವಾಗದಂತೆ ಮಾಡಿಕೊಳ್ಳಬಲ್ಲವರಾಗುತ್ತೀರಿ'.**

ಮರಣಿಸುವ ಮೊದಲೇ ಮರಣಿಸಿದರೆ **'ನಾನು ದೇಹವಲ್ಲ ಆತ್ಮ ಎನ್ನುವುದು ಅರ್ಥವಾಗುತ್ತದೆ, ನನ್ನವರು ಅಂದುಕೊಂಡವರೆಲ್ಲಾ ನನ್ನವರಲ್ಲ ಎಂಬುದು ತಿಳಿಯುತ್ತದೆ, ನನ್ನವು ಎಂಬುವಂತವೆಲ್ಲಾ ನನ್ನವಲ್ಲವೆಂಬುದು ತಿಳಿಯುತ್ತದೆ, ನಾನು ಮಾಡುವಂತವೆಲ್ಲಾ ವ್ಯರ್ಥವೆಂದು ತಿಳಿಯುತ್ತದೆ. ಈಗ ನಡಯುತ್ತಿರುವುದೆಲ್ಲಾ ಒಂದು ಕನಸಿನಂತದ್ದೇ ಎಂದು ತಿಳಿಯುತ್ತದೆ, ಮಾಡಬಾರದವು ಯಾವುವುವೆಂದು ತಿಳಿಯುತ್ತವೆ, ಮಾಡಬೇಕಾದವು ಯಾವುವೋ ತಿಳಿಯುತ್ತವೆ'.**

ಇವೆಲ್ಲವನ್ನು ತಿಳಿದುಕೊಳ್ಳುವುದರಿಂದ ಮಮಕಾರಗಳು, ವ್ಯಾಮೋಹಗಳು ಆಸೆಗಳು ಇವೆಲ್ಲಾ ಹೋಗುತ್ತವೆ. ಸಾಯುವುದಕ್ಕೂ ಭಯಪಡರು, ಸಾವು ಎಂಬುದು ಭಯಂಕರವಾದುದಲ್ಲ, ಅದು ಲಾಭಿಸುವಂತದ್ದೇ ಎಂಬ ವಿಷಯ ತಿಳಿಯುತ್ತದೆ. ಹುಟ್ಟು ಎಂಬುದು ಎಷ್ಟು ಲಾಭವೋ! ಸಾವು ಎಂಬುವುದು ಕೂಡಾ ಅಷ್ಟೇ ಲಾಭವೆಂಬ ವಿಷಯವನ್ನು ತಿಳಿದುಕೊಳ್ಳಬಲ್ಲವರಾಗುತ್ತೀರಿ.

ಇನ್ನೂ ಹೊಸ ಅನುಭವಗಳನ್ನು ಹೊಂದುವುದಕ್ಕೆ ಹೊಸ ಪಾಠಗಳನ್ನು ಕಲಿತುಕೊಳ್ಳುವುದಕ್ಕೆ, ಮತ್ತೊಂದು ಹೊಸ ದೇಹವನ್ನು ತೆಗೆದುಕೊಳ್ಳುವುದಕ್ಕೆ ಈ ದೇಹವನ್ನು ಬಿಟ್ಟೆನು ಎಂಬ ವಿಷಯ ಅರ್ಥವಾಗುತ್ತದೆ. ಆದ್ದರಿಂದ ಶರೀರವನ್ನು ಬಿಟ್ಟ ಮೇಲೆ ಆತ್ಮನಾದ ತನ್ನನ್ನು ಕರೆದುಕೊಂಡು ಹೋಗುವುದಕ್ಕೆ ಬಂದಂತಹ ಸಹಾಯಕರೊಡನೆ ನಿಶ್ಚಿಂತೆಯಿಂದ ಹೋಗಿ ಬಿಡುತ್ತಾರೆ, ಯಾರ ಕುರಿತು ಆಲೋಚಿಸರು.

ಯಾರಾದರೆ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಾರೋ ಅವರು ದುಃಖಪಡರು. ಸಹಾಯಕರೊಂದಿಗೆ ಹೊರಟು ಹೋಗಿ ಮಾಡಬೇಕಾದ ಕೆಲಸದಲ್ಲಿ ತೊಡುಗುತ್ತಾರೆ. ಹಾಗೆ ಅಲ್ಲದೆ ಮಮಕಾರದಿಂದ ಬಾಧೆಪಡುತ್ತಾ ಇವನನ್ನು ಕರೆದುಕೊಂಡು ಹೋಗಲು ಬಂದ ಸಹಾಯಕರೊಂದಿಗೆ ಹೋಗದಿದ್ದರೆ ಸಹಾಯಕರು ತಿರುಗಿಹೋಗಿ ಬಿಡುತ್ತಾರೆ.

ಇವರನ್ನು ಕರೆದೊಯ್ಯಲು ತೆರದಿದ್ದ ಆತ್ಮದ ಬಾಗಿಲುಗಳು ಮುಚ್ಚಿ ಹೋಗುತ್ತವೆ. ಈಗ ಇವರು ಪ್ರೇತಾತ್ಮರಾಗಿ ಬದಲಾಗಿ ಭೂಮಿಯ ಮೇಲೆಯೇ ಉಳಿದು ಬಿಡುತ್ತಾರೆ, ಕರೆದು ಕೊಂಡು ಹೋಗುವವರ್‍ಯಾರೂ ಇರುವುದಿಲ್ಲ. ದಾರಿ ತೋರಿಸುವವರೂ ಇರುವುದಿಲ್ಲ ಏನು ಮಾಡಬೇಕೋ ತಿಳಿಯದು. ಆದಕಾರಣ ನೂರಾರು ವರ್ಷಗಳನ್ನು ವ್ಯರ್ಥ ಮಾಡಿಕೊಂಡವರಾಗುತ್ತಾರೆ, ಎಷ್ಟೋ ನೋವುಪಡುತ್ತಾರೆ ಎಷ್ಟೋ ನಷ್ಟ ಹೊಂದುತ್ತಾರೆ.

ಹಾಗೆ ವರ್ಷಗಳು ಕಳೆದಂತೆಲ್ಲಾ ನನ್ನ ಪರಿಸ್ಥಿತಿ ಹೀಗಾಯಿತೇ ಎಂದು ಕೊಳ್ಳುತ್ತಾರೆ. ಮತ್ತೆ ಈ ನಷ್ಟವೆಲ್ಲಾ ಏಕೆ ನಡೆಯಿತು? ಅಂದರೆ ಮರಣದ ನಂತರ ಏನು ನಡೆಯುತ್ತದೋ ತಿಳಿಯದೇ ಹೋಗಿದ್ದರಿಂದ, ಇರುವಂತವೇ ನಿಜವೆಂದುಕೊಂಡು ಈ ಇರುವವರೆಲ್ಲಾ ನನ್ನವರೆಂದುಕೊಂಡು, ನನ್ನ ಮಕ್ಕಳು ನನ್ನ ಗಂಡ, ನನ್ನ ಹೆಂಡತಿ ಎಂದುಕೊಳ್ಳುತ್ತಾ ಅವರ ಕುರಿತು ಆಲೋಚಿಸುತ್ತಾ ಅವರನ್ನು ಬಿಟ್ಟು ಬಿಡಲು ಆಗದೇ ಇರುವುದರಿಂದ ಎಷ್ಟೋ ನಷ್ಟ ಹೊಂದುತ್ತಾರೆ.

ನಾನು ಆತ್ಮನು, ದೇಹವಲ್ಲ ಎಂಬ ಜ್ಞಾನವುಳ್ಳವರಿಗೆ ಸಾವು ಎಂಬುದು ಲಾಭವೇ ಹೊರತು ನಷ್ಟವಲ್ಲ. ಜ್ಞಾನವಿಲ್ಲದವರಿಗೆ ದುಃಖವಿರುತ್ತದೆ.

ಬಹಳಷ್ಟು ಜನ ಮರಣಿಸಿದರೆ ಸಮಸ್ಯೆ ಬಿಟ್ಟು ಹೋಗುತ್ತದಲ್ಲಾ! ಇನ್ನೂ ಯಾವ ಸಮಸ್ಯೆ ಇರದು ಎಂದುಕೊಳ್ಳುತ್ತಾರೆ. ಆದರೆ ಇದೇರೀ ಮುಖ್ಯವಾದ ಸಮಸ್ಯೆ, ತಾನು ಯಾರೋ? ಏಕೆ ಬಂದಿದ್ದಾರೋ? ಎಲ್ಲಿಂದ ಬಂದಿದ್ದಾರೋ? ಸತ್ತ ನಂತರ ಏನು ಮಾಡಬೇಕೋ? ತಿಳಿಯದು. ಅಂತಹ ಅಜ್ಞಾನಿಗೆ ಎಲ್ಲಾ ಗೊಂದಲವಾಗಿ ಕಾಣಿಸುತ್ತದೆ. ಸಹಾಯಕರು 11 ದಿನಗಳ ಸಮಯ ಕೊಟ್ಟರೂ ಕೂಡಾ ಹೋಗರು, ಎಷ್ಟು ನಷ್ಟ ಹೋಗುತ್ತಾರೋ ಎಂಬುದು ತಿಳಿಯದು.

ಕೆಲವರು ನನಗೆ ರೋಗಗಳಿದ್ದರೆ ಜ್ಞಾನ ಏನು ಮಾಡಲಿ? ಎನ್ನುತ್ತಾರೆ. ಅವರಿಗೆ ಧ್ಯಾನದ ಬೆಲೆ ತಿಳಿಯದು, ಕೆಲವರು ಧ್ಯಾನದಿಂದ ಬರುವ ಭೌತಿಕ ಲಾಭಗಳಿಗಾಗಿ ಮಾನಸಿಕ ಲಾಭಗಳಿಗಾಗಿ ಧ್ಯಾನವೆಂದುಕೊಳ್ಳುತ್ತಾರೆ, ಆದರೆ ಜ್ಞಾನ ಸಂಪಾದಿಸಿಕೊಳ್ಳುವುದಕ್ಕಾಗಿ ಧ್ಯಾನವೆಂದು ತಿಳಿದುಕೊಳ್ಳುವುದಿಲ್ಲ. ಅವರಿಗೆ ಧ್ಯಾನ ಮಾಡದೇ ಜ್ಞಾನಬರದು, ದುಃಖವು ಹೋಗದು ಎಂಬುದು ಕೂಡಾ ತಿಳಿಯದು.

ಯಾರಾಗಲಿ ಸರಿ ಜ್ಞಾನವೊಂದರ ಶ್ರೇಷ್ಟತೆಯು ಅರ್ಥವಾದರೇನೆ ಜ್ಞಾನದ ಮೇಲೆ ದೃಷ್ಟಿಯಿಡುತ್ತಾರೆ, ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು ಎಂಬ ಹಂಬಲವು ಹೊರ ಬರುತ್ತದೆ. ಆದರೆ ಜ್ಞಾನವನ್ನು ಸಂಪಾದಿಸಿಕೊಳ್ಳುವುದರಿಂದ ಖಂಡಿತವಾಗಿ ಜೀವನದಲ್ಲಿ ಲಾಭವನ್ನು ಹೊಂದುವುದೇ ಅಲ್ಲ, ಮರಣಿಸಿದ ನಂತರ ಕೂಡಾ ಲಾಭವನ್ನು ಹೊಂದುತ್ತಾರೆ. ಏನು ಮಾಡಬೇಕೋ ತಿಳಿದುಕೊಂಡು ಅದನ್ನು ಮಾಡುವುದಕ್ಕೆ

ಪ್ರಯತ್ನಿಸುತ್ತಾರೆ. ತಾನು ಮಾಡಿದ ಕೆಲಸಗಳಿಂದ ಮರಣವೂ ಕೂಡಾ ಲಾಭವನ್ನುಂಟು ಮಾಡುತ್ತದೆಂದು ತಿಳಿದುಕೊಳ್ಳುತ್ತಾರೆ.

ಆದ್ದರಿಂದ ಭೂಮಿಯಿಂದ ನಿಷ್ಕ್ರಮಿಸುವುದಕ್ಕೆ ಏನೂ ದುಃಖಪಡರು. ಯಾವಾಗದರೂ ಸರಿ ಶರೀರವನ್ನು ಬಿಟ್ಟು ಬಿಡುವುದಕ್ಕೆ ಸಿದ್ಧವಾಗಿರುತ್ತಾರೆ. ರೈಲು ಪ್ರಯಾಣ ಮಾಡುವುದಕ್ಕೆ ಟ್ರಂಕ್ ಜೋಡಿಸಿಕೊಂಡು ರೆಡಿಯಾಗಿ ಹೇಗಿರುತ್ತಾರೋ! ಜ್ಞಾನಿ ಹಾಗಿರುತ್ತಾನೆ. ಸಣ್ಣ ಕಾಯಿಲೆ ಬಂದರೂ, ಏನಾದರು ಸಮಸ್ಯೆ ಬಂದರೂ, ನಾನು ಮಾಡಬೇಕಾದ ಕೆಲಸ ಏನಾದರೂ ಇದ್ದರೆ ಇರುತ್ತೇನೆ, ಇಲ್ಲದಿದ್ದರೆ ನಿಷ್ಕ್ರಮಿಸುತ್ತೇನೆ ನಿಷ್ಕ್ರಮಿಸಿ ಮತ್ತೆ ಹೊಸ ಶರೀರವನ್ನು ತೆಗೆದುಕೊಳ್ಳುತ್ತೇನೆ ಎಂದು ಅಂದುಕೊಳ್ಳುತ್ತಾರಾಗಲಿ ಭಯಪಡರು.

ಅಜ್ಞಾನಿಗೆ ಈ ವಿಷಯಗಳೆಲ್ಲಾ ತಿಳಿಯದಿರುವುದರಿಂದ ಪ್ರೇತಾತ್ಮವಾಗಿ ಬದಲಾಗಿ ಭೂಮಿಯ ಮೇಲೆ ಸಮಯವನ್ನು ವ್ಯರ್ಥ ಮಾಡಿಕೊಳ್ಳುತ್ತಾನೆ. ಆದರೆ ಜ್ಞಾನಿ ಧ್ಯಾನ ಮಾಡಿ ಜ್ಞಾನವನ್ನು ಸಂಪಾದಿಸಿಕೊಳ್ಳುವುದರಿಂದ ಎಷ್ಟೋ ಸಮಯವನ್ನು ಉಳಿತಾಯ ಮಾಡಿಕೊಳ್ಳುತ್ತಾನೆ, ಎಷ್ಟೋ ಜನ್ಮಗಳನ್ನು ಕಡಿಮೆ ಮಾಡಿಕೊಳ್ಳುತ್ತಾನೆ. ತಿಳಿಯದವರು ಏನೆಂದುಕೊಳ್ಳುತ್ತಾರೆಂದರೆ ಧ್ಯಾನವನ್ನು ಮಾಡುತ್ತಿದ್ದರೆ ಹುಚ್ಚರು, ಕೆಲಸಗಳನ್ನು ಬಿಟ್ಟು ಎಷ್ಟು ಹೊತ್ತೂ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುತ್ತಾರೆ ಎಂದುಕೊಳ್ಳುತ್ತಾರೆ.

ಆದರೆ ಎಷ್ಟೋ ಜನ ಜನ್ಮ ಜನ್ಮವೆಲ್ಲಾ ಕಷ್ಟಪಟ್ಟು ಹಣ ಸಂಪಾದಿಸುತ್ತಾ, ಸಮಯವನ್ನೆಲ್ಲಾ ವ್ಯರ್ಥ ಮಾಡಿಕೊಳ್ಳುತ್ತಿದ್ದಾರೆ. ಆ ಸಮಯದಲ್ಲಿ ಜ್ಞಾನವನ್ನು ಸಂಪಾದಿಸಿಕೊಂಡಿದ್ದರೆ ಅವರಿಗೆ ಎಷ್ಟೋ ಜನ್ಮಗಳು ಕಡಿಮೆಯಾಗುತ್ತಿದ್ದವು!.

ಆದಕಾರಣ ಸಮಯವನ್ನು ಹಣ ಸಂಪಾದನೆಗೆ ಅಲ್ಲ, ಜ್ಞಾನ ಸಂಪಾದನೆಗೆ ಖರ್ಚು ಮಾಡಿರಿ, ಆ ಜ್ಞಾನವಿದ್ದರೆ ಮರಣಿಸಿದ ನಂತರ ಸಹಾಯಕರೊಂದಿಗೆ ಮೇಲಿನ ಲೋಕಗಳಿಗೆ ನಿಶ್ಚಿಂತೆಯಾಗಿ ಹೋಗಿ ಬಿಡುತ್ತೀರಿ. ಅಮೂಲ್ಯವಾದ ಸಮಯವನ್ನು ವ್ಯರ್ಥ ಮಾಡಿಕೊಳ್ಳದೆ ಮಾಡಬೇಕಾದವುಗಳನ್ನು ಮಾಡಿ, ಕಬೀರರು ಹೇಳಿದಂತೆ ಅಮರರಾಗುತ್ತೀರಿ.

** ** **

## ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ 'ತಾನು ಮಾಡಿದ ಕರ್ಮಗಳನ್ನಾಧರಿಸಿ ತಾನು ಸೇರುವ ಲೋಕಗಳಿರುತ್ತವೆ ಎಂದು ತಿಳಿಯುತ್ತದೆ'

ನೋಡಿರಿ, ಪ್ರತಿಯೊಬ್ಬರೂ ಬೆಳಿಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೂ ಎಷ್ಟೋ ಕೆಲಸಗಳನ್ನು ಮಾಡುತ್ತಿರುತ್ತಾರೆ, ಮಾತನಾಡುತ್ತಿರುತ್ತಾರೆ, ತಮಗೆ ತಿಳಿದಂತೆ ಜೀವಿಸುತ್ತಾರೆ, ಆದರೆ ಅವರು ಮಾಡುವ ಕರ್ಮಗಳ ಅಂತ್ಯ, ಅವುಗಳ ಫಲಿತಾಂಶ ಹೇಗಿರುತ್ತದೋ ಅವರಿಗೆ ತಿಳಿಯದು. ಅದಕ್ಕೆ ಹಿರಿಯರು ಏನಾದರೂ ಹೇಳಿದರೆ ನನ್ನ ಇಷ್ಟ ಎನ್ನುತ್ತಾರೆ.

ಮಾಂಸಾಹಾರ ತಿನ್ನಬೇಡ ಎಂದರೆ ನೀನ್ಯಾರು ನನಗೆ ಹೇಳುವುದಕ್ಕೆ? ಎನ್ನುತ್ತಾರೆ. ತಪ್ಪುಗಳನ್ನು ಮಾಡಿದಾಗ ಅದು ತಪ್ಪು ಕಣೋ, ಅಂದರೆ ನನಗೆ ತಿಳಿಯದೆ? ನೀನ್ಯಾರು ಹೇಳಲು? ನೀನೇನು ಹೇಳುವುದು ಎನ್ನುತ್ತಾರೆ. ಆದರೆ ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ ಅವರಿಗೆ ಖಚಿತವಾಗಿ ಅರ್ಥವಾಗುತ್ತದೆ. **"ತಾನು ಮಾಡಿದ ಕರ್ಮಗಳ ಫಲವೇ ತನ್ನ ಕೂಡಾ ಬರುತ್ತವೆಯೆಂದು"**.

ಏಕೆಂದರೆ ಮರಣಿಸಿದ ನಂತರ ಶರೀರದಿಂದ ಆತ್ಮ ಹೊರಗೆ ಬರುತ್ತದೆ ಶರೀರವನ್ನು ಸುಡುತ್ತಾರೆ. ಆಗ ಮೇಲಿನ ಲೋಕಗಳಿಂದ ಇಬ್ಬರು ಸಹಾಯಕರು ಬಂದು ಇವನನ್ನು ಮೇಲಿನ ಲೋಕಗಳಿಗೆ ಕರೆದುಕೊಂಡು ಹೋಗುತ್ತಾರೆ. ಹಾಗೆ ಕರೆದುಕೊಂಡು ಹೋಗುವಾಗ ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೀರಿ? ಎಂದು ಕೇಳುತ್ತಾನೆ. ಆಗ ಅವರು ನೀನು ಭೂಮಿಯ ಮೇಲೆ ಮಾಡಿದ ಕರ್ಮಗಳನ್ನು ಆಧರಿಸಿ ನಿನ್ನನ್ನು ಯಾವ ಲೋಕಗಳಿಗೆ ಕರೆದುಕೊಂಡು ಹೋಗಬೇಕೋ ಅಲ್ಲಿಗೇ ಕರೆದುಕೊಂಡು ಹೋಗುತ್ತೇವೆ ಎನ್ನುತ್ತಾರೆ.

ಅವನು ಪಾಪವನ್ನು ಮಾಡಿದರೆ ಅದಕ್ಕೆ ಸಂಬಂಧಿಸಿದ ಲೋಕಕ್ಕೆ ಕರೆದೊಯ್ಯುತ್ತಾರೆ. ಪುಣ್ಯಗಳನ್ನು ಮಾಡಿದರೆ ಅದಕ್ಕೆ ಸಂಬಂಧಿಸಿದ ಲೋಕಕ್ಕೆ ಕರೆದೊಯ್ಯುತ್ತಾರೆ. ಆಗ ಅರ್ಥವಾಗುತ್ತದೆ. **"ಅವನು ಮಾಡಿದ ಕರ್ಮಗಳನ್ನು ಆಧರಿಸಿ ಕರೆದೊಯ್ಯುವ ಲೋಕಗಳು ಆಧಾರವಾಗಿರುತ್ತವೆಯೆಂದು"**. ಹಾಗೆ ಎಷ್ಟೋ ಸಂದೇಹಗಳನ್ನು ಕೇಳುತ್ತಿರುತ್ತಾನೆ ಏಕೆಂದರೆ ಆ ಪರಿಸ್ಥಿತಿ ಅವನಿಗೆ ಆಶ್ಚರ್ಯವನ್ನುಂಟು ಮಾಡುತ್ತದೆ.

ತಾನು ದೇಹವನ್ನು ಬಿಡುವುದು, ತನ್ನ ದೇಹವನ್ನು ಸುಡುವುದು, ತನ್ನನ್ನು ಸಹಾಯಕರು ಬಂದು ಕರೆದೊಯ್ಯುವುದು ಏನೋ ಆಯೋಮಯವಾಗಿ ಇರುತ್ತದೆ. ಅಂತಹ ಪರಿಸ್ಥಿತಿ ಬರುತ್ತದೆಂದು, ಹಾಗೇ ನಡೆಯುತ್ತದೆಂದು ಅವನು ನಿಜವಾಗಿ ಊಹಿಸಿಲ್ಲ, ಆಶ್ಚರ್ಯಪಡುತ್ತಾ ಎಷ್ಟೋ ಕೇಳುತ್ತಾ ಇರುತ್ತಾನೆ.

ಇನ್ನೂ ಕೆಲವರಿಗೆ ಕೋಳಿಗಳನ್ನು, ಮೇಕೆಗಳನ್ನು ತಿನ್ನುವುದು ಪಾಪವೆ? ಎಂದು ಕೇಳುತ್ತಾರೆ. ಅವುಗಳನ್ನು ತಿನ್ನುವಾಗ ಅವನಿಗೆ ಅದು ಪಾಪವೆಂಬ ಸಂಗತಿ ತಿಳಿಯದು, ಎಲ್ಲರೂ ತಿನ್ನುತ್ತಿದ್ದಾರೆ ಅವನೂ ತಿನ್ನುತ್ತಿದ್ದಾನೆ. ಹಾಗೆಯೇ ಪಾಪವನ್ನು ಮಾಡಿ ಲೋಕಗಳಿಗೆ ಹೋದರೆ ಬಹಳ ನರಕದಂತಹ ಪರಿಸ್ಥಿತಿ ಇರುತ್ತದೆ. ಅಲ್ಲಿ ದುಃಖಿಸುವುದೇ ಅಲ್ಲ ಮತ್ತೇ ಭೂಮಿಯ ಮೇಲೆ ಹೋದ ಮೇಲೆ ಬಹಳ ಕಷ್ಟಗಳು ಬರುತ್ತವೆಂದು ತಿಳಿದುಕೊಳ್ಳುತ್ತಾರೆ.

ಆಗ **"ತಾನು ಮಾಡಿದ ಕರ್ಮಗಳ ಫಲಿತವೇ ತನ್ನ ಕೂಡಾ ಬರುತ್ತದೆಂದು"** ಚೆನ್ನಾಗಿ ಅರಿವಿಗೆ ಬರುತ್ತದೆ. ತಾನು ಸಂಪಾದಿಸಿದ ಹಣವಾಗಲಿ, ಸಂಪತ್ತುಗಳಾಗಲಿ, ಯಾವುದೂ ಹಿಂದೆ ಬಾರದು ಎಂಬುದು ಕೂಡಾ ಅರ್ಥವಾಗುತ್ತದೆ.

ಅದಕ್ಕೂ ಮೊದಲು ಏನಾದರೂ ಕಷ್ಟ ಬಂದರೆ ದುಃಖಿಸುತ್ತಿದ್ದನು. ನನ್ನ ಬದುಕ ಹೀಗಾಯಿತು, ನಾನು ಏನು ಮಾಡಿದ್ದೇನೆಂದು ದೇವರು ನನ್ನನ್ನು ನೋಯಿಸುತ್ತಿದ್ದಾನೆಂದು ಕೊಳ್ಳುತ್ತಾನೆ.

ಏಕೆಂದರೆ ಈಗ ನಾನು ಎಷ್ಟೋ ಊರುಗಳನ್ನು ತಿರುಗುತ್ತಿದ್ದೇನೆ ಎಷ್ಟೋ ಜನರನ್ನು ಭೇಟಿಯಾಗುತ್ತಿದ್ದೇನೆ. ಹೇಳರು, ಆದರೆ ಹೆಚ್ಚು ಕಡಿಮೆ ಎಲ್ಲರಿಗೂ ಏನೋ ಒಂದು ಸಮಸ್ಯೆ, ಏನೋ ಒಂದು ಕಷ್ಟ, ಏನೋ ಒಂದು ನೋವು ಇದೆ. ಅವು ಇಲ್ಲದೆ ಇರುವಂತರಂತೂ ಇಲ್ಲ. ಕೆಲವರು ತರತರದ ಶಾರೀರಕವಾದ, ಕುಟುಂಬ ಪರವಾದ, ಆರ್ಥಿಕಪರವಾದ ಸಮಸ್ಯೆಗಳಿಂದ ಒದ್ದಾಡುತ್ತಾ ಇರುತ್ತಾರೆ. ಕೆಲವರು ತಡೆದುಕೊಳ್ಳಲಾರದವರು ಏನು ಮಾಡಬೇಕು? ಎಂದು ಕೇಳುತ್ತಿರುತ್ತಾರೆ.

ಆಗ ನಾನು ಮಾಂಸವನ್ನು ತಿನ್ನುತ್ತಿರುವೆಯ? ಎಂದು ಕೇಳುತ್ತೇನೆ. ಆಗ ಇಲ್ಲಾರೀ, ತಿನ್ನುತ್ತಿಲ್ಲ. ಯಾವಾಗಲೋ ಬಿಟ್ಟೆನು ಎನ್ನುತ್ತಾನೆ. ಆಗ ನಿನ್ನ ವಯಸ್ಸು ಎಷ್ಟು? ಎಂದು ಕೇಳುತ್ತೇನೆ. 50 ವರ್ಷ ಎನ್ನುತ್ತಾನೆ ಮತ್ತೇ 10 ವರ್ಷಗಳ ಹಿಂದೆ ಬಿಟ್ಟೆನು ಎನ್ನುತ್ತಿರುವೆ, ಈಗ 50 ವರ್ಷಗಳಾದರೆ 40 ವರ್ಷಗಳು ತಿಂದಿರುವೆಯಲ್ಲಾ? ಎನ್ನುತ್ತೇನೆ. ಅಲ್ಲಿ ನೋವು ಇಲ್ಲಿ ನೋವು ಅನ್ನುತ್ತಾನೆ ಕೋಳಿಯ ಕುತ್ತಿಗೆ ಕೊಯ್ಯುತ್ತಿರುವಾಗ ಅದಕ್ಕೆ ನೋವು ಇರುವುದಿಲ್ಲ, ಏನು ಮಾಡಿರುವೆಯೋ ಅದನ್ನೇ ಅನುಭವಿಸುತ್ತಿರುವೆ ಎಂದು ಹೇಳುತ್ತಿರುತ್ತೇನೆ. ಏಕೆಂದರೆ ಕನಿಷ್ಠ ಆಗಲಾದರೂ **"ತಾನು ಮಾಡಿದ ಕರ್ಮಗಳ ಫಲವೇ ತಾನು ಅನುಭವಿಸುತ್ತಿದ್ದೇನೆ"** ಎಂಬ ವಿಷಯ ಅವನಿಗೆ ತಿಳಿಯಬೇಕೆಂದೇ.

ಕೆಲವರಿಗೆ ಆ ವಿಷಯವನ್ನು ಹೇಳದೇ, ಧ್ಯಾನ ಮಾಡು ಕಡಿಮೆಯಾಗುತ್ತದೆ, ಸಂಕಲ್ಪವಿಟ್ಟುಕೋ ಕಡಿಮೆಯಾಗುತ್ತದೆ ಎಂದು ಹೇಳುತ್ತಾ ಇರುತ್ತಾರೆ. ಹೇಗೆ ಕಡಿಮೆಯಾಗುತ್ತದೆ? ಮಾಡಿದ್ದನ್ನು ಅನುಭವಿಸಬೇಕಲ್ಲಾ? ಹಾಗೆ ಹೇಳಿದರೆ ಅವರಲ್ಲಿ ಪರಿವರ್ತನೆ ಎಲ್ಲಿ ಬರುತ್ತದೆ? ಮಾಡುವ ಪಾಪದ ಕೆಲಸಗಳನ್ನು ಹೇಗೆ ಬಿಡುತ್ತಾರೆ? ತಾನು ಮಾಡುವ ತಪ್ಪು ಅವರಿಗೆ ಅರ್ಥವಾದರೆ ವರ್ತನೆಯನ್ನು ಬದಲಾಯಿಸಿಕೊಳ್ಳುತ್ತಾರೆ.

ಹಾಗೆ "ನಾನು ಮಾಡಿದ ಕರ್ಮಗಳ ಫಲವೇ ಈಗ ಅನುಭವಿಸುತ್ತಿದ್ದೇನೆ" ಎಂಬ ಅರಿವು ಉಂಟಾದಾಗ ಕಷ್ಟ ಬಂದರೂ ದುಃಖಪಡರು. ನಾನು ಮಾಡಿದ್ದನೇ ನಾನು ಅನುಭವಿಸುತ್ತಿದ್ದೇನೆ ಎಂದು ತಿಳಿದುಕೊಳ್ಳುತ್ತಾರೆ. ಹಾಗೆ ತಿಳಿದುಕೊಳ್ಳುವುದರಿಂದ ನಾನು ಇದಕ್ಕೂ ಮೊದಲು ಸಾಲವನ್ನು ಮಾಡಿದ್ದೇನೆ, ಆ ಸಾಲವನ್ನು ಈಗ ತೀರಿಸುತ್ತಿದ್ದೇನೆ ಎಂದು ಆ ಕಷ್ಟವನ್ನು ಸಂತೋಷದಿಂದ ಅನುಭವಿಸುತ್ತಾರೆ. ಅವರಿಗೆ ಅದು ಅಷ್ಟು ನೋವು ಅನಿಸುವುದಿಲ್ಲ, ಹಗುರವಾಗಿ ಬಿಡುತ್ತದೆ. ಸ್ವಲ್ಪ ದಿನ ತಾಳ್ಮೆಯಿಂದ ಇದ್ದರೆ ಕರ್ಮವು ಕಳೆದು ಹೋಗಿ ಅದರಿಂದ ಹೊರಬರುತ್ತಾರೆ.

ಅಚಿದರೆ ಮರಣಿಸಿದ ನಂತರ ಏನು ನಡೆಯುತ್ತದೋ ತಿಳಿದುಕೊಂಡರೆ! **"ದುಃಖದಿಂದ ಸುಲಭವಾಗಿ ಹೊರಬರುತ್ತಾರೆ",** ಹಾಗೆಯೇ ಧ್ಯಾನವನ್ನು ತೀವ್ರವಾಗಿ ಮಾಡಿ ಶಕ್ತಿಯನ್ನು ಚೆನ್ನಾಗಿ ಸಂಪಾದಿಸಿಕೊಂಡರೆ, ಆ ಕಷ್ಟವನ್ನು, ಆ ನೋವನ್ನು ಸಹಿಸಿಕೊಳ್ಳುವ ಶಕ್ತಿ, ತಡೆದುಕೊಳ್ಳುವ ಶಕ್ತಿ ಬರುತ್ತದೆ. ಅದಕ್ಕಾಗಿ ಅವನ ಕಾಲು, ಇವನ ಕಾಲು ಹಿಡಿಯಬೇಕಾದ ಅಗತ್ಯವಿಲ್ಲದೆ ಎಲ್ಲಾ ಅವರಿಗೇ ಅರ್ಥವಾಗಿ ಬಿಡುತ್ತದೆ.

ಇನ್ನೊಂದು ವಿಷಯವೇನೆಂದರೆ, ಕಷ್ಟಗಳಿರುವವರು ದೊಡ್ಡ ಪಾಪವನ್ನು ಮಾಡಿದರೆ ಹೆಚ್ಚು ಕಾಲ ಅನುಭವಿಸುತ್ತಾರೆ, ಸಣ್ಣ ಪಾಪವನ್ನು ಮಾಡಿದರೆ ಕಡಿಮೆ ಕಾಲ ಅನುಭವಿಸುತ್ತಾರೆ, ಬೇಗನೆ ಹೊರ ಬರುತ್ತಾರೆ. ಒಂದು ನೆನಪಿಟ್ಟುಕೊಳ್ಳಿ. ಯಾವ ಕಷ್ಟ ಬಂದರೂ, ಯವುದೂ ಶಾಶ್ವತವಲ್ಲ, ಕೆಲವುದಿನ ತಡೆದುಕೊಂಡರೆ ಕಷ್ಟಗಳಿಂದ ಹೊರ ಬರುತ್ತಾರೆ.

ಮನೆಯಲ್ಲಿ ಜಗಳವಾದರೂ, ರೋಗಬಂದರೂ, ಆರ್ಥಿಕ ಸಮಸ್ಯೆಗಳು ಬಂದರೂ ಏನು ನಡೆದರೂ ಸರಿ, ಸ್ವಲ್ಪ ತಾಳ್ಮೆಯಿಂದ ಇರಿ. ಪ್ರತಿ ತಿಂಗಳು ಭೀಮವರಂಗೆ ಬಂದು ತೀವ್ರ ಸಾಧನೆ ಮಾಡಿದರೆ ಸಾಧನೆಯಲ್ಲಿ ಹಿಡಿತ ಬರುತ್ತದೆ, ಮನೆಗೆ ಬಂದ ಮೇಲೆ ಕೂಡಾ ಎಷ್ಟು ಗಂಟೆಗಳಾದರೂ ಹಾಯಾಗಿ ಕುಳಿತುಕೊಳ್ಳಬಲ್ಲವರಾಗುತ್ತೀರಿ.

ಆದ್ದರಿಂದ ತೀವ್ರ ಸಾಧನೆ ಮಾಡಿ ಶಕ್ತಿಯನ್ನು ಚೆನ್ನಾಗಿ ಹೆಚ್ಚಿಸಿಕೊಳ್ಳಿ. ಆ ಶಕ್ತಿ ನಿಮ್ಮನ್ನು ವಜ್ರಕವಚದಂತೆ ರಕ್ಷಿಸುತ್ತದೆ. ನೀವು ಗಮನಿಸಿ, ಇಂಜಕ್ಷನ್ ಹಾಕಿಸಿ ಕೊಳ್ಳುವುದು ಅಭ್ಯಾಸವಿಲ್ಲದವನು ಇಂಜಕ್ಷನ್ ಎಂದರೆ ಭಯಪಡುತ್ತಾನೆ, ಇಬ್ಬರು, ಮೂವರು ಹಿಡಿದುಕೊಂಡು ಮಾಡಿಸಬೇಕಾಗುತ್ತದೆ. ಆದರೆ ಕೆಲವರು ಏನು ಮಾತನಾಡದೆ ಮಾಡಿಸಿಕೊಳ್ಳುತ್ತಾರೆ. ಒಂದು ಇಂಜಕ್ಷನ್ ಮಾಡಿದ ನಂತರ ಇನ್ನೊಂದು ಮಾಡುತ್ತೇನೆ ಅಂದರೆ ಸರಿ ಮಾಡಿರಿ ಅನ್ನುತ್ತಾರೆ. ಅಂದರೆ ತಡೆದುಕೊಳ್ಳಲಾರದವನು ಅರಚುವುದು, ಕಿರುಚುವುದು ಮಾಡುತ್ತಾನೆ, ತಡೆದುಕೊಳ್ಳಬಲ್ಲವನು ಮಾತನಾಡದೆ ಮಾಡಿಸಿಕೊಳ್ಳುತ್ತಾನೆ. ಹಾಗೆಯೇ ನೀವೂ ಕೂಡಾ ನಿಮ್ಮ ಶಕ್ತಿಯನ್ನು ಹೆಚ್ಚಿಸಿಕೊಂಡರೆ ಎಷ್ಟು ಕಷ್ಟ ಬಂದರೂ ತಡೆದುಕೊಳ್ಳುವಿರಿ.

ನಾನು ಈ ನಡುವೆ ಕುಡಿಯುವ ನೀರೆಂದು ಯ್ಯಾಸಿಡ್‌ನ್ನು ಬಾಯಲ್ಲಿ ಸುರಿದುಕೊಂಡಾಗ, ಭೀಮವರಂನಲ್ಲಿ ಐ.ಸಿ.ಯುನಲ್ಲಿ ಒಂದು ದಿನ ಇದ್ದೇನು. ಅದರಲ್ಲಿಯೇ ಒಬ್ಬಾಕೆ ನೋವು ತಡೆದುಕೊಳ್ಳಲಾರದೆ, ಅಮ್ಮೋ ಯಪ್ಪೋ! ಎಂದು ಅಳುತ್ತಲೇ ಇದ್ದಳು. ಆ ನರ್ಸ್‌ಗಳು.. ಎಲ್ಲರಿಗೆ ತೊಂದರೆಯಾಗುತ್ತಿದೆ ಎಲ್ಲರಿಗೆ ಎಂದು ಆಕೆಯನ್ನು ಬಯ್ಯುತ್ತಿದ್ದರು. ಮತ್ತೆ ನನಗೆ ನೋವು ಇಲ್ಲವೇ? ಅಂದರೆ ಇದೆ, ಆದರೆ ನನಗೆ ತಡೆದುಕೊಳ್ಳುವ ಶಕ್ತಿ ಇದೆಯಾದ್ದರಿಂದ ಸಮಾಧಾನವಾಗಿ ಸಹಿಸಿಕೊಂಡೆನು. ಆದಕಾರಣ ಯಾರಾಗಲಿ ಸರಿ, ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ ಕಷ್ಟ ಬಂದರೆ ದುಃಖಿಸರು, ಮಾಡಿದ ಸಾಲ ತೀರುತ್ತಿದೆಯೆಂದು ಸಂತೋಷವಾಗಿ ಅನುಭವಿಸುತ್ತಾರೆ.



**"ಮರಣವೆಂಬುದು ಆಶ್ಚರ್ಯಕರವಾದ ವಿಷಯವಲ್ಲ"**

**- ಬ್ರಹ್ಮರ್ಷಿ ಪಿತಾ ಮಹಾ ಪತ್ರೀಜಿ**

## ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ 'ಮರಣಿಸಿದ ನಂತರ ಮಾಡುವ ಕರ್ಮಕಾಂಡಗಳಿಂದ ಪ್ರಯೋಜನ ಇರುವುದಿಲ್ಲವೆಂದು ತಿಳಿದುಕೊಳ್ಳುತ್ತಾನೆ'

ಅಮರರಾಗಬೇಕೆಂದು ಎಲ್ಲರೂ ಕೋರಿಕೊಳ್ಳುತ್ತಾರೆ, ಅಂದರೆ ಜನ್ಮವಿಲ್ಲದ ಸ್ಥಿತಿ ಹೊಂದಬೇಕೆಂದು ಪ್ರತಿಯೊಬ್ಬರೂ ಅಂದುಕೊಳ್ಳುತ್ತಾರೆ, ಆದರೆ ಎಷ್ಟು ಜನ್ಮಗಳನ್ನೆತ್ತಿದರೂ 'ನಾನು ದೇಹ'ವೆಂದುಕೊಳ್ಳುತ್ತಾ ಜೀವಿಸಿದಷ್ಟು ಕಾಲ ಅಮರರಾಗಲಾರರು. 'ನಾನು ಆತ್ಮ' ಎನ್ನುವಂತೆ ಜೀವಿಸಬಲ್ಲವರಾಗುತ್ತಾರೋ ಅವರೇ ಅಮರರಾಗುತ್ತಾರೆ. ಹಾಗೆ ಯಾರು ಜೀವಿಸಬಲ್ಲರೆಂದರೆ? ಯಾರಾದರೆ ಮರಣಿಸುವ ಮೊದಲೇ ಮರಣಿಸುತ್ತಾರೋ ಅವರೇ ಜೀವಿಸಬಲ್ಲರು.

ಅಂತಹವರಿಗೆ ಮರಣಿಸಿದ ನಂತರ ಆತ್ಮನಾದ ತನಗೆ ಉನ್ನತ ಲೋಕ ಪ್ರಾಪ್ತಿಯಾಗಬೇಕೆಂದು ಅರ್ಥವಾಗುತ್ತದೆ. ಮತ್ತೆ ಉನ್ನತ ಲೋಕ ಪ್ರಾಪ್ತಿಯಾಗಬೇಕೆಂದರೆ ಭೂಮಿಯ ಮೇಲೆ ತನಗೆ ಕೊಡಲ್ಪಟ್ಟ ದೇಹದಿಂದ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು. ಆದ್ದರಿಂದ ಈ ವಿಷಯಗಳೆಲ್ಲವನ್ನು ತಿಳಿದುಕೊಂಡಾಗ ಅವರಲ್ಲಿ ಎಷ್ಟೋ ಬದಲಾವಣೆಗಳಾಗುತ್ತವೆ.


ಕೆಲವರು ಹಣವಿಲ್ಲದವರು ಏನೆಂದು ಕೊಳ್ಳುತ್ತಾರೆಂದರೆ? ನನಗೇನು ಇಲ್ಲವೆಂದು ಕೊಳ್ಳುತ್ತಾರೆ. ಆದರೆ ನೆನಪಿಟ್ಟುಕೊಳ್ಳಿ ಹಣಕ್ಕಿಂತಲೂ ಕೋಟಿಗಳ ಮೌಲ್ಯವುಳ್ಳಂತಹವುಗಳನ್ನು ಎಲ್ಲರಿಗೂ ಎಷ್ಟೋ ಕೊಡಲ್ಪಟ್ಟಿವೆ. ಶರೀರ, ಸಮಯ, ವಾಕ್ಕು, ಶಕ್ತಿ, ಬುದ್ಧಿ, ಆಯಸ್ಸು ಕೊಡಲ್ಪಟ್ಟಿದೆ. ಮತ್ತೇ ಯಾರಾದರೆ ಮರಣಿಸುವ ಮೊದಲೇ ಮರಣಿಸುತ್ತಾರೋ, ಇವೆಲ್ಲಾ ಆತ್ಮದ ಲಾಭಕ್ಕಾಗಿ ಅಂದರೆ ಆತ್ಮನು ಊರ್ಧ್ವ ಲೋಕಗಳಿಗೆ ಸೇರಿಕೊಳ್ಳುವುದಕ್ಕೆ, ಆತ್ಮದ ಉನ್ನತಿಗಾಗಿ ಅಂದರೆ ಶ್ರೇಷ್ಠರಾಗಲು ಉಪಯೋಗಿಸುತ್ತಾರೆ. ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಾರೆ.

ಅದಕ್ಕೂ ಮೊದಲು ದೇಹಕ್ಕೆ ಲಾಭವನ್ನುಂಟು ಮಾಡುವ ಕೆಲಸಗಳನ್ನು ಮಾಡುತ್ತಾರೆ. ಇದು ಅರ್ಥವಾದರೆ ಆತ್ಮಕ್ಕೆ ಲಾಭವನ್ನುಂಟು ಮಾಡುವಂತವೇ ಮಾಡುತ್ತಾರೆ. ಮರಣಿಸಿದ ನಂತರ ಮಾಡುವ ಕರ್ಮಕಾಂಡಗಳಿಂದಾಗಲಿ, ಆ ಸಂದರ್ಭವಾಗಿ ಮಾಡುವ ದಾನಗಳಿಂದಾಗಲಿ ಪ್ರಯೋಜನವಿರುವುದಿಲ್ಲವೆಂದು ತಿಳಿಯುತ್ತದೆ. ಆದ್ದರಿಂದ ವ್ಯರ್ಥವಾದ ಕರ್ಮಕಾಂಡಗಳನ್ನು ಮಾಡರು. ಇದು ನಮಗೆ 18 ಆದರ್ಶ ಸೂತ್ರಗಳಲ್ಲಿ ಪತ್ರೀಜಿಯವರು ಹೇಳಿದ್ದಾರೆ.

ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ? **“ಕರ್ಮಕಾಂಡಗಳಿಂದ ಪ್ರಯೋಜನವಿರುವುದಿಲ್ಲವೆಂದು ತಿಳಿದುಕೊಳ್ಳುತ್ತಾರೆ”** ಅದಕ್ಕೂ ಮೊದಲು ಅವರು ಮಾಡುವ ಕರ್ಮಗಳಿಗೆ ಅನುಗುಣವಾಗಿ ಅವರನ್ನು ಕರೆದುಕೊಂಡು ಹೋಗುವ ಲೋಕಗಳು ಆಧಾರಪಟ್ಟಿರುತ್ತವೆ. ಅಷ್ಟೇ ಹೊರತು ಅವರ ಗಂಡು ಮಕ್ಕಳು ಮಾಡುವ ಕರ್ಮಕಾಂಡಗಳು, ಅವರು ಇಡುವ ಪಿಂಡಗಳಿಂದ ಅವನು ಊರ್ಧ್ವ ಲೋಕಗಳಿಗೆ ಸೇರಿಕೊಳ್ಳಲಾರನು ಎಂದು ತಿಳಿದುಕೊಳ್ಳುತ್ತಾರೆ.

ಮತ್ತೇ ಈ ಸಮಯದಲ್ಲಿ ಮಕ್ಕಳು ಮಾಡುವ ದಾನಗಳಿಂದ ಕೂಡಾ ಏನು ಪ್ರಯೋಜನವಿರುವುದಿಲ್ಲ. ದಾನಗಳು ಒಳ್ಳೆಯವೇ, ಆದರೆ ಕಬೀರ್ ಏನು ಹೇಳಿದ್ದಾರೆಂದರೆ? **“ಯಾವ ಕೈ ಕರ್ಮವನ್ನು ಆಚರಿಸುತ್ತದೋ! ಆ ಕೈಯೇ ಫಲಗಳನ್ನು ಅನುಭವಿಸುತ್ತದೆ”** ಎಂದಿದ್ದಾರೆ. ಅಂದರೆ **“ಯಾರು ಮಾಡಿದ ಕರ್ಮದ ಫಲವು ಅವರಿಗೇ ಬರುತ್ತದೆ, ಅಷ್ಟೇ ಹೊರತು ಯಾರಿಗೆ ಆ ಫಲವು ಬರಬೇಕೆಂದು ಮಾಡುತ್ತಾರೋ ಅವರಿಗೆ ಮಾತ್ರ ಬರದು”** ಎಂದಿದ್ದಾರೆ.

ಆದ್ದರಿಂದ ಜೀವಿಸಿರುವಾಗ ತನಗಾಗಿ ಅಂದರೆ ಆತ್ಮ ಲಾಭಕ್ಕಾಗಿ ಮಾಡುವ ಸಾಧನೆ, ಸೇವೆಗಳು, ಸಂಪಾದಿಸಿಕೊಳ್ಳುವ ಜ್ಞಾನದಿಂದ ಮಾತ್ತವೇ ಉನ್ನತ ಲೋಕಗಳನ್ನು ಹೊಂದಬಲ್ಲೆನೆಂದು ತಿಳಿದುಕೊಳ್ಳುತ್ತಾರೆ. ಮಾಡುವ ಕರ್ಮಕಾಂಡಗಳಿಂದ ಪ್ರಯೋಜನವಿರುವುದಿಲ್ಲವೆಂದು ತಿಳಿದುಕೊಳ್ಳುತ್ತಾರೆ.



# ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ 'ತನ್ನ ಜೀವನ ಪ್ರಣಾಳಿಕೆ ಏನೆಂದು ತಿಳಿಯುತ್ತದೆ'

ಅಂದರೆ ಮರಣಿಸಿದ ನಂತರ ಏನು ನಡೆಯುತ್ತದೋ ಜೀವಿಸಿರುವಾಗಲೇ ತಿಳಿದುಕೊಂಡರೆ ಒಟ್ಟು ಜೀವನ ಬದಲಾಗಿ ಬಿಡುತ್ತದೆ. ನಿಮ್ಮ ವರ್ತನೆ, ಮಾಡುವ ಕೆಲಸಗಳು, ಆಡುವ ಮಾತುಗಳು, ಆಲೋಚನಾ ವಿಧಾನ, ಸಮಸ್ತವೂ ಬದಲಾಗಿ ಬಿಡುತ್ತವೆ. ಆ ಬದಲಾವಣೆಗಳೆಲ್ಲಾ ಕೂಡಾ ನಿಮಗೆ ಅಂದರೆ ಆತ್ಮಕ್ಕೆ ಎಷ್ಟೋ ಲಾಭವನ್ನು ತಂದುಕೊಡುತ್ತವೆ. ದೇಹದ ಕುರಿತೇ ಕೃಷಿ ಮಾಡಿದ ನೀವು, ನಾನು ಆತ್ಮನು ಎಂದು ತಿಳಿದುಕೊಂಡ ಮೇಲೆ ಆತ್ಮನ ಕುರಿತು ಕೃಷಿ ಮಾಡುತ್ತೀರಿ, ಆದ್ದರಿಂದ ಆತ್ಮಕ್ಕೆ ಎಷ್ಟೋ ಲಾಭವನ್ನು ತಂದುಕೊಡುತ್ತದೆ.

ಈ ಆತ್ಮ ಮಾರ್ಗದೊಳಗೆ ಬಂದವರ ವರ್ತನೆಯಲ್ಲಿ ಬದಲಾವಣೆ ಬರುತ್ತದೆ. ನಿಮ್ಮ ವರ್ತನೆ ಎಷ್ಟು ಬದಲಾಗುತ್ತಿದ್ದರೆ. ನೀವು ಆತ್ಮದ ಪರವಾಗಿ ಅಷ್ಟು ಬೆಳೆಯುತ್ತಿದ್ದಂತೆಯೇ.

ಯಾವಾಗಾದರೆ ನಿಮ್ಮ ಕೆಲಸಗಳೆಲ್ಲ 100% ಆತ್ಮ ಎನ್ನುವಂತೆ ಮಾಡುತ್ತಾ ಇರುತ್ತೀರೋ, ಆತ್ಮಕ್ಕೆ ಪ್ರಾಮುಖ್ಯತೆ ಕೊಡುತ್ತಾ ದೇಹದ ಅಗತ್ಯಗಳಿಗೇ ಪರಿಮಿತವಾಗುತ್ತಾ ಜೀವಿಸುತ್ತಾರೋ ಈ ಆಧ್ಯಾತ್ಮಿಕ ಮಾರ್ಗದಲ್ಲಿ ಎಷ್ಟೋ ಬೆಳೆದಂತೆ ಲೆಕ್ಕ.

ನೀವು ಪತ್ರೀಜಿಯವರ ಜೀವನ, ಆತನ ವರ್ತನೆ ನೋಡಿದರೆ ಆತನು ಯಾವಾಗಲೂ ನಾನು ಆತ್ಮವೆನ್ನುವಂತೆ ಜೀವಿಸುತ್ತಾರೆ. ಹಾಗೆ ಜೀವಿಸುವುದೇ ಆಧ್ಯಾತ್ಮಿಕ ಬೆಳೆಯುವುದು. ನಿಮ್ಮ ಗತ ಜನ್ಮಗಳ ಸಂಸ್ಕಾರಗಳಿಂದಾಗಲಿ, ಹಿಂದಿನ ಜನ್ಮದಲ್ಲಿ ಮಾಡಿದ ಸಾಧನೆಯ ಫಲವಾಗಿರಲಿ, ಒಟ್ಟಾರೆ ಈ ಮಾರ್ಗದೊಳಗೆ ಬಂದಿದ್ದೀರಿ ಆದ್ದರಿಂದ ಜ್ಞಾನವನ್ನು ವೃದ್ಧಿ ಮಾಡಿಕೊಳ್ಳಬೇಕು, ನಿಮ್ಮ ಪ್ರಣಾಳಿಕೆಯನ್ನು ನೀವು ತಿಳಿದುಕೊಳ್ಳಬೇಕು. ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ ನಿಮ್ಮ ಪ್ರಣಾಳಿಕೆ ಕೂಡಾ ನಿಮಗೆ ತಿಳಿಯುತ್ತದೆ.

ಪತ್ರೀಜಿಯವರು ಸ್ವಾಮಿ ವಿವೇಕಾನಂದರ ಕುರಿತು ಹೇಳುತ್ತಾ ಒಂದು ವಿಷಯವನ್ನು ಹೇಳಿದರು. ವಿವೇಕಾನಂದ, ರಾಮಕೃಷ್ಣ ಪರಮಹಂಸರ ಶಿಷ್ಯನು ಅಲ್ಲ, ವಿವೇಕಾನಂದರ ಶಿಷ್ಯರೇ ರಾಮಕೃಷ್ಣ ಪರಮಹಂಸರು ಎಂದು ಹೇಳಿದರು. ಆತನ ಪ್ರಣಾಳಿಕೆ ಪೂರ್ತಿ ಮಾಡಿಕೊಳ್ಳಬೇಕು, ಅಂದರೆ ಭೂಮಿಯ ಮೇಲೆ ಬಂದ ಮೇಲೆ ಅದನ್ನು ಗುರುತು ಮಾಡುವ ಗುರುವು ಬೇಕು.

ಅದಕ್ಕೆಂದೇ ರಾಮಕೃಷ್ಣ ಪರಮಹಂಸರನ್ನು ತನ್ನಗಿಂತ ಮುಂಚಿತವಾಗಿಯೇ ಕಳುಹಿಸಿ ತನ್ನ ಪ್ರಣಾಳಿಕೆಯನ್ನು ನೆನಪು ಮಾಡು ಎಂದರಂತೆ. ಅದಕ್ಕೆ ವಿವೇಕಾನಂದ ರಾಮಕೃಷ್ಣರಿಗೆ ಆಕರ್ಷಿತನಾಗುವುದು, ಆತನ ಮೂಲಕ ತನ್ನ ಪ್ರಣಾಳಿಕೆಯನ್ನು ತಿಳಿದುಕೊಳ್ಳುವುದು, ಅತಿ ಸಣ್ಣ ವಯಸ್ಸಿನಲ್ಲಿಯೇ ಪ್ರಪಂಚವನ್ನು ಗಿರ್ರನೆ ತಿರುಗಿಸಿದ್ದು ನಡೆಯಿತು. ಅದಕ್ಕೆ ರಾಮಕೃಷ್ಣ ಪರಮಹಂಸರು ಗುರುವಾದರೂ ಕೂಡಾ ವಿವೇಕಾನಂದರು ಮಾಡಿದಷ್ಟು ಪ್ರಚಾರವನ್ನಾಗಲಿ, ತಿರುಗುವುದಾಗಲಿ ಮಾಡಲಿಲ್ಲ.

ಈಣ ಪತ್ರೀಜಿಯವರ ರೂಪದಲ್ಲಿ ನನ್ನ ಪ್ರಣಾಳಿಕೆ ನನಗೆ ತಿಳಿಯಿತು. ಮುಖ್ಯವಾಗಿ 'ನಾನು ದೇಹವಲ್ಲ ನಾನು ಆತ್ಮ' ಎಂಬುದು ತಿಳಿಯಲ್ಪಟ್ಟಿತು. ಆದ್ದರಿಂದ ನಾನು ಈ ದೇಹವನ್ನು ಆತ್ಮ ಲಾಭಗಳಿಗೇ ಉಪಯೋಗಿಸಲು ಪ್ರಾರಂಭಿಸಿದೆನು. ಆದಕಾರಣ ಯಾರಾದರೂ ಸರಿ ಈ ದೇಹವನ್ನು ಒಬ್ಬ ರಮಣ ಮಹರ್ಷಿಯ ಹಾಗೆ ಪೂರ್ತಿಯಾಗಿ ಆತ್ಮಕ್ಕಾಗಿ ವಿನಿಯೋಗಿಸಬೇಕು.

** ** **

## ಮರಣದ ನಂತರ ನಡೆಯುವುದನ್ನು ತಿಳಿದುಕೊಂಡರೆ 'ಎಲ್ಲಾ ಬೇರೆ, ಬೇರೆ ಅಲ್ಲ, ಎಲ್ಲಾ ಒಂದೇ, ಎಲ್ಲಾ ನಾನೇ ಎಂಬ ವಿಷಯವನ್ನು ತಿಳಿದುಕೊಳ್ಳುತ್ತಾರೆ'

ಯಾವ ಮಾನವನಾಗಲಿ ಮರಣಿಸಿದ ನಂತರ ಹೊಂದುವ ಲಾಭಗಳ ಕುರಿತೇ ಜನ್ಮ ತೆಗೆದುಕೊಳ್ಳುತ್ತಾನೆ. ಮಾನವರು ಜನಿಸುವ ಮೊದಲು ಮೇಲಿನ ಲೋಕಗಳಲ್ಲಿ ಅಂದರೆ ಸೂಕ್ಷ್ಮ ಲೋಕಗಳಲ್ಲಿ ಇರುತ್ತಾರೆ. ಅಲ್ಲಿರುವಷ್ಟು ಕಾಲ ಅಲ್ಲಿಯ ಲಾಭಗಳ ಕುರಿತೇ, ಅಲ್ಲಿ ಶ್ರೇಷ್ಠರಾಗಬೇಕೆಂದು ಆಲೋಚಿಸುತ್ತಾ ಇರುತ್ತಾರೆ. ಅಲ್ಲಿರುವ ಹಿರಿಯ ಮಾಸ್ಟರ್‌ಗಳ ಮೂಲಕ, ಆತ್ಮ ಲಾಭವನ್ನು ಹೊಂದಬೇಕೆಂದರೆ ಏನು ಮಾಡಬೇಕೋ ಎಲ್ಲವನ್ನು ತಿಳಿದುಕೊಳ್ಳುತ್ತಾರೆ. ತಿಳಿದುಕೊಂಡು ಅದಕ್ಕೆ ತಕ್ಕ ಪ್ರಣಾಳಿಕೆಯನ್ನು ತಯಾರು ಮಾಡಿಕೊಂಡು ಭೂಮಿಗೆ ಬರುತ್ತಾರೆ.

ವಿಚಿತ್ರವೇನೆಂದರೆ, ಭೂಮಿಗೆ ಬಂದ ನಂತರ ಅವೆಲ್ಲಾ ಮರೆತು ಬಿಡುತ್ತಾರೆ. ನಿಜವಾಗಿ ಮೇಲಿನ ಲೋಕವಿದೆ ಎಂಬ ವಿಷಯವೂ ಕೂಡಾ ಅವರಿಗೆ ತಿಳಿಯದು. ಮೇಲಿನ ಲೋಕದಲ್ಲಿರುವಾಗ ಮಾತ್ರ ನಾನು ಆತ್ಮ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಈ

ಭೂಮಿಗೆ ಬಂದ ಮೇಲೆ, ಶರೀರ ತೆಗೆದುಕೊಂಡಾಗ ನಾನು ಆತ್ಮವೆಂಬುದು, ಮೇಲಿನ ಲೋಕದಿಂದ ಬಂದಿದೇನೆ ಎಂಬುದನ್ನು ಮರೆತು ಹೋಗುತಾರೆ. ಮೇಲಿನ ಲೋಕದಲ್ಲಿ ಈ ಕೆಲಸಗಳನ್ನು ಮಾಡಬೇಕೆಂದು ನಿರ್ಣಯಿಸಿಕೊಂಡ ವಿಷಯವನ್ನು ಕೂಡಾ ಮರೆತು ಹೋಗುತ್ತಾರೆ.

ಶರೀರವನ್ನು ತೆಗೆದುಕೊಂಡ ನಂತರ, ಕುಟುಂಬ, ಸಮಾಜ, ಸಂಘವೆಂದು ಎಷ್ಟು ಹೊತ್ತೂ ಇವುಗಳಲ್ಲಿಯೇ ಬಿದ್ದು ಅದೇ ಸರಿಯಾದದ್ದು ಎಂಬ ಉದ್ದೇಶದಿಂದ ಇರುತ್ತಾರೆ. ಹಣ ಸಂಪಾದಿಸುವುದು, ಸುಖಗಳನ್ನು ಅನುಭವಿಸುವುದು ಇದೇ ಜೀವನವೆಂದು ಕೊಳ್ಳುತ್ತಾರೆ.

ತಾನು ಆತ್ಮವೆಂಬುದು ತಿಳಿಯದು, ತಾನು ಮೇಲಿನ ಲೋಕಗಳಲ್ಲಿ ಶ್ರೇಷ್ಠನಾಗಬೇಕು ಅಂದರೆ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು ಎಂಬುದು ಕೂಡಾ ತಿಳಿಯದು. ಅಸಲು ಜನ್ಮವೆಲ್ಲಾ ಜೀವಿಸಿದರೂ ಕೂಡಾ ಆತ್ಮನನ್ನು ಹಿಡಿಸಿಕೊಳ್ಳರು, ಅಂತಹವರನ್ನೇ ಯೋಗಿಗಳು **"ಆತ್ಮ ಹಂತಕರು"** ಎಂದಿದ್ದಾರೆ.

ಆದರೆ ಯಾರಾದರೆ ಭೂಮಿಯ ಮೇಲೆ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಾರೋ ಅವರಿಗೆ ಅರ್ಥವಾಗುತ್ತದೆ. ತಾನು ದೇಹವಲ್ಲ ಆತ್ಮನೆಂದು, ಆತ್ಮನಾದ ತಾನು ಮೇಲಿನ ಲೋಕಗಳಿಂದ ಜ್ಞಾನವನ್ನು ಸಂಪಾದಿಸಿಕೊಳ್ಳುವುದಕ್ಕೆ ಬಂದಿದ್ದೇನೆಂದು, ಮೇಲಿನ ಲೋಕಗಳಿಗೆ ಹೋಗುತ್ತೇನೆಂದು ತಿಳಿದುಕೊಳ್ಳುತ್ತಾರೆ. ಮೇಲಿನ ಲೋಕಗಳಿಗೆ ಹೋದಾಗ ಅಲ್ಲಿ ಏನಿರುತ್ತದೆ? ಏನು ನಡೆಯುತ್ತದೆ? ಅಲ್ಲಿರುವವೆಲ್ಲಾವನ್ನು ತಿಳಿದುಕೊಳ್ಳುವುದಕ್ಕೆ ಪ್ರಾರಂಭಿಸುತ್ತಾರೆ.

ಅಂದರೆ ಮರಣಿಸಿದ ನಂತರ ನಡೆಯುವುದನ್ನು ಜೀವಿಸಿರುವಾಗಲೇ ತಿಳಿದುಕೊಳ್ಳುತ್ತಾರೆ. ಯಾವಾಗಾದರೆ ಇವೆಲ್ಲವನ್ನು ತಿಳಿದುಕೊಳ್ಳುತ್ತಾರೋ, ಭೂಮಿಯ ಮೇಲೆ ಜೀವಿಸುವ ವಿಧಾನವು ಬದಲಾಗಿಬಿಡುತ್ತದೆ. ಆಗ ಆತ್ಮರಾದ ಅವರಿಗೆ ಎಷ್ಟೋ ಲಾಭಗಳು ಲಭಿಸುತ್ತವೆ. ಅದಕ್ಕೂ ಮೊದಲು ಶರೀರ ನಾನು ಎಂಬ ಭಾವದಿಂದ ಎಲ್ಲಾ ಬೇರೆ ಬೇರೆ ಎಂದು ಅಂದುಕೊಳ್ಳುತ್ತಿದ್ದರು, ನಿಧಾನವಾಗಿ ಎಲ್ಲಾ ಒಂದೇ, ಎಲ್ಲಾ ನಾನೇ ಎಂಬ ಅಭಿಪ್ರಾಯವು ಏರ್ಪಡುತ್ತದೆ.

ಏಕೆಂದರೆ, ಶರೀರಗಳನ್ನು ನೋಡಿದರೆ ಬೇರೆ ಬೇರೆ ಕಾಣಿಸುತ್ತವೆ. ಆದರೆ ಯಾರೂ ಶರೀರವಲ್ಲ, ಎಲ್ಲರು ಆತ್ಮರೇ ಎಂಬ ಅರಿವು ಬಂದಾಗ ಎಲ್ಲಾ ಒಂದೇ, ಎಲ್ಲಾ ನಾನೇ ಎಂಬುದು ಅರ್ಥವಾಗುತ್ತದೆ. ಆಗ ಅವರ ವರ್ತನೆ ಎಷ್ಟೋ ಬದಲಾಗಿ ಬಿಡುತ್ತದೆ.

ಅದಕ್ಕೂ ಮೊದಲು ಆಕೆಯು ಸ್ತ್ರೀ, ನಾನು ಪುರುಷನು, ನನ್ನದು ಒಂದು ಕುಲ, ನಿನ್ನದು ಇನ್ನೊಂದು ಕುಲ, ನಮ್ಮದೊಂದು ಕುಟುಂಬ, ಅವರದು ಇನ್ನೊಂದು

ಕುಟುಂಬ, ನನ್ನದೊಂದು ಮತ– ಅವರದೊಂದು ಮತ, ನಾನು ಈ ದೇಶಸ್ತನು ಅವರು ಆ ದೇಶಸ್ತರು ಎಂದುಕೊಳ್ಳುತ್ತಾರೆ.

ಹಾಗೇ ತನ್ನವರ ಮೇಲೆ ಮಮಕಾರವನ್ನು ಬೆಳೆಸಿಕೊಳ್ಳುವುದು, ಉಳಿದವರು ಬೇರೆ ಬೇರೆ ಎಂದುಕೊಳ್ಳುತ್ತಾ ಅವರನ್ನು ದ್ವೇಷಿಸುವುದು, ಅವರನ್ನು ಮೋಸಗೊಳಿಸುವುದು, ಅವಮಾನಿಸುವುದು, ಅವರ ಮೇಲೆ ಕಕ್ಷೆಯನ್ನು ಕಟ್ಟುವುದು, ಪ್ರತೀಕಾರವನ್ನು ತೀರಿಸಿಕೊಳ್ಳುವ ಕೆಲಸಗಳನ್ನು ಮಾಡುವಂತಹ ಕೆಲಸಗಳನ್ನು ಮಾಡುತ್ತಾರೆ. ಅವುಗಳ ಫಲವಾಗಿ ಜೀವನದಲ್ಲಿ ಕಷ್ಟಗಳನ್ನು ಅನುಭವಿಸುತ್ತಾ ದುಃಖದಲ್ಲಿ ಜೀವಿಸುತ್ತಾರೆ. ಈ ಪರಿಸ್ಥಿತಿ ಏಕೆ ಏರ್ಪಟ್ಟಿತೆಂದರೆ? ಎಲ್ಲಾ ಬೇರೆ ಬೇರೆ ಎಂದು ಜೀವಿಸುವುದರಿಂದ.

ಹಾಗೆಯೇ ತಾನು ಮಾನವನು, ಅದು ಕೋಳಿ, ಇದು ಮೇಕೆ, ಅದು ಮೀನು ಎಂಬ ಭಾವದಲ್ಲಿರುತ್ತಾರೆ. ಮಾನವನಾದ ತಾನು ಸುಖಪಡಬೇಕೆಂದರೆ ಅವುಗಳನ್ನು ಚೆನ್ನಾಗಿ ಅಡುಗೆ ಮಾಡಿಕೊಂಡು ತಿನ್ನಬೇಕು ಎಂಬ ಭಾವದಿಂದ ಅವುಗಳನ್ನು ಸಾಯಿಸುವುದು, ತಾನು ಸಾಯಿಸದಿದ್ದರೂ ಅವುಗಳನ್ನು ತಿನ್ನುವುದರಿಂದ ಅವುಗಳನ್ನು ಸಾಯಿಸುವುದಕ್ಕೆ ಕಾರಣರಾಗುತ್ತಾರೆ. ಆದ್ದರಿಂದ ಈ ಪಾಪವೂ ಕೂಡಾ ಅನುಭವಿಸಬೇಕಾಗುತ್ತದೆ.

ಅಂತಹ ಹಿಂಸೆ ಮಾಡಿದಾಗ ಚೆನ್ನಾಗಿಯೇ ಇರುತ್ತದೆ, ಆದರೆ ಆ ಪಾಪದ ಫಲವನ್ನು ಅನುಭವಿಸಬೇಕಾಗಿ ಬಂದಾಗ ಆ ಜೀವನವು ಬಹಳ ದುರ್ಭರವಾಗಿ ತಯಾರಾಗುತ್ತದೆ. ಎಷ್ಟೋ ಬಾಧೆಪಡುತ್ತಾರೆ. ಏನು ನನ್ನ ಜೀವನ ಹೀಗಾಯಿತಲ್ಲಾ? ಏಕೆ ನಾನು ಇಷ್ಟು ಕಷ್ಟಗಳನ್ನು ಪಡುತ್ತಿದ್ದೇನೆ? ನಾನೇನು ಪಾಪವನ್ನು ಮಾಡಿದೆ? ಎಂದುಕೊಳ್ಳುತ್ತಾರೆ. ಏಕೆಂದರೆ ಆ ಕೋಳಿಗಳನ್ನು, ಮೇಕೆಗಳನ್ನು ತಿನ್ನುತ್ತಾ ಆಹಾರವನ್ನು ತಿನ್ನುತ್ತಿದ್ದೇನೆ ಎಂದುಕೊಳ್ಳುತ್ತಾರೆ, ಆದರೆ ಅದು ಪಾಪವೆಂಬ ಭಾವವೂ ಕೂಡಾ ಇರದು.

ಒಂದು ಫೈವ್ ಸ್ಟಾರ್ ಹೋಟೆಲಿನಲ್ಲಿ ತಟ್ಟೆಯಲ್ಲಿ ತರುತ್ತಾರೆ. ಅವುಗಳನ್ನು ನೋಡುತ್ತಿದ್ದರೆ ಬಾಯಿ ನೀರೂರುತ್ತಿರುತ್ತದೆ. ನೀವು ಹಸಿವಿನಿಂದ ಇದ್ದರೆ ಇನ್ನೂ ಹೆಚ್ಚಾಗಿ ನೀರೂರುತ್ತದೆ. ಯಾವಾಗ ಈ ತುಂಡುಗಳನ್ನು ಬಾಯಲ್ಲಿ ಹಾಕೊಳ್ಳಿ ಎಂದು ನೋಡುತ್ತಾರೆ. ಅವುಗಳನ್ನು ಬಾಯಲ್ಲಿ ಹಾಕ್ಕೊಂಡು ಕರಕರ ನಮಲುತ್ತಾ ತಿನ್ನುತ್ತಾರೆ. ತಿನ್ನದವರು ಎಷ್ಟು ದುರದೃಷ್ಟವಂತರೋ ಎಂದುಕೊಳ್ಳುತ್ತಾರೆ.

ಕೆಲವರು ಶಾಖಾಹಾರವನ್ನು ತೆಗೆದುಕೊಳ್ಳುವವರನ್ನು ನೋಡಿ, ಯಾರಾದರೂ ಪುಲಾವ್ ತಿನ್ನುತ್ತಾರಾಗಲಿ, ಹಸಿ ಹುಲ್ಲು ತಿನ್ನುತ್ತಾರಾ? ಎನ್ನುತ್ತಾರೆ. ಅನ್ನ ಬೇಳೆ ಉಣ್ಣುತ್ತಿದ್ದರೆ ಬೇಳೆಯ ಕೂಳು ತಿನ್ನುತ್ತಿರುವೆಯಾ? ಎಂದು ತಮಾಷೆ ಮಾಡುತ್ತಾರೆ.

ಆದರೆ ನೆನಪಿಟ್ಟುಕೊಳ್ಳಿ ಶಾಖಾಹಾರವನ್ನು ತಿನ್ನುವವರ ಮೇಲೆ ಈಗ ಮಾಂಸಾಹಾರವನ್ನು ತಿನ್ನುವವರು ಅನುಕಂಪ ಪಟ್ಟರೆ ಪಡಬಹುದಾಗಲಿ, ಕೆಲವು ದಿನಗಳ

ನಂತರ, ಮಾಂಸಾಹಾರವನ್ನು ತಿನ್ನುವವರನ್ನು ನೋಡಿ ಶಾಖಾಹಾರಿಗಳು ಅನುಕಂಪ ಪಡುವ ಪರಿಸ್ಥಿತಿ ಬರುತ್ತದೆ. ಹುಚ್ಚರು ! ಅವರೇನೋ ಸುಖಪಡುತ್ತಿದ್ದೇನೆ ಎಂದುಕೊಳ್ಳುತ್ತಾರೆ, ಎಷ್ಟು ಸುಖ ಪಡುತ್ತಿದ್ದೇನೆಂದು ಕೊಳ್ಳುತ್ತಾರೋ, ಅದಕ್ಕೆ ಹತ್ತರಷ್ಟು ಕಷ್ಟ ಪಡಬೇಕಾಗುತ್ತದೆ. ಈಗ ಪ್ರಪಂಚ ವ್ಯಾಪ್ತಿಯಾಗಿ ಶಾಖಾಹಾರಿಗಳು ಹೆಚ್ಚುತ್ತಿದ್ದಾರೆಂದು You Tube ನಲ್ಲಿ ಕೂಡಾ ವಾರ್ತೆಗಳು ಬರುತ್ತಿವೆ. ಮಾಂಸಾಹಾರದ ಹವಾ ಬದಲಾಗುತ್ತಿದೆ ಎಂದು ಹೇಳುತ್ತಿದ್ದಾರೆ.

ಹಾಗೆ ಏಕೆ ತಿನ್ನುತ್ತಿದ್ದಾರೆಂದರೆ? ಅವು ಬೇರೆ ಎಂಬ ಭಾವ, ತಾನು ಆತ್ಮ, ಅವೂ ಕೂಡಾ ಆತ್ಮಗಳೇ, ಎಲ್ಲಾ ಆತ್ಮಗಳೂ ಒಂದೇ ಎಂಬ ವಿಷಯ ತಿಳಿಯದೇ, ಎಲ್ಲವೂ ಒಂದೇ ಪೂರ್ಣಾತ್ಮನಿಂದಾಗಲಿ, ಮೂಲಾತ್ಮನಿಂದಾಗಲಿ ಬೇರೆಗೊಂಡಂತಹ ಅಂಶಗಳೇ ಎಂಬ ವಿಷಯ ತಿಳಿಯದೇ. ನೋಡಿ ಸಮುದ್ರದಲ್ಲಿ ನೀರನ್ನು 10 ಗ್ಲಾಸ್‌ಗಳಲ್ಲಿ ತೆಗೆದರೆ, 10 ಗ್ಲಾಸ್‌ಗಳಲ್ಲಿಯ ನೀರು ಒಂದೇ ರೀತಿಯಾಗಿ ಇರುತ್ತದೆಯಲ್ಲವೇ?.

ಹಾಗೆಯೇ ಪೂರ್ಣಾತ್ಮನಿಂದಾಗಲಿ, ಮೂಲಾತ್ಮನಿಂದಾಗಲಿ ಬೇರೆಗೊಂಡಂತಹ ಆತ್ಮಗಳು ಯಾವಾಗಲಿ ಸರಿ, ಅಂದರೆ ಪಕ್ಷಿಗಳಾಗಲಿ, ಪ್ರಾಣಿಗಳಾಗಬಹುದು, ಕ್ರಿಮಿಕೀಟಗಳಾಗಬಹುದು, ಮಾನವರಾಗಬಹುದು, ಯಾವುದಾದರೂ ಆಗಬಹುದು, ಎಲ್ಲಾ ಕೂಡಾ ಒಂದೇ ಪೂರ್ಣಾತ್ಮನಿಂದ ಬೇರೆಯಾದಂತವೇ. ಪತ್ರೀಜಿಯವರು ಹೇಳುತ್ತಾರೆ ಮೂಲಾತ್ಮನಾಗಲೀ, ಪೂರ್ಣಾತ್ಮವಾಗಲಿ, ಮಳೆಯಂತೆ ಈ ಆತ್ಮಗಳನ್ನು ಸೃಷ್ಟಿಸುತ್ತಲೇ ಇರುತ್ತವೆಯಂತೆ. ಹಾಗೆ ಸೃಷ್ಟಿಸಿ ಅವುಗಳಿಗೆ, ನೀವು ಬೆಳೆದು ನನ್ನ ಸ್ಥಾಯಿಗೆ ಬರಬೇಕು, ನನ್ನಂತೆ ತಯಾರಾಗಬೇಕು ಎಂಬ ಒಂದು ಲಕ್ಷ್ಯವನ್ನು ನಿರ್ದೇಶಿಸುತ್ತವೆ. ಆ ಲಕ್ಷ್ಯ ಸಾಧನೆಗಾಗಿಯೇ ಆತ್ಮರಾದ ನಾವೆಲ್ಲಾ ಈ ಜನ್ಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಪರಿಣಾಮ ಕ್ರಮದಲ್ಲಿ ಹಾಗೆ ಎಲ್ಲಾ ರೀತಿಯ ಜೀವರಾಶಿಗಳ ಜನ್ಮಗಳು ಮುಗಿದ ನಂತರ, ಮಾನವ ಜನ್ಮದೊಳಗೆ ಪ್ರವೇಶಿಸುತ್ತವೆ. ಮಾನವರಿಗೆ ಬುದ್ಧಿ ಇರುತ್ತದೆ. ಹಾಗೆ ಜನ್ಮಗಳನ್ನು ತೆಗೆದುಕೊಳ್ಳುತ್ತಾ ಈಗ ನಮ್ಮ ಸ್ಥಾಯಿಯವರೆಗೆ ಬರುವುದಕ್ಕೆ ಹೆಚ್ಚು ಕಡಿಮೆ ಮಾನವ ಜನ್ಮದೊಳಗೆ ಪ್ರವೇಶಿಸಿದ ನಂತರ 350 ಜನ್ಮಗಳಿಗೂ ಹೆಚ್ಚಾಗಿ ಆಗುತ್ತದೆ. ಈ ಸ್ಥಾಯಿಯಲ್ಲಿ ಸದ್ಗುರುವನ್ನು ಆಶ್ರಯಿಸುತ್ತಾರೆ. ಆತನಿಂದ ಧ್ಯಾನ ಸಾಧನೆ ಮಾಡಿ, ಜ್ಞಾನವನ್ನು ಸಂಪಾದಿಸಿಕೊಂಡು, ಈ ದೇಹ ನಾನಲ್ಲ, ನಾನು ಆತ್ಮ ಎಂದು ತಿಳಿದುಕೊಳ್ಳುತ್ತಾರೆ. ಆಗ ಆಲೋಚನೆಯಲ್ಲಿ ಬೀಳುತ್ತಾರೆ, ಅಷ್ಟೇ ಅಲ್ಲ ಆತ್ಮನಾದ ನಾನು ಈಗ ಲಾಭವನ್ನು ಹೊಂದಬೇಕೆಂದರೆ ಏನು ಮಾಡಬೇಕು? ಎಂಬುದನ್ನು ಕೂಡಾ ಆಲೋಚಿಸುತ್ತಾರೆ.

ಎಲ್ಲಾ ಬೇರೆ ಬೇರೆ ಎಂಬ ಭಾವದಿಂದ ಇರುವವರು, ಈಗ 'ಎಲ್ಲಾ ನಾನೇ, ನಾನೇ ಎಲ್ಲಾ' ಎಂಬ ಭಾವದೊಳಗೆ ನಿಧಾನವಾಗಿ ಬರುತ್ತಾರೆ. ಸ್ವಲ್ಪ ಸ್ವಲ್ಪವಾಗಿ ಬದಲಾವಣೆ

ಬರುತ್ತದೆ, ವರ್ತನೆಯಲ್ಲಿ ಕೂಡಾ ಬಹಳ ಬದಲಾವಣೆ ಬರುತ್ತದೆ.

ಯಾವಾಗಾದರೆ ಬದಲಾವಣೆ ಬಂದಿತೋ ಮಾಡಬಾರದ ಕೆಲಸಗಳನ್ನು ಮಾಡುವುದಿಲ್ಲ, ಮಾಡಬೇಕಾದ ಕೆಲಸಗಳನ್ನು ಮಾಡುತ್ತಾ ಇರುತ್ತಾರೆ. ಅವೆಲ್ಲಾ ಕೂಡಾ ಮೇಲಿನ ಲೋಕಗಳಿಗೆ ಸೇರಿಕೊಂಡಾಗ ಆತ್ಮಕ್ಕೆ ಎಷ್ಟೋ ಲಾಭಿಸುತ್ತದೆ. ಮೇಲಿನ ಲೋಕಗಳಲ್ಲಿ ಎಷ್ಟೋ ಉನ್ನತ ಸ್ಥಿತಿಯನ್ನು ಹೊಂದುತ್ತಾರೆ, ಉನ್ನತ ಲೋಕಗಳನ್ನು ಸೇರಿಕೊಳ್ಳುತ್ತಾರೆ. ಅಲ್ಲಿಗೆ ಹೋದ ಮೇಲೆ ಎಷ್ಟೋ ಶ್ರೇಷ್ಠನಾದದ್ದೆನೋ, ಎಂತಹ ಶ್ರೇಷ್ಠ ಲೋಕಕ್ಕೆ ಸೇರಿಕೊಂಡನೋ ತಿಳಿಯುತ್ತದೆ.

ಯಾರಾದರೆ ವಿದೇಶಗಳಿಗೆ ಹೋಗಿ 20 ವರ್ಷ ಚೆನ್ನಾಗಿ ಹಣವನ್ನು ಸಂಪಾದಿಸಿ, ಬ್ಯಾಂಕಿನಲ್ಲಿ ಹಾಕಿಕೊಂಡು, ಮತ್ತೆ ಸ್ವದೇಶಕ್ಕೆ ಬಂದು ಆ ಹಣವೆಲ್ಲಾ ಕೊಟ್ಟು ಭೂಮಿಗಳನ್ನು, ಒಳ್ಳೊಳ್ಳೆ ಕಟ್ಟಡಗಳನ್ನು ಕಟ್ಟಿಕೊಳ್ಳುತ್ತಾರೆ, ಎಷ್ಟೋ ಸುಖವಾಗಿ ಜೀವಿಸುತ್ತಾರೆ. ನಾನು ಇತರ ದೇಶಗಳಿಗೆ ಹೋಗಿ ಚೆನ್ನಾಗಿ ಸಂಪಾದಿಸಿಕೊಂಡು ಬಂದಿದ್ದರಿಂದಲೇ ಇಷ್ಟು ಚೆನ್ನಾಗಿ ಈಗ ಇರಬಲ್ಲವನಾಗಿದ್ದೇನೆ ಎಂದು ಭಾವಿಸುತ್ತಾರೆ.

ಹಾಗೆಯೇ ಮೇಲಿನ ಲೋಕಗಳಿಂದ ಕೆಳಗಿನ ಲೋಕವಾದಂತಹ ಈ ಭೂಮಿಗೆ ಬಂದು ಜ್ಞಾನವನ್ನು ಸಂಪಾದಿಸಿಕೊಂಡು ಮತ್ತೇ ಆ ಮೇಲಿನ ಲೋಕಗಳಲ್ಲಿ ಉನ್ನತ ಲೋಕಕ್ಕೆ ಸೇರಿಕೊಂಡು, ನಾನು ಜ್ಞಾನವನ್ನು ಸಂಪಾದಿಸಿಕೊಂಡಿದ್ದರಿಂದಲೇ ಇಷ್ಟು ಶ್ರೇಷ್ಠ ಲೋಕಕ್ಕೆ ಸೇರಿಕೊಂಡೆನೆಂದು ಭಾವಿಸುತ್ತಾರೆ.

ಈ ವಿಷಯಗಳನ್ನೆಲ್ಲಾ ಮರಣಿಸಿದ ನಂತರ ನಡೆಯುವುದನ್ನು ಮೊದಲೇ ತಿಳಿದುಕೊಂಡರೆ **"ಎಲ್ಲಾ ಬೇರೆ, ಬೇರೆಯಲ್ಲ, ಎಲ್ಲಾ ನಾನೇ ಎಂಬ ವಿಷಯವನ್ನು ತಿಳಿದುಕೊಳ್ಳುತ್ತಾರೆ"**. ಈ ತಿಳುವಳಿಕೆಯಿದ್ದರೆ ಎಲ್ಲರ ಕಡೆಗೆ ಈರ್ಷ್ಯೆ, ದ್ವೇಷ, ಅಸೂಯೆ ಇರುವುದಿಲ್ಲ. ಎಲ್ಲರನ್ನೂ ಪ್ರೇಮಿಸುತ್ತಾರೆ, ಎಲ್ಲಾ ಒಂದೇ ಎಂಬಂತೆ ಜೀವಿಸುತ್ತಾರೆ. ಯಾರಾಗಲಿ ಸರಿ ಆ ಸ್ಥಾಯಿಗೆ ಬರಬೇಕು. ಎಲ್ಲಾ ಒಂದೇ ಆದಾಗ ಒಂದಾಗಿ ಜೀವಿಸಬೇಕಾಗಲಿ ಬೇರೆ ಎಂದುಕೊಂಡರೆ ಹೇಗೆ?.

ಇಲ್ಲಿ ಸ್ತ್ರೀ ಇಲ್ಲ, ಪುರುಷನಿಲ್ಲ, ಆ ಕುಲವಿಲ್ಲ, ಈ ಕುಲವಿಲ್ಲ, ಎಲ್ಲರೂ ಅನುಭವಗಳನ್ನು ಹೊಂದುವುದಕ್ಕಾಗಿ ತೆಗೆದುಕೊಂಡ ಜನ್ಮಗಳೇ ಹೊರತು ಇನ್ನೇನು ಅಲ್ಲ. ಇದನ್ನು ಅರ್ಥ ಮಾಡಿಕೊಳ್ಳಿ, ಮರುಜನ್ಮ ಬರುವುದರೊಳಗೆ ಎಲ್ಲಾ ಬದಲಾಗಿ ಬಿಡುತ್ತವೆ.

ಪತ್ರೀಜಿಯವರು ಒಂದು ಬಾರಿ ಅಂದಿದ್ದರು, ನೀನು ಹಿಂದೂವಾಗಿ ಭಾರತ ದೇಶದಲ್ಲಿ ಹುಟ್ಟಿ, ಮುಸ್ಲಿಮರನ್ನು ದ್ವೇಷಿಸಿದರೆ, ಪಾಕಿಸ್ತಾನದವರನ್ನು ದ್ವೇಷಿಸಿದರೆ, ಮರು ಜನ್ಮದಲ್ಲಿ ಮತ್ತೆ ಪಾಕಿಸ್ತಾನದಲ್ಲಿಯೇ ಮುಸ್ಲಿಂನಾಗಿಯೇ ಹುಟ್ಟುವೆ. ಯಾವ ಮುಸ್ಲಿಂನನ್ನು

ನೀನು ದ್ವೇಷಿಸಿದೆಯೋ ಆ ಮುಸ್ಲಿಂನಾಗಿಯೇ ಹುಟ್ಟಬೇಕಾಗಿ ಬರುತ್ತದೆ ಎಂದರು.

ಇಲ್ಲಿ ಗಮನಿಸಿದರೆ ಮುಸ್ಲಿಮನಾಗಿ ಮತ್ತೇ ನೀನೇ ಮತ್ತೆ ಹಿಂದೂಗಳನ್ನು ದ್ವೇಷಿಸುತ್ತೀಯ. ಯಾವ ಹಿಂದೂವಾಗಿ ನೀನು ಹಿಂದೂಗಳನ್ನು ಪ್ರೇಮಿಸಿದೆಯೋ ಮತ್ತೆ ಆ ಹಿಂದೂಗಳನ್ನೇ ದ್ವೇಷಿಸುವೆ. ಇದು ಬಹಳ ವಿಚಿತ್ರವಾಗಿರುತ್ತದೆ. ಆದ್ದರಿಂದ ಮರಣಿಸಿದ ನಂತರ ಏನು ನಡೆಯುತ್ತದೋ ತಿಳಿದುಕೊಂಡರೆ ಅವರ ವರ್ತನೆ ಎಷ್ಟೋ ಬದಲಾಗಿಬಿಡುತ್ತದೆ. ಎಲ್ಲಾ ಒಂದೇ! ಎಲ್ಲಾ ನಾನೇ ಎಂದು ತಿಳಿಯುತ್ತದೆ

******

## ಮರಣದ ನಂತರ ನಡೆಯುವುದನ್ನು ತಿಳಿದುಕೊಂಡರೆ? 'ಈ ಜೀವನ ಒಂದು ಕನಸಿನಂತಾದ್ದು' ಎಂದು ತಿಳಿಯುತ್ತದೆ.

ಯಾರೇ ಆಗಲಿ ಪ್ರಸ್ತುತ ಜೀವನ ನಿಜವೆಂದುಕೊಳ್ಳುತ್ತಾರೆ. ಆದರೆ ಯಾವಾಗಾದರೆ ಮರಣಿಸುವ ಮೊದಲೇ ಮರಣಿಸುತ್ತಾರೋ, ಆ 60 ವರ್ಷಗಳು, ಇಲ್ಲಾ 70 ವರ್ಷಗಳು ಜೀವಿಸಿದ ಜೀವನ ಒಂದು ಕನಸು ಎಂದು ಅರ್ಥವಾಗುತ್ತದೆ. ಅಲ್ಲಿಯವರೆಗೆ ನಾನು ಇಷ್ಟು ಸಂಪಾದಿಸಿದೆನು, ನನಗೆ ಹೆಂಡತಿ ಇದ್ದಾಳೆ, ಮಕ್ಕಳಿದ್ದಾರೆ, ಬಂಧುಗಳಿದ್ದಾರೆ ಎಂಬುವಂತವು ನಿಜವೆಂದುಕೊಳ್ಳುತ್ತಾರೆ.

ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡಾಗ ಇಷ್ಟು ದಿನ ಅದು ನಿಜವೆಂದುಕೊಂಡೆನು, ಅವರೆಲ್ಲಾ ನನ್ನವರು ಎಂದುಕೊಂಡೆನು, ಅವರಿಗಾಗಿ ಎಷ್ಟೋ ತಪ್ಪುಗಳನ್ನು, ಪಾಪಗಳನ್ನು ಮಾಡಿದೆನು, ಎಷ್ಟೋ ಚಿಂತೆ ಮಾಡಿದೆನು, ಇದೆಲ್ಲಾ ಕನಸೇ? ಎಂದು ಆಶ್ಚರ್ಯಪಡುತ್ತಾನೆ.

ಸ್ವಲ್ಪ ಆಲೋಚಿಸಿರಿ ! ಕನಸು ಎಂದರೇನು? ಆ ಕನಸನ್ನು ಕಾಣಿಸುತ್ತಿರುವಷ್ಟು ಎಲ್ಲಾ ನಿಜವೆಂದು ಅನಿಸುತ್ತದೆ, ನಡೆಯುತ್ತಿರುವಂತೆಯೇ ಇರುತ್ತದೆ, ಎಚ್ಚರ ಆದ ಮೇಲೆ ಏನೂ ಇರುವುದಿಲ್ಲ. ಆಗ ಏನಿದು ಇದೆಲ್ಲಾ ಕನಸೇ? ಎಂದುಕೊಳ್ಳುತ್ತಾರೆ. ಕನಸಿನಲ್ಲಿ ಎಷ್ಟೋ ಇವೆ, ಈಗ ಒಂದೂ ಇರುವುದಿಲ್ಲ.

ಕನಸಿನಲ್ಲಿಯೇ ವರ್ಷಗಳು ಕಳೆದುಬಿಡುತ್ತವೆ. ಆಶ್ಚರ್ಯವಾಗುತ್ತದೆ. ಕೆಲವು ಒಳ್ಳೆಯ ಕನಸುಗಳು ಬರುತ್ತವೆ, ಅವೆಲ್ಲಾ ನಿಜವೆಂದುಕೊಳ್ಳುತ್ತಾರೆ. ಆದರೆ ಎಚ್ಚರವಾದರೆ ಅವೆಲ್ಲಾ ಹೋಗುತ್ತವೆ.

ಹಾಗೆಯೇ ಈಗ ಇರುವ ಪರಿಚಯಗಳಾಗಲಿ, ಈಗ ಇರುವಂತವಾಗಲಿ, ನಡೆಯುತ್ತಿರುವುದಾಗಲಿ, ಯಾವುದೂ ನಿಜವಲ್ಲ ಎಂಬುದು ಅರ್ಥವಾಗುತ್ತದೆ. ಏಕೆಂದರೆ ಈಗ ಇರುವ ಹೆಂಡತಿ ಕನಸಿನಲ್ಲಿ ಹೆಂಡತಿ, ಈಗಿರುವ ಗಂಡನು ಕನಸಿನಲ್ಲಿ ಗಂಡನು, ಮಗ ಕೂಡಾ ಕನಸಿನಲ್ಲಿಯ ಮಗನೇ ಎಂದು ತಿಳಿದುಕೊಂಡಾಗ ಆನಂದವಾಗಿರುತ್ತಾರೆ, ಇಲ್ಲದಿದ್ದರೆ ಅವರಿಗೆ ಏನಾದರೂ ಆದರೆ ಆತಂಕಪಡುತ್ತಾರೆ.

ರಾತ್ರಿ ಕನಸ್ಸನ್ನು ಕಾಣುತ್ತಿರುವಾಗ ನಿಜವೆಂದುಕೊಳ್ಳುತ್ತಾರೆ, ಎಚ್ಚರವಾದಾಗ ಅಂದರೆ ಕಣ್ಣು ತೆರೆದಾಗ ಕನಸೆಂಬುದು ಅರ್ಥವಾಗುತ್ತದೆ. ಆದರೆ ಹಗಲಲ್ಲಿ ನಡೆಯುವುದು ಮರಣಿಸಿದ ನಂತರ, ಇಲ್ಲವೇ ಮರಣಿಸುವ ಮೊದಲೇ ಮರಣಿಸಿದರೆ, ಇಲ್ಲ ಮೂರನೇ ಕಣ್ಣು ತೆರೆದುಕೊಂಡಾಗ ಕನಸು ಎಂದು ಅರ್ಥವಾಗುತ್ತದೆ. ಕನಸಿನಂತಹ ಈ ಜೀವನವನ್ನು ನಿಜವೆಂದು ಕೊಳ್ಳುವುದರಿಂದಲೇ ತಪ್ಪುಗಳನ್ನು ಮಾಡುತ್ತಿದ್ದಾರೆ, ಅದರ ಫಲವಾಗಿ ದುಃಖಪಡುತ್ತಿದ್ದಾರೆ.

ಬಹಳಷ್ಟು ಜನ ಎಷ್ಟೋ ಸಂಪಾದಿಸಿದ್ದೇನೆಂದುಕೊಳ್ಳುತ್ತಾರೆ. ಆದರೆ ಇದು ಕನಸಿನಲ್ಲಿ ಸಂಪಾದನೆ ಎಂದು ತಿಳಿದರೆ ಅಧರ್ಮವಾಗಿ ಸಂಪಾದಿಸರು, ಏಕೆಂದರೆ? ಬಂದಾಗ ಚೆನ್ನಾಗಿಯೇ ಇರುತ್ತದೆ, ಹೋದಾಗಲೇ ಮರೆತು ಹೋಗದಂತಹ ದುಃಖ.

ಯಾರಾದರೆ ಈ ಜೀವನವು ಕನಸಿನಂತಾದ್ದೇ ಎಂದು ಇರುವುದಲ್ಲಿಯೇ ಸಂತೃಪ್ತಿಪಟ್ಟು, ಅಗತ್ಯಗಳಿಗೆ ಪರಿಮಿತವಾಗಿ ಜೀವಿಸಿದರೆ ದುಃಖವೇ ಇರದು. ಇದೆಲ್ಲಾ ನಿಜವೆಂದುಕೊಳ್ಳುವುದರಿಂದ, ಈ ಮಮಕಾರಗಳಿಂದ ದುಃಖವು ಬರುತ್ತದೆ. ಯಾವಾಗಲೂ ನಾನು ಕನಸು ಕಾಣುತ್ತಿದ್ದೇನೆ, ಇದೆಲ್ಲಾ ಕನಸೇ, ನಿಜವಲ್ಲ ಎಂಬ ಭಾವದಿಂದ ಜೀವಿಸಿದರೆ, ಎಷ್ಟೋ ರಿಲಾಕ್ಸ್ ಆಗಿ ಬಿಡುತ್ತೀರಿ.

ಸಹಜವಾಗಿ ಮರಣಿಸಿದ ಮರುಕ್ಷಣ ಸಹಾಯಕರು ಬಂದು ಹೋಗೋಣ ನಡಿ ಎನ್ನುತ್ತಾರೆ. ಆಗ ನನ್ನ ಕುಟುಂಬವನ್ನು, ನನ್ನ ಸಂಪತ್ತುಗಳನ್ನೆಲ್ಲ ಬಿಡಬೇಕೇ? ಎನ್ನುತ್ತಾರೆ. ಅವರೊಂದಿಗೆ ನಿನಗೇನು ಸಂಬಂಧವಿಲ್ಲ, ಬಾ ಎನ್ನುತ್ತಾರೆ. ಅವರು ಮಮಕಾರದಿಂದ ಹೆಂಡತಿಯನ್ನು, ಮಕ್ಕಳನ್ನು ಬಿಡಲಾಗದೆ ನಾನು ಬರುವುದಿಲ್ಲ ಎನ್ನುತ್ತಾರೆ. ಆಗ ಆ ಸಹಾಯಕರು ಅವರಿಗೆ ಇನ್ನೂ ಅನುಭವ ಬಂದಿಲ್ಲ, ಇದೆಲ್ಲಾ ಅವರು ನಿಜವೆಂದು ಕೊಳ್ಳುತ್ತಿದ್ದಾರೆ ಎಂದು ಹೇಳಿ ಸರಿ, ಬಿಡಪ್ಪ, ಆ ಭ್ರಮೆಯಲ್ಲಿಯೇ ಇರು ನಾವು ಹೋಗಿ ಬಿಡುತ್ತೇವೆ ಎಂದು ಹೋಗಿ ಬಿಡುತ್ತಾರೆ.

ಆದರೆ ಇದೆಲ್ಲಾ ಕನಸು ಎಂದು ಅರ್ಥ ಮಾಡಿಕೊಂಡು ಹೋಗಿ ಬಿಟ್ಟರೆ ಸಮಸ್ಯೆಯೇ ಇರದು. ಹೋಗದಂತೆ ಅಲ್ಲಿಯೇ ಇದ್ದು ಬಿಟ್ಟರೆ ಪ್ರೇತಾತ್ಮ ಆಗಿ ಬಿಡುತ್ತೀರಿ. ಮನೆಗೆ ಹೋಗಿ ಹೆಂಡತಿಯನ್ನು, ಮಕ್ಕಳನ್ನು, ಸ್ನೇಹಿತರನ್ನು ಮಾತನಾಡಿಸುತ್ತೀರಿ, ಆದರೆ ಅವರು ಹಿಡಿಸಿಕೊಳ್ಳುವುದಿಲ್ಲ. ಹಾಗೇ ಕೆಲವು ದಿನಗಳಿಗೆ ಯಾವುದರೊಂದಿಗೂ ನನಗೆ ಸಂಬಂಧವಿಲ್ಲವೆಂದು ತಿಳಿಯುತ್ತದೆ. ಆಗ ಅರ್ಥವಾಗುತ್ತದೆ, ಇದೆಲ್ಲಾ ಕನಸಿನಂತೇ ಇದೆ ಎಂದು.

ಈ ಜೀವನ ಕನಸಿನಂತಾದ್ದು, ಎಂದು ಜೀವಿಸಿರುವಾಗಲೇ ತಿಳಿದುಕೊಂಡವನು ಜ್ಞಾನವನ್ನು ಸಂಪಾದಿಸುತ್ತಾನೆ, ಜ್ಞಾನದ ಮೇಲೆ ದೃಷ್ಟಿಯಿಡುತ್ತಾನೆ. ಕನಸಿನಂತಾದ್ದೇ ಅಂದರೆ ಇದೆಲ್ಲಾ ಇರುವಂತೆಯೇ ಇರುತ್ತದೆ, ಆದರೆ ಯಾವುದೂ ಇರುವುದಿಲ್ಲ. ಹಾಗೆಂದು ಮಕ್ಕಳು ಹೆಂಡತಿಯನ್ನು ಬಿಟ್ಟುಬಿಡೆಂದು ಅಲ್ಲ. ಜವಾಬ್ದಾರಿ ಜವಾಬ್ದಾರಿಯೇ, ಆದರೆ ಇದು ಒಂದು ಕನಸಿನಂತಾದ್ದೇ ಎಂದು ಮರೆತು ಹೋಗಬಾರದು. ಯಾವುದೂ ಶಾಶ್ವತವಲ್ಲ ಎಂದು ತಿಳಿದುಕೊಳ್ಳಬೇಕು.

** ** **

# ಕನಸುಗಳು ಏಕೆ ಬರುತ್ತವೆ?

ಎಲ್ಲರು ಕನಸುಗಳನ್ನು ಕಾಣುತ್ತಿರುತ್ತಾರೆ. ಕೆಲವು ಕನಸುಗಳು ಆನಂದವನ್ನುಂಟು ಮಾಡುತ್ತವೆ, ಕೆಲವು ಕನಸುಗಳು ದುಃಖವನ್ನುಂಟು ಮಾಡುತ್ತವೆ, ಕೆಲವು ಕನಸುಗಳು ಭಯಭ್ರಾಂತಿಗಳನ್ನು ಗುರಿ ಮಾಡುತ್ತವೆ. ಮೂಢ ನಂಬಿಕೆಗಳಿರುವವರಿಗೆ ಕೆಲವು ಕೆಟ್ಟ ಕನಸುಗಳು ಬಂದರೆ ಅವು ಅವರಲ್ಲಿ ಎಷ್ಟೋ ಚಿಂತೆಯನ್ನುಂಟು ಮಾಡುತ್ತವೆ. ಏನೋ ಕನಸು ಬಿದ್ದಿತು, ಏನು ನಡೆಯುತ್ತದೋ? ಎಂದು ಕೊಳ್ಳುತ್ತಾರೆ. ಒಂದು ಹಂದಿ ಕನಸಿನಲ್ಲಿ ಬಂದರೆ ಅಶುಭವೆಂದು, ದೇವರು ಕಾಣಿಸಿದರೆ ಒಳ್ಳೆಯ ಸೂಚನೆ ಎಂದುಕೊಳ್ಳುತ್ತಾರೆ.

ಆದ್ದರಿಂದ ನಿಜಕ್ಕೂ ಈ ಕನಸುಗಳೆಂದರೇನು? ಅವು ಏಕೆ ಬರುತ್ತವೆ? ಎಂಬುದನ್ನು ಸ್ವಲ್ಪ ಅರಿವಿಗೆ ತಂದುಕೊಳ್ಳೋಣ. ಜಾಗ್ರತಾವಸ್ಥೆಯಲ್ಲಿ ಶರೀರ ಮತ್ತು ಇಂದ್ರಿಯಗಳು ಕೆಲಸ ಮಾಡುತ್ತವೆ, ಸ್ವಪ್ನಾವಸ್ಥೆಯಲ್ಲಿ ಶರೀರ, ಇಂದ್ರಿಯಗಳು ಕೆಲಸ ಮಾಡವು. ಮನಸ್ಸು ಕೆಲಸ ಮಾಡುತ್ತಾ ಇರುತ್ತದೆ. ಜಾಗೃತ ಅವಸ್ಥೆಯಲ್ಲಿ ನಡೆದ ಸಂಘಟನೆಗಳನ್ನು ನಿದ್ದೆ ಮಾಡುತ್ತಿರುವಾಗ ಮನಸ್ಸು ಪುನಃಸ್ಮರಣೆ ಮಾಡಿಕೊಳ್ಳುತ್ತಾ ಇರುತ್ತದೆ, ಅಂದರೆ ಕಲ್ಪನೆಗಳನ್ನು ಮಾಡುತ್ತಾ ಇರುತ್ತದೆ, ಅವುಗಳನ್ನೇ ಕನಸುಗಳು ಎನ್ನುತ್ತಾರೆ.

ಕನಸುಗಳನ್ನು ಕಾಣುವುದು ಎಂಬುದು ಪ್ರಕೃತಿಯಲ್ಲಿರುವಂತ ಏರ್ಪಾಟು ಏಕೆ? ಮತ್ತೆ ಪ್ರಕೃತಿ ಇಂತಹ ಏಪಾಡು ಮಾಡಿದೆ ಎಂದರೆ? ಇದಕ್ಕೆ ಕಾರಣವಿಲ್ಲದೇ ಇಲ್ಲ. ಪ್ರಕೃತಿ ಏನನ್ನು ಏರ್ಪಾಟು ಮಾಡಿದರೂ ನಮ್ಮ ಒಳ್ಳೆಯದಕ್ಕೇ, ನಮ್ಮ ಲಾಭಕ್ಕೆ. ಪ್ರತೀಜಿಯವರು ಪ್ರಕೃತಿ ನಮಗೆ ಕನಸುಗಳ ಮೂಲಕ ಎಷ್ಟೋ ಉಪಕಾರವನ್ನು ಮಾಡುತ್ತದೆ ಎಂದಿದ್ದಾರೆ. ಪ್ರಕೃತಿ ನಮಗೆ ಮುಖ್ಯವಾಗಿ ಕನಸುಗಳ ಮೂಲಕ ಎರಡು ಜೀವನ ಪಾಠಗಳನ್ನು ಬೋಧಿಸುತ್ತದೆ ಎಂದಿದ್ದಾರೆ.

1. ಹಸಿ ಸತ್ಯ 2. ಪರಮ ಸತ್ಯ

**1) ಹಸಿ ಸತ್ಯ:** ಅಂದರೆ "ನಡೆಯುತ್ತಿರುವ ಜೀವನವೆಲ್ಲಾ ಕನಸಿನಂತಾದ್ದೇ" ಎಂದು ನಮಗೆ ತಿಳಿಯಪಡಿಸುತ್ತದೆ. ಇದೆಲ್ಲಾ ನಿಜವೆಂದುಕೊಂಡವರು ಎಷ್ಟೋ ದುಃಖಪಡುತ್ತಿರುತ್ತಾರೆ, ಎಷ್ಟೋ ಸಂತೋಷಪಡುತ್ತಾ ಇರುತ್ತಾರೆ.

ನೋಡಿರಿ, ಮಕ್ಕಳು ಚೆನ್ನಾಗಿ ಓದಿದರೆ ಉಬ್ಬಿ ಹೋಗುತ್ತೇವೆ, ಸರಿಯಾಗಿ ಓದದೇ ಅಂಕಗಳು ಬರದಿದ್ದರೆ ಕುಗ್ಗಿ ಹೋಗುತ್ತೇವೆ. ಅವನು ಫೇಲ್ ಆದರೆ ಇವರೇ ಫೇಲ್ ಆದಂತೆ ಫೀಲ್ ಆಗುತ್ತಾರೆ, ಅವನು ಕನಸಿನಲ್ಲಿ ಫೇಲ್ ಆಗಿದ್ದಾನೆ, ಅದು ಕನಸೆಂದು ಅರ್ಥ ಮಾಡಿಕೊಂಡಾಗ ಓಹೋ, ಅವನು ಏನೋ ಪಾಠವನ್ನು ಕಲಿತುಕೊಳ್ಳುವುದಕ್ಕೆ ಬಂದಿದ್ದಾನೆ, ಕಲಿತು ಕೊಳ್ಳುತ್ತಿದ್ದಾನೆ ಎಂದುಕೊಳ್ಳುತ್ತಾರೆ.

ಕೆಲವರು ಮಕ್ಕಳಿಗೆ ತಂದೆಯು ಚೆನ್ನಾಗಿ ಸಂಪಾದಿಸಿಕೊಡುತ್ತಾನೆ, ಅವರು ದೊಡ್ಡವರಾದ ಮೇಲೆ ಅದರಲ್ಲಿ ಒಬ್ಬನು ಆ ಸಂಪತ್ತನ್ನು ಇನ್ನೂ ಚೆನ್ನಾಗಿ ವೃದ್ಧಿ ಮಾಡಿ ಚೆನ್ನಾಗಿ ಹೆಚ್ಚಿಸಿ ಕೊಳ್ಳುತ್ತಾನೆ. ಇನ್ನೊಬ್ಬನು ನಷ್ಟ ಹೊಂದಿ, ಇರುವುದನ್ನು ಕೂಡಾ ಕಳೆದುಕೊಳ್ಳುತ್ತಾನೆ. ತಂದೆ–ತಾಯಿಗಳು ಕಳೆಯುವವನ ಕುರಿತು ಹೇಳುತ್ತಾ... ಅವನ ಜೀವನ ಹೀಗೆ ಆಗಿ ಹೋಯಿತೆಂದು ನೋವು ಪಡುತ್ತಾ ಇರುತ್ತಾರೆ.

ಇದು ಒಂದು ಕನಸಿನಲ್ಲಿ ನಡೆಯುತ್ತಿರುವುದೇ ಹೊರತು ವಾಸ್ತವವಲ್ಲ ಎಂಬ ವಿಷಯ ತಿಳಿಯದು, ಇವೆಲ್ಲವನ್ನು ತಿಳಿದುಕೊಳ್ಳುವುದೇ ಜ್ಞಾನ. ಜ್ಞಾನವನ್ನು ಸಂಪಾದಿಸಿಕೊಳ್ಳುವುದರಿಂದ ದುಃಖಪಡರು, ಸಂಭ್ರಮಪಡರು, ಅವುಗಳ ಮೂಲಕ ಪಾಠವನ್ನು ಕಲಿತುಕೊಳ್ಳುತ್ತಾರೆ.

ಕೆಲವರು ಸುಲಭವಾಗಿ ಸಂಪಾದಿಸೋಣವೆಂದು ಹಣವನ್ನು ಬಿಟ್ ಕಾಯಿನ್ಸ್‌ನಲ್ಲಿ, ಷೇರ್‌ಗಳಲ್ಲಿಡುತ್ತಾರೆ. ಹಣವನ್ನು ಕಳೆದುಕೊಂಡು ಸಾಲ ಮಾಡುತ್ತಾರೆ, ಸಾಲವನ್ನು ತೀರಿಸಲಾರದೆ ಆಸ್ತಿಗಳನ್ನು ಮಾರುತ್ತಾರೆ. ಕೆಲವರು ಸಾಲ ಹುಟ್ಟುವವರೆಗೂ ಮಾಡುತ್ತಲೇ ಇರುತ್ತಾರೆ, ಬಂಗಾರವನ್ನು ಮಾರುತ್ತಾರೆ, ಮನೆಯಲಿ ಇನ್ನೇನಾದರೂ ಬೆಲೆ ಬಾಳುವಂತವು ಇದ್ದರೆ ಎಲ್ಲಾ ಮಾರಿ ಬಿಡುತ್ತಾರೆ.

ಕೆಲವರು ದುರಾಭ್ಯಾಸಗಳಿಂದ ಕುಡಿತ, ವ್ಯಭಿಚಾರ, ಜೂಜಾಟಗಳಲ್ಲಿ ಕಳೆದುಕೊಂಡು ಆಸ್ತಿಗಳನ್ನು ಮಾರಿಕೊಳ್ಳುತ್ತಾರೆ. ನಿಜವಾಗಿ ಸುಮ್ಮನೆ ಏಕೆ ಹೋಗುತ್ತವೆ? ತಂದೆ ತಾಯಿ ಕೋಟಿಗಟ್ಟಲೆ ಆಸ್ತಿಗಳನ್ನು ಕೊಟ್ಟರೆ ಆಸ್ತಿಗಳನ್ನು ಮಾರಿಕೊಳ್ಳಬೇಕಾದ ಅಗತ್ಯವೇಕೆ ಬಂದಿತು? ಅಂದರೆ ಅವರು ಮಾಡುವ ಕೆಲಸಗಳಿಂದಲೇ ಈ ನಡುವೆ ಚುನಾವಣೆಗಳಲ್ಲಿ ಕೋಟಿಗಳನ್ನು ಪಂದ್ಯವಿಟ್ಟು, ಬಿಕಾರಿಗಳಾಗಿ ಆಸ್ತಿಗಳನ್ನು ಮಾರಿ ಕೊಂಡವರಿದ್ದಾರೆ.

ಹಾಗೆ ಆಸ್ತಿಗಳನ್ನು ಕಳೆದುಕೊಂಡರೂ, ಎಲ್ಲಾ ಹೋಗಿ ಸಾಲಗಳ ಪಾಲಾಗಿ ತಿಂಡಿ ಇಲ್ಲದೇ ಮರಣಿಸುತ್ತಾರಾ? ಅಂದರೆ, ಮರಣಿಸರು, ತೊಂದರೆಗಳು ಇದ್ದರೆ ಇರಬಹುದಾಗಲಿ ತಿಂಡಿಗೆ ಕೊರತೆ ಇರದು. ಅಂದರೆ ಪ್ರಕೃತಿ ಪಾಠಗಳನ್ನು ಕಲಿಸುತ್ತದೆಯಾಗಲಿ, ತಿಂಡಿ ಇಲ್ಲದ ಪರಿಸ್ಥಿತಿಯನ್ನುಂಟು ಮಾಡುವುದಿಲ್ಲ. ಯಾವುದೋ ರೀತಿಯಲ್ಲಿ ಅವರಿಗೆ ಅಗತ್ಯಗಳು ಪೂರೈಕೆಯಾಗುತ್ತಾ ಇರುತ್ತವೆ. ಜನರೆಂದುಕೊಳ್ಳುತ್ತಾರೆ ರಾಜನಂತೆ ಬದುಕಿದವನು, ಎಂತಹ ದುರ್ಬರ ಪರಿಸ್ಥತಿ ಬಂದಿತೆಂದು. ಅವನಿಗೆ ಆ ಪರಿಸ್ಥಿತಿ ಏಕೆ ಬಂದಿತು? ಪಾಠವನ್ನು ಕಲಿಯುವುದಕ್ಕೆ. ಅದಕ್ಕೂ ಮೊದಲು ಯಾರಿಗೋ ಅನ್ಯಾಯ ಮಾಡಿದ್ದಾನೆ, ಇವನು ಮಾಡಿದ ಕೆಲಸದಿಂದ ಅವನು ಎಷ್ಟೋ ಕಷ್ಟಪಟ್ಟನು. ಮತ್ತೆ ತಾನು ಅನುಭವಿಸಬೇಕಲ್ಲಾ? ಅದಕ್ಕೆ ಈಗ ಅನುಭವಿಸುತ್ತಿದ್ದಾನೆ. ಇನ್ನು ನಾನು ಹೀಗೆ ಯಾರಿಗೂ ಅನ್ಯಾಯ ಮಾಡಕೂಡದು ಎಂದು ಪಾಠವನ್ನು ಕಲಿತುಕೊಳ್ಳುತ್ತಾನೆ. ಆದಕಾರಣ ಎಷ್ಟು ಕಷ್ಟ ಬಂದರೂ ಅದು ಆತ್ಮದ ಬೆಳವಣಿಗೆಗೆ ಎಷ್ಟೋ ಉಪಯೋಗವಾಗುತ್ತದೆ ಎಂದು ತಿಳಿದುಕೊಳ್ಳಬೇಕು.

ನಿಮಗೆ ಒಂದು ಕನಸು ಬಂದಿತು, ಆ ಕನಸಿನಲ್ಲಿ 3 ವರ್ಷ, 6 ವರ್ಷಗಳೋ ಜೈಲು ಶಿಕ್ಷೆಯಾಯಿತು, ಅದು ಅನುಭವಿಸುತ್ತಿರುವಾಗ ಜೈಲಿನಲ್ಲಿ ಏನೋ ಜಗಳವಾಯಿತು, ಯಾರೋ ರೌಡಿ ಷೀಟರ್ ನಿನ್ನನ್ನು ಒದೆಯುತ್ತಿದ್ದಾನೆ, ಹಾಗೆಯೇ ಪೊಲೀಸರು ಕೂಡಾ ನೋವು ಕೊಡುತ್ತಿದ್ದಾರೆ. ಏನೀ ನರಕ, ನನ್ನ ಜೀವನ ಹೀಗಾಗಿ ಹೋಯಿತಲ್ಲಾ ಎಂದು ಎಷ್ಟೋ ಬಾಧೆ ಪಡುತ್ತಾ ಇದ್ದರೆ ಈ ಒಳಗೆ ಎಚ್ಚರವಾಗುತ್ತದೆ. ತಕ್ಷಣ ಏನೆಂದು ಕೊಳ್ಳುತ್ತೀರಿ? ಅರೇ, ಇದೆಲ್ಲಾ ಕನಸೇ? ನನಗೇನು ಶಿಕ್ಷೆ ಬೀಳಲಿಲ್ಲವೇ? ನಾನೇನು ಕಷ್ಟಗಳನ್ನು ಅನುಭವಿಸಲಿಲ್ಲವೇ? ಎಂದು ಅಂದುಕೊಳ್ಳುತ್ತೀರಿ.

ಪ್ರಸ್ತುತ ಜೀವನದಲ್ಲಿ ನೀವು ಪಡುವ ಬಾಧೆಗಳು, ಕಷ್ಟಗಳು ಇವೆಲ್ಲಾ ಕೂಡಾ ಕನಸಿಂತೆಯೇ ಎಂದು ತಿಳಿಯಪಡಿಸುವುದಕ್ಕೆ ಪ್ರಕೃತಿ ಈ ಕನಸುಗಳನ್ನು ಏರ್ಪಾಟು ಮಾಡಿದೆ. ಅದಕ್ಕೆ **“ನಡೆಯುತ್ತಿರುವುದೆಲ್ಲಾ ಕನಸಿನಂತಾದ್ದೇ”** ಎಂದು ತಿಳಿದುಕೊಳ್ಳಬೇಕು. ಅದಕ್ಕೆ ಕಷ್ಟಗಳಿಗೆ ಕುಗ್ಗಬಾರದು, ಭೋಗಗಳಿಗೆ ಉಬ್ಬಿ ಹೋಗಬಾರದು. ಅದೂ ಕನಸೇ, ಇದೂ ಕನಸೇ!.

ಪ್ರಕೃತಿ ಬೋಧಿಸುವ ಹಸಿ ಸತ್ಯವಿದು. ಇದು ಯಾವಾಗ ತಿಳಿಯುತ್ತದೆ ಎಂದರೆ ಮರಣಿಸುವ ಮೊದಲೇ ಮರಣಿಸಿದವರಿಗೆ ತಿಳಿಯುತ್ತದೆ, ಆ ಜ್ಞಾನವುಳ್ಳವರಿಗೆ ತಿಳಿಯುತ್ತದೆ. ಇಲ್ಲದಿದ್ದರೆ ಸಹಜವಾಗಿ ಮರಣಿಸಿದ ನಂತರ ತಿಳಿಯುತ್ತವೆ, ಇಲ್ಲದಿದ್ದರೆ ಮೂರನೇ ಕಣ್ಣು ಸಂಪಾದಿಸಿಕೊಂಡವರಿಗೆ ತಿಳಿಯುತ್ತದೆ.

ಜೀವನದಲ್ಲಿ ಎಷ್ಟೋ ನಡೆಯುತ್ತಿರುತ್ತವೆ, ಆದರೆ ಎಲ್ಲಾ ಕನಸಿನಲ್ಲಿಯವೇ. ಇದು ಅರ್ಥವಾದರೆ ಏನು ನಡೆದರೂ ನೀವು ಬಾಧೆಪಡುವುದಿಲ್ಲ, ದುಃಖಪಡುವುದಿಲ್ಲ. ಕೆಲವರು ಏನೆಂದುಕೊಳ್ಳುತ್ತಾರೆಂದರೆ? ಇದು ಕನಸೆಂದು ಅಂದುಕೋ ಎನ್ನುತ್ತಿದ್ದೀರಿ, ಚೆನ್ನಾಗಿಯೇ ಇದೆ, ಆದರೆ ಈಗ ಆ ಕಷ್ಟಗಳನ್ನು ಭರಿಸಲಾರದೆ ಹೋಗುತ್ತಿದ್ದೇನೆಂದು ಹೇಳುತ್ತೀರಿ. ನೋಡಿರಿ, ಕನಸುಕಂಡಾಗ ಕಷ್ಟಗಳು ಬಂದರೂ ಕೂಡಾ ನೀವು ಭರಿಸಲಾರಿರಿ, ನಿಜವಾಗಿಯೂ ಅನುಭವಿಸುತ್ತಿರುವಂತೆ ಫೀಲ್ ಆಗುತ್ತಾ ಇರುತ್ತೀರಿ. ಕಣ್ಣು ತೆರೆದ ಮೇಲೆ ಅಂದುಕೊಳ್ಳುತ್ತೀರಿ. ಏನಿದು? ಇದು ಎಲ್ಲಾ ಸುಮ್ಮನೆನಾ? ನಾನೇನು ನೋವು ಪಡಲಿಲ್ಲವೇ? ಏನೂ ಅನುಭವಿಸಲಿಲ್ಲವೇ? ನನಗೇನು ಕಷ್ಟಗಳು ಬರಲಿಲ್ಲವೇ? ಎಂದು.

ಹಾಗೆಯೇ ಜೀವನದಲ್ಲಿ ಕಷ್ಟಗಳು ಬಂದರೂ ಮರಣಿಸಿದ ನಂತರ ತಿಳಿಯುತ್ತದೆ, ಇವೆಲ್ಲಾ ಸುಮ್ಮನೇ ಎಂದು. ಒಬ್ಬನಿಗೆ ಜೀವಿತಾವಧಿ ಶಿಕ್ಷೆ ಬಿದ್ದಿದೆ, ಜೀವಿತಾವಧಿ ಖೈದಿ ಎಂದರೆ 18 ವರ್ಷ ಶಿಕ್ಷೆ ಅನುಭವಿಸಬೇಕೆಂದು ಹೇಳುತ್ತಾರೆ, ಅವನು ಎರಡು ವರ್ಷಕ್ಕೆ ಮರಣಿಸಿದನು. ಉಳಿದ 16 ವರ್ಷಗಳು ರದ್ದಾದಂತೆಯೇ ಅಲ್ಲವೇ? ಕೋಟಿ ರೂಪಾಯಿಗಳು ಸಾಲ ಮಾಡಿ ಸತ್ತು ಹೋದನು, ಇನ್ನೇನು ತೀರಿಸುತ್ತಾನೆ, ತೀರಿಸಬೇಕಾದ ಕೆಲಸವಿಲ್ಲ. ಕನಸಿನಲ್ಲಿ ಇನ್ನೇನು ತೀರಿಸುತ್ತಾನೆ? ಆ ಶಿಕ್ಷೆಗಳೂ ಇರುವುದಿಲ್ಲ, ಏನೂ ಇರುವುದಿಲ್ಲ.

ಕನಸು ಕಾಣುತ್ತಿರುವಾಗ ಎಚ್ಚರವಾದಾಗ ಯಾವುದು ಹೇಗೆ ಇರುವುದಿಲ್ಲವೋ, ಈ ಹಗಲು ಕನಸಿನಲ್ಲಿ ಕೂಡಾ ಮರಣಿಸಿದ ನಂತರ ನಡೆಯುವುದು ಯಾವುದು ಇರುವುದಿಲ್ಲ. ಇದು ಒಂದು ಕನಸೆಂದು ನಿಮಗೆ ಅರಿವಿಗೆ ಬರುತ್ತದೆ.

ಅದಕ್ಕೆ ಇದು ತಿಳಿದುಕೊಂಡ ಜ್ಞಾನಿ ಕಷ್ಟಗಳಿಗೆ ಕುಗ್ಗಿ ಹೋಗನು, ಭೋಗಗಳಿಗೆ ಉಬ್ಬಿಹೋಗನು. ಹಾಗೇ ಪ್ರಕೃತಿ ಮಾಡಿದ ಏರ್ಪಾಡಿನಲ್ಲಿ ತಿಳಿದುಕೊಳ್ಳಬೇಕಾದವು ಎಷ್ಟೋ ಇವೆ. ಆ ಪೂರ್ಣಾತ್ಮ, ಮೂಲಾತ್ಮ ನಮ್ಮನ್ನು ಸೃಷ್ಟಿಸಿ ಗಾಳಿಗೆ ಬಿಟ್ಟಿಲ್ಲ. ನಾವು ಕಲಿತುಕೊಳ್ಳಬೇಕಾದಂತ ಎಷ್ಟೋ ವಿಷಯಗಳನ್ನು, ಎಷ್ಟೋ ರೀತಿಯಲ್ಲಿ ಪ್ರಕೃತಿಯ ಮೂಲಕ, ಕನಸುಗಳ ಮೂಲಕ, ಸಂಘಟನೆಗಳ ಮೂಲಕ, ಗುರುಗಳ ಮೂಲಕ, ಪುಸ್ತಕಗಳ ಮೂಲಕ ಸಂದೇಶಗಳ ಮೂಲಕ ಎಲ್ಲವನ್ನು ತಿಳಿಯಪಡಿಸುತ್ತದೆ.

ಆದರೆ ಇದೆಲ್ಲಾ ನಿಜವೆಂದುಕೊಳ್ಳುತ್ತಾ, ಎಷ್ಟು ಹೊತ್ತು ಭೋಗಗಳನ್ನು, ಸುಖಗಳನ್ನು ಅನುಭವಿಸಬೇಕೆಂದುಕೊಳ್ಳುತ್ತಾ, ಮಾಡಬಾರದ ಕೆಲಸಗಳನ್ನು ಮಾಡಿ ದುಃಖಕ್ಕೆ ಒಳಗಾಗುತ್ತಿದ್ದಾರೆ. ಇದು ನಿಜವಲ್ಲ ಎಂದು ತಿಳಿದಾಗ ಪಾಪಗಳನ್ನು ಮಾಡುವುದಿಲ್ಲ, ಇದೆಲ್ಲಾ ಸುಮ್ಮನೆ ಕನಸು ಎಂದು ತಿಳಿದಾಗ ಅವನು ಎಷ್ಟೋ ಶ್ರೇಷ್ಠನು, ನಾನು ಸಂಪಾದಿಸಲಾರದೆ ಹೋದೆನು, ಅವನು ಕಟ್ಟಡ ಕಟ್ಟಿದ, ನಾನು ಮಹಡಿ ಕಟ್ಟಲಾರದೆ ಹೋದೆನು ಎಂದುಕೊಂಡು ನೋವು ಪಡರು, ಅದೂ ಕನಸೇ–ಇದು ಕನಸೇ ಎಂದು ತಿಳಿದುಕೊಳ್ಳುತ್ತಾರೆ.

**2. ಪರಮಸತ್ಯ:** ಉಪನಿಷತ್ತಿನಲ್ಲಿ "ಯದೃಶ್ಯಂ ತನ್ನಸ್ಯಂ"ಎಂದು ಹೇಳಲಾಗಿದೆ. ಅಂದರೆ ಯಾವುದು ಕಾಣಿಸುತ್ತದೋ ಅದೆಲ್ಲಾ ನಶಿಸುವಂತಾದ್ದೇ ಎಂಬ ವಿಷಯವನ್ನು ಬೋಧಿಸುತ್ತದೆ. ನೋಡಿರಿ ಕನಸಿನಲ್ಲಿ ಎಷ್ಟೋ ಕಾಣಿಸುತ್ತವೆ, ಕಣ್ಣು ತೆಗೆದೊಡನೆ ಒಂದೂ ಇರದು. ಈ ಸೃಷ್ಟಿಯಲ್ಲಿನ ಈ ರಹಸ್ಯವನ್ನು ಕನಸುಗಳ ಮೂಲಕ ಪ್ರಕೃತಿ ನಮಗೆ ಬೋಧಿಸುತ್ತದೆ.

ಯಾವುದು ಕಾಣಿಸುತ್ತದೋ ಅದೆಲ್ಲಾ ನಶಿಸಿಹೋಗುವಂತಾದ್ದೇ, ಯಾವುದೂ ಶಾಶ್ವತವಲ್ಲ. 84 ಲಕ್ಷಗಳ ರೀತಿಯ ಜೀವರಾಶಿಗಳೆಲ್ಲವೂ ಹುಟ್ಟುತ್ತಿವೆ, ಬೆಳೆಯುತ್ತಿವೆ, ಕೊನೆಗೆ ನಶಿಸಿಹೋಗುತ್ತವೆ. ಆ 84 ಲಕ್ಷಗಳ ರೀತಿಯ ಜೀವರಾಶಿಗಳಲ್ಲಿ ಮಾನವ ಜಾತಿ ಕೂಡಾ ಇದೆ. ಆದ್ದರಿಂದ ನಿಮ್ಮ ತಂದೆಯವರನ್ನು ನಿಮ್ಮ ತಾತಂದಿರನ್ನು, ಮುತ್ತಾತರನ್ನು ನೋಡಿದರೆ ಇದು ನಿಮಗೆ ಅರ್ಥವಾಗುತ್ತದೆ. ಯಾರಿದ್ದಾರೆ? ಎಲ್ಲರೂ ಅದೃಶ್ಯವಾಗಿ ಹೋದರು. ಒಂದು ಕಾಲದಲ್ಲಿ ಕಾಣಿಸಿದರು, ಈಗ ಇಲ್ಲ.

ಹಾಗೆ ಜೀವಿಸುತ್ತಾ ಇರುವಾಗಲೇ ಹೆಂಡತಿಯನ್ನು ಕಳೆದುಕೊಂಡವರು, ಗಂಡನನ್ನು ಕಳೆದುಕೊಂಡವರು, ಮಕ್ಕಳನ್ನು ಕಳೆದುಕೊಂಡವರು ಎಷ್ಟು ಜನರಿಲ್ಲ? ನಿನ್ನೆಯವರೆಗೆ ಇದ್ದವರು ಈಗ ಇಲ್ಲ. ಈ ಪಾಠವನ್ನು ಪ್ರಕೃತಿ ಏಕೆ ಏಕೆ ಕಲಿಸುತ್ತಿದೆ? ಇವೆಲ್ಲಾ ಕೂಡಾ ಇರುತ್ತವೆ ಎಂಬ ಭ್ರಮೆಯಲ್ಲಿರುತ್ತಾರೆ. ಇವೆಲ್ಲಾ ಶಾಶ್ವತ, ಇವೆಲ್ಲಾ ನನ್ನವು, ನಮ್ಮವು, ನನ್ನವರು, ನಮ್ಮವರು ಎನ್ನುತ್ತಾರೆ, ಆದರೆ ಯಾವುದೂ ಇರುವುದಿಲ್ಲ.

ಕೆಲವರು ಏನು ಹೇಳುತ್ತಾರೆಂದರೆ? ಸರಿ ಇರುವುದಿಲ್ಲ, ಇರುವಷ್ಟು ಕಾಲ ಇರುತ್ತೇವಲ್ಲ? ಎನ್ನುತ್ತಾರೆ. ಇರಿ, ತಪ್ಪೇನೂ ಇಲ್ಲ, ಅನುಭವಿಸಿರಿ, ಆದರೆ ಅವುಗಳಿಗಾಗಿ ತಪ್ಪುಗಳನ್ನು, ಪಾಪಗಳನ್ನು ಮಾಡಬೇಡಿರಿ, ಅಧರ್ಮವಾಗಿ, ಸೃಷ್ಟಿ ವಿರುದ್ಧವಾಗಿ ವ್ಯವಹರಿಸಬೇಡಿ, ಆದರೆ ಲೋಕದಲ್ಲಿ ಇದು ಅರ್ಥವಾಗದೇ ಅಧರ್ಮವಾಗಿ ಸಂಪಾದಿಸುತ್ತಿದ್ದಾರೆ, ನಂತರ ಅದರ ಫಲಗಳನ್ನು ದಾರುಣವಾಗಿ ಅನುಭವಿಸುತ್ತಿದ್ದಾರೆ.

ಶಾಶ್ವತವಾಗಿ ಇರುವಂತವುಗಳಿಗೆ ಎಷ್ಟು ಕಷ್ಟಪಟ್ಟರೂ ಸರಿ, ಆದರೆ ಅದೃಶ್ಯವಾಗಿ ಹೋಗುವಂತವುಗಳ ಕುರಿತು ಏಕೆ ಅಧರ್ಮವಾಗಿ ಸಂಪಾದಿಸುವುದು? ಏಕೆ ಪಾಪಗಳ

ಮೂಟೆಯನ್ನು ಕಟ್ಟಿಕೊಳ್ಳುವುದು? ಇರುವುದರ ಕುರಿತು ಆಲೋಚಿಸಿರಿ. ನಶಿಸಿ ಹೋಗುವ ಶರೀರವನ್ನು, ಇರುವಂತವುಗಳನ್ನು ತಿಳಿದುಕೊಳ್ಳುವುದಕ್ಕೆ, ಇರುವುದನ್ನು ಹೊಂದುವುದಕ್ಕೆ ಉಪಯೋಗಿಸಿರಿ. ಮತ್ತೇ ಇರುವುದು ಯಾವುದು? ಇರುವುದು ಆತ್ಮ, ಇರುವುದೇ ಜ್ಞಾನ, ಇದನ್ನು ತಿಳಿದುಕೊಳ್ಳುವುದಕ್ಕೆ ಈ ಕನಸುಗಳು.

ಪತ್ರೀಜಿಯವರು ಸೃಷ್ಟಿಯಲ್ಲಿ ಇರುವಂತಹ ಹಸಿ ಸತ್ಯವನ್ನು, ಪರಮ ಸತ್ಯವನ್ನು ಬೋಧಿಸುವುದಕ್ಕೇ ಈ ಕನಸುಗಳು ಎಂಬವು ಏರ್ಪಾಡು ಮಾಡಲ್ಪಟ್ಟಿವೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಏಕೆಂದರೆ ಮೂರ್ಖಮಾನವರು, ಬುದ್ಧಿ ಇಲ್ಲದ ಮಾನವರು ಇದೆಲ್ಲಾ ನಿಜವೆಂದುಕೊಳ್ಳುತ್ತಾ, ಇವು ನನ್ನವು, ನನ್ನವು ಎಂದುಕೊಳ್ಳುತ್ತಾ, ಇವರೆಲ್ಲಾ ನನ್ನವರು ಎಂದುಕೊಳ್ಳುತ್ತಾ, ಅವರು ಬೇರೆ, ಇವರು ಬೇರೆ, ಆ ಪ್ರಾಣಿಗಳು ಬೇರೆ, ಆ ಕೋಳಿಗಳು ಬೇರೆ, ಆ ಮೇಕೆಗಳು ಬೇರೆ ಎಂದು ಕೊಳ್ಳುತ್ತಾ ಎಷ್ಟೋ ಮಾಡಬಾರದ ಕೆಲಸಗಳನ್ನು  ಮಾಡುತ್ತಿದ್ದಾರೆ.

ಈ ಕನಸುಗಳು ಹುಟ್ಟಿದಾಗಿನಿಂದ ಬರುತ್ತವೆ. ಆದರೆ ಈ ನಡೆಯುತ್ತಿರುವುದೆಲ್ಲಾ ಕನಸಿನಂತಾದ್ದೇ ಎಂಬ ಹಸಿ ಸತ್ಯವನ್ನು, ಏನು ಕಾಣಿಸುತ್ತದೋ, ಅದೆಲ್ಲಾ ನಶಿಸಿ ಹೋಗುವಂತಾದ್ದೇ? ಎಂಬ ಪರಮ ಸತ್ಯವನ್ನು ತಿಳಿದುಕೊಳ್ಳಲಾರದೇ ಹೋಗುತ್ತಿದ್ದಾರೆ. ಮಾನವರ ಬುದ್ಧಿ ಎಷ್ಟು ಚೆನ್ನಾಗಿ ಕೆಲಸ ಮಾಡುತ್ತದೋ ಇದನ್ನು ಆಧರಿಸಿ ಅರ್ಥ ಮಾಡಿಕೊಳ್ಳಬಹುದು. ಅದಕ್ಕೆ ಬುದ್ಧಿ ವಿಕಸನ ಮಾಡಿಕೊಳ್ಳಬೇಕು, ಜ್ಞಾನವನ್ನು ಉದಯಿಸಿಕೊಳ್ಳಬೇಕು ಎಂದು ಹೇಳುತ್ತಿರುತ್ತೇವೆ. ಹಾಗೆ ಯಾರಾದರೆ ಪ್ರಯತ್ನವನ್ನು ಮಾಡುತ್ತಾರೋ ಅವರು ಉತ್ತಮರಾಗುತ್ತಾರೆ.

ಲಕ್ಷಗಳು, ಕೋಟಿಗಳನ್ನು ಸಂಪಾದಿಸಿದವನು ದೊಡ್ಡವನಲ್ಲ, ಜೀವನದಲ್ಲಿ ಈ ಎರಡರ ತಿಳುವಳಿಕೆ ಪಡೆದುಕೊಂಡು ಅದಕ್ಕೆ ಅನುಗುಣವಾಗಿ ಜೀವಿಸುವವನು ದೊಡ್ಡವನು. ಅಂತಹವನು ಬಹಳ ಉತ್ತಮ ಸ್ಥಿತಿಯನ್ನು ಹೊಂದುತ್ತಾನೆ, ಜೀವನದಲ್ಲಿ ತಿಳಿದುಕೊಳ್ಳಬೇಕಾದದ್ದು, ತಿಳಿದು ಕೊಂಡವನಾಗುತ್ತಾನೆ, ಸಾಧಿಸಬೇಕಾದದದ್ದನ್ನು ಸಾಧಿಸಿದವನಾಗುತ್ತಾನೆ, ಪ್ರಕೃತಿಯು ಬೋಧಿಸುವುದಕ್ಕೆ, ಎಷ್ಟೋ ರೀತಿಯಲ್ಲಿ ಪ್ರಯತ್ನಿಸುತ್ತಾ ಇರುತ್ತದೆ. ಆದ್ದರಿಂದ ಎಷ್ಟರಿಂದಲೋ ಕಲಿಯಬಹುದು.

ಪತ್ರೀಜಿಯವರು ಬಹಳ ಸಂದರ್ಭಗಳಲ್ಲಿ ಮಕ್ಕಳಿಂದ ಕಲಿಯಬಹುದು, ಪ್ರಕೃತಿಯಿಂದ ಕಲಿಯಬಹುದು, ಸಮಸ್ತ ಜೀವರಾಶಿಗಳೀಂದ ಕಲಿಯಬಹುದು, ಹಳ್ಳಿಯವರಿಂದಲೂ ಕಲಿಯಬಹುದೆಂದು ಹೇಳಿದ್ದಾರೆ. ದತ್ತಾತ್ರೇಯರು 24 ಮಂದಿ ಗುರುಗಳಿಂದ ಕಲಿತ್ತಿದ್ದೇನೆ ಎಂದರು. ಅಂದರೆ ಪ್ರಕೃತಿಯಲ್ಲಿನ 24 ರೀತಿಯ ಜೀವಿಗಳಿಂದ ಕಲಿತುಕೊಂಡರು.

ನಿಮಗೆ ಬರುವ ಕಷ್ಟಗಳಿಂದ, ನಷ್ಟದಿಂದ, ಅವಮಾನಗಳಿಂದ ಪಾಠಗಳನ್ನು ಕಲಿಯಬೇಕು. ಎಷ್ಟು ಪಾಠಗಳನ್ನು ಕಲಿತುಕೊಂಡರೆ ಅಷ್ಟು ಬೆಳೆಯುತ್ತಾರೆ. ಹಾಗೆ ಕಲಿತುಕೊಂಡರೇನೇ ಒಬ್ಬ ಮಾನವನು ಮಾಧವನಾಗಬಲ್ಲನು. ಮಾಧವನು ಅಂದರೆ ಸೃಷ್ಟಿಗೆ ಪ್ರತಿ ಸೃಷ್ಟಿ ಮಾಡಬಲ್ಲವನು. ಅದಕ್ಕೆ ಎಷ್ಟೋ ಅನುಭವವಿರಬೇಕು.

ಒಂದು ಮೊಬೈಲನ್ನು ತಯಾರು ಮಾಡಬೇಕೆಂದರೇನೇ ಎಷ್ಟೊಂದು ತಂತ್ರಜ್ಞಾನ ತಿಳಿದಿರಬೇಕು? ಎಷ್ಟೋ ಕಲಿಯಬೇಕು? ಮತ್ತೇ ಸೃಷ್ಟಿಗೆ ಪ್ರತಿ ಸೃಷ್ಟಿ ಮಾಡಬೇಕೆಂದರೆ ಎಷ್ಟು ಬುದ್ಧಿವಂತಿಕೆಯು ಇರಬೇಕು? ಒಂದು ಮಾನವ ಶರೀರವನ್ನು ಸೃಷ್ಟಿ ಮಾಡಬೇಕೆಂದರೆ ಮಾತೇ? ಕಿವಿಯಿಂದ ಹೊರಗಿನಿಂದ ಬರುವ ಶಬ್ಧಗಳನ್ನು ಸ್ವೀಕರಿಸುತ್ತಿದ್ದೇವೆ, ಕಣ್ಣಿಂದ ಹೊರಗೆ ಇರುವ ವಸ್ತುಗಳನ್ನು ನೋಡುತ್ತಿದ್ದೇವೆ, ಮೂಗಿನಿಂದ ವಾಸನೆಗಳನ್ನು ಗ್ರಹಿಸುತ್ತಿದ್ದೇವೆ, ಬಾಯಿಯಿಂದ ಮಾತನಾಡಬಲ್ಲವರಾಗಿದ್ದೇವೆ, ಎಷ್ಟು ತಂತ್ರಜ್ಞಾನ ಇದೆಲ್ಲಾ !

ಮಾನವನು ಚಿಕ್ಕ ಮಗುವಾಗಿ ಹುಟ್ಟಿ, ವರ್ಷಗಳು ಕಳೆದಂತೆಲ್ಲಾ ಬೆಳೆಯುತ್ತಾ ಇರುತ್ತಾನೆ, ಎಷ್ಟೋ ಬದಲಾವಣೆಗಳು ಬರುತ್ತಾ ಇರುತ್ತವೆ. ಯುಕ್ತ ವಯಸ್ಸು ಬಂದಾಗ ಸಂಭೋಗಿಸುವುದು ನಂತರ ಮಕ್ಕಳನ್ನು ಹೆರುವುದು ಇಷ್ಟು ಪ್ರಕ್ರಿಯೆಯು ನಡೆಯುತ್ತದೆ. ಆದರೆ ಮಾನವನು ತಯಾರು ಮಾಡಿದ ಗೊಂಬೆಯು ಇವೆಲ್ಲಾ ಮಾಡಬಲ್ಲದೆ? ಮಾಡಲಾರದು. ಯಾವ ಗಾತ್ರದ ಗೊಂಬೆಯನ್ನು ತಯಾರು ಮಾಡಿದರೆ, ಆ ಗಾತ್ರದ ಗೊಂಬೆಯೇ ಇರುತ್ತದೆ. ಬಾಲಕನ ರೋಬೋಟನ್ನು ಮಾಡಿದರೆ ಬಾಲಕನ ರೋಬೋಟೇ ಶಾಶ್ವತವಾಗಿ ಇರುತ್ತದೆ. ಈ ಬದಲಾವಣೆಗಳೆಲ್ಲ ಬರುವುದಿಲ್ಲವಲ್ಲ?

ಗೊಂಬೆಗೆ ತಲೆ ಗೂದಲನ್ನು ಕಟ್ಟು ಮಾಡಿದರೆ ಕೂದಲು ಬೆಳೆಯುತ್ತದೆಯೇ? ಬೆಳೆಯದು. ಅದೇ ಮಾನವನು ಗುಂಡು ಮಾಡಿಸಿಕೊಂಡರೂ ಮತ್ತೆ ಮತ್ತೆ ಬೆಳೆಯುತ್ತದೆ. ಪ್ರಕೃತಿಯಲ್ಲಿರುವ ತಂತ್ರಜ್ಞಾನ ಎಷ್ಟು ಆಶ್ಚರ್ಯಕರವಾದದ್ದು ಅಂತಹ 84 ಲಕ್ಷ ಜೀವರಾಶಿಗಳನ್ನು ಸೃಷ್ಟಿಸಬಲ್ಲ ಸ್ಥಾಯಿಗೆ ಬೆಳೆಯಬಲ್ಲದೇ ಪೂರ್ಣಾತ್ಮನಾಗುವುದು, ಅಲ್ಲಿಯವರೆಗೆ ಜನ್ಮಗಳನ್ನು ತೆಗೆದುಕೊಳ್ಳುತ್ತಲೇ ಇರಬೇಕೆಂದರೆ ಎಷ್ಟು ಕಲಿತುಕೊಳ್ಳಬೇಕು?

ನಾವು ಕಲಿತುಕೊಂಡದ್ದೇ ಹೆಚ್ಚಾಗಿ ಬಿಟ್ಟಿದೆ ಎಂದುಕೊಳ್ಳುತ್ತೇವೆ. ಆದರೆ ಕಲಿತುಕೊಂಡದ್ದು ಎಲ್ಲಿ ಸರಿ ಹೋಗುತ್ತದೆ? ಎಷ್ಟು ಕಲಿತುಕೊಂಡರೂ, ಇನ್ನೂ ಕಲಿತು ಕೊಳ್ಳಬೇಕಾದದ್ದು ಇದ್ದೇ ಇರುತ್ತದೆ. ಅದ್ಭುತವಾದ ಸೃಷ್ಟಿ ಇದು, ಆದ್ದರಿಂದ ಬುದ್ಧಿ, ಜ್ಞಾನ ಎರಡೂ ಇರಬೇಕಾದದ್ದೇ. ಅದಕ್ಕೆ ಧ್ಯಾನವನ್ನು ಬಿಡಬೇಡ, ಭೀಮವರಂ ಬರುವುದು ಬಿಡಬೇಡ, ದೊರಕಿದ ಒಳ್ಳೆಯ, ಅದ್ಭುತ ಅವಕಾಶವನ್ನು ಉಪಯೋಗಿಸಿಕೊಳ್ಳಿ ಎನ್ನುತ್ತಾನೆ.

ಎಲ್ಲರ ಗೊಡವೆ ನಮಗೆ ಅನಗತ್ಯ, ಆತ್ಮಗಳಾದ ನಾವು ಇನ್ನೂ ಬೆಳೆಯುವುದಕ್ಕೇ ಈ ಜನ್ಮವನ್ನು ತೆಗೆದುಕೊಂಡಿದ್ದೇವೆ ತೆಗೆದುಕೊಂಡ ನಂತರ ಪಾಠಗಳನ್ನು ಕಲಿತುಕೊಳ್ಳುತ್ತೇವೆ, ಕಲಿತುಕೊಳ್ಳಬೇಕೂ ಕೂಡಾ. ಆದ್ದರಿಂದ ನನ್ನವರು ಎಂದುಕೊಂಡವರಿಗೆ ಸಲಹೆ ಕೊಡಿರಿ, ಅಷ್ಟೇ ಹೊರತು ಒತ್ತಾಯ ಮಾಡಬೇಡಿರಿ, ಬಲವಂತವಿಡಬೇಡಿರಿ ಇನ್ನೊಂದು 50 ಜನ್ಮಗಳಿಗೋ, 100 ಜನ್ಮಗಳಲ್ಲೋ ಅವರೇ ಕಲಿತುಕೊಳ್ಳುತ್ತಾರೆ.

ನಮ್ಮ ದೃಷ್ಟಿಯನ್ನು ಕಲಿತುಕೊಳ್ಳವುದರ ಮೇಲೆ, ತಿಳಿದುಕೊಳ್ಳುವುದರ ಮೇಲೆ ಇಡಬೇಕು. ಈ ಮಾಯೆಯಲ್ಲಿ ಬಿದ್ದು ಈ ಸಂಸಾರ ನನ್ನದು, ಈ ಆಸ್ತಿಗಳು ನನ್ನವು, ಈ ಸಂಪತ್ತುಗಳು ನನ್ನವು, ಈ ಪದವಿಗಳು ನನ್ನವು, ಈ ಉದ್ಯೋಗ ನನ್ನದು ಎಂದುಕೊಳ್ಳುತ್ತಾ, ಅದೇ ಜೀವನ, ಅದೇ ದೊಡ್ಡದು ಎಂದುಕೊಳ್ಳುತ್ತಾ, ಅವುಗಳಲ್ಲಿಯೇ ಮುಳುಗಬಾರದು. ಆದರೆ ನಿನಗೆ ಏನು ಕಾಣಿಸುತ್ತಿವೆಯೋ ಅವೆಲ್ಲಾ ಅದೃಶ್ಯವಾಗುವಂತವೇ. ಅವುಗಳ ಹಿಂದೆ ಓಡಬೇಡವೆಂದು ತಿಳಿಸುವುದಕ್ಕೆ ಈ ಕನಸುಗಳು.

ಕನಸುಗಳ ಮೂಲಕ ಪ್ರಕೃತಿ ಇನ್ನೊಂದು ಉಪಕಾರವನ್ನು ಮಾಡುತ್ತದೆ. ಏನೆಂದರೆ?

**3. "ಕನಸುಗಳ ಮೂಲಕ ತೀರದ ಕೋರಿಕೆಗಳನ್ನು ತೀರುತ್ತದೆ"**

ಜೀವನದಲ್ಲಿ ತೀರದ ಕೋರಿಕೆಗಳು ಎಷ್ಟೋ ಇರುತ್ತವೆ, ಹಣ ಇಲ್ಲ, ಕಾರು ಇಲ್ಲವೆಂದೋ, ಸರಿಯಾದ ಉದ್ಯೋಗ ಇಲ್ಲವೆಂದೋ, ಇಲ್ಲದಿದ್ದರೆ ಅಂದವಾದ ಹೆಂಡತಿ ಇಲ್ಲವೆಂದೊ, ಒಳ್ಳೆಯ ಗಂಡನಿಲ್ಲವೆಂದೋ, ಎಷ್ಟೋ ಸುಖಗಳು ಇಲ್ಲವೆಂದೋ, ಆಭರಣಗಳು ಇಲ್ಲವೆಂದೋ, ಅವರಿಗೆ ಇವೆ ನನಗೆ ಇಲ್ಲವೆಂದೋ, ಅವನಿಗೆ ಒಳ್ಳೆಯ ಪದವಿ ಇದೆ, ನನಗೆ ಇಲ್ಲವೆಂದೋ, ಅವಾರ್ಡ್‌ಗಳು ಬರಲಿಲಲ್ಲವೆಂದೋ ಬಾಧೆಪಡುತ್ತಾ ಇರುತ್ತಾರೆ. ಎಷ್ಟೋ ನಿರುತ್ಸಾಹಪಡುತ್ತಾರೆ. ಅವೆಲ್ಲಾ ಇದ್ದರೆ ಚೆನ್ನಾಗಿರುತ್ತದೆ ಎಂಬ ಕೋರಿಕೆಗಳು ಇರುತ್ತವೆ, ಆದರೆ ಎಲ್ಲರಿಗೂ ತೀರುವುದಿಲ್ಲ.

ಆದ್ದರಿಂದ ಪ್ರಕೃತಿಯ ಏನು ಮಾಡುತ್ತದೆ ಎಂದರೆ ಇಂತಹ ತೀರದ ಕೋರಿಕೆಗಳಿಂದ ನೋವು ಪಡುವವರಿಗೆ ಈ ಕನಸುಗಳ ಮೂಲಕ ಅವುಗಳನ್ನು ತೀರಿಸುತ್ತಾ, ಉಪಶಮನ ಉಂಟು ಮಾಡುತ್ತದೆ. ನೀವು ಅಂದುಕೊಳ್ಳಬಹುದು ಕನಸುಗಳು ಸ್ವಲ್ಪ ಹೊತ್ತೇ ಅಲ್ಲವೇ? ನೀವು ನಿಜ ಜೀವನ ಬಹಳ ಹೆಚ್ಚು ಎಂದುಕೊಳ್ಳುತ್ತೀರಿ. ಆದರೆ ಕನಸು ಹೇಗೆ ಸ್ವಲ್ಪಹೊತ್ತೋ, ನಿಜ ಜೀವನ ಕುಡಾ ಸ್ವಲ್ಪ ಹೊತ್ತಿನ ಜೀವನವೇ, ಬಹಳ ಏನೂ ಅಲ್ಲ.

ನಾನು ಒಂದು ಬಾರಿ ಪತ್ರೀಜಿಯವರೊಂದಿಗೆ ಮಾತನಾಡುತ್ತಿದ್ದಾಗ, ಪತ್ರೀಜಿಯವರು ಬುದ್ಧನು 2500 ವರ್ಷಗಳ ಕೆಳಗೆ ಜನಿಸಿದನು. ನಾನು ಬುದ್ಧನ ಬಳಿ ಆನಂದನಾಗಿ ಇದ್ದೆನು. ಈಗ ಪತ್ರಿಯಾಗಿ ಬ್ರಾಹ್ಮಣರ ಕುಟುಂಬದಲ್ಲಿ ಜನ್ಮ ತೆಗೆದುಕೊಂಡಿದ್ದೇನೆ. ಅಲ್ಲಿಂದ ಇಲ್ಲಿಯವರೆಗೆ ಒಟ್ಟು 5 ಜನ್ಮಗಳನ್ನು ತೆಗೆದುಕೊಂಡಿದ್ದೇನೆ ಎಂದರು.

ಆಗ ನಾನು ಅಂದೆನು, 2500 ವರ್ಷಗಳಿಗೆ ಐದು ಜನ್ಮಗಳೇನು? ಇನ್ನೂ ಬಹಳ ಜನ್ಮಗಳನ್ನು ತೆಗೆದುಕೊಂಡಿರಬೇಕಲ್ಲ? ಎಂದು ಕೇಳಿದೆನು. ಆಗ ಅವರು ನಮಗೆ ಇಲ್ಲಿ 2500 ವರ್ಷಗಳು ಅಂದರೆ ಹೆಚ್ಚು, ಆದರೆ ಮೇಲಿನ ಲೋಕಗಳಲ್ಲಿ ಅದು ಸಮುದ್ರದಲ್ಲಿ ಕಾಗೆಯ ಹಿಕ್ಕೆಯ ಕೆಳಗೆ ಲೆಕ್ಕ ಎಂದರು.

ಆದ್ದರಿಂದ ಇಲ್ಲಿ ತಿಳಿದುಕೊಳ್ಳಬೇಕಾದದ್ದು ಏನೆಂದರೆ, ಕನಸೆಂದರೆ ಸ್ವಲ್ಪ ಹೊತ್ತೇ ಅಲ್ಲವೇ ! ನಿಜ ಜೀವನವು ಬಹಳ ಹೆಚ್ಚು ಎಂದುಕೊಳ್ಳುತ್ತಾರೆ. ಆದರೆ ಈ ನಿಜ ಜೀವನ ಕೂಡಾ ಸ್ವಲ್ಪ ಹೊತ್ತೇ. 'ಅದು ರಾತ್ರಿ ಕನಸು–ಇದು ಹಗಲು ಕನಸು'.

ನಾವೆಲ್ಲರೂ ಆ ಮೂಲಾತ್ಮನಿಂದ, ಆ ಪೂರ್ಣಾತ್ಮನಿಂದ ಬೇರ್ಪಟ್ಟಂತಹ ಅಂಶಾತ್ಮಗಳು. ಅಂದರೆ ಅವರಲ್ಲಿಯ ಭಾಗವೇ. ಒಂದು ರೀತಿಯಲ್ಲಿ ಹೇಳಬೇಕೆಂದರೆ ಅವರೇ ನಾವು, ನಾವೇನೂ ಬೇರೆಯಲ್ಲ. ನಾವು **"ಸ್ವರ್ಗದಿಂದ ಭೂಮಿಗೆ ದಿವ್ಯ ಅನುಭವಗಳಿಗಾಗಿ ಬಂದ ಮಾನವರಲ್ಲ, ಮಾನವ ಅನುಭವಗಳಿಗಾಗಿ ಬಂದ ದಿವ್ಯರು"** ಎಂದರು ಪತ್ರೀಜಿಯವರು. ಅಂದರೆ ಎಲ್ಲಾ ತಾನೇ ಅಲ್ಲಾ? ತನ್ನನ್ನು ತಾನು ಏಕೆ ನೋವು ಪಡಿಸಿಕೊಳ್ಳುತ್ತಿದ್ದಾನೆ'?

ನಿಮ್ಮನ್ನು ನೀವು ಬಾಧೆಪಡಿಸಿಕೊಳ್ಳುತ್ತೀರಾ? ಆ ತೀರದ ಕೋರಿಕೆಗಳಿಂದ ಮಥನಪಡುತ್ತಾ ಇದ್ದರೆ, ಬಾಧೆಪಡುತ್ತಾ ಇದ್ದರೆ, ಸ್ವಲ್ಪ ಉಪಶಮನವನ್ನುಂಟು ಮಾಡುವುದಕ್ಕೆ ಸೃಷ್ಟಿಯಲ್ಲಿ ಈ ಏರ್ಪಾಟು ಮಾಡಲ್ಪಟ್ಟಿದೆ.



**ಕರ್ಮಗಳನ್ನು ಅನುಭವಿಸುವುದಕ್ಕೆ**
**ತೆಗೆದುಕೊಳ್ಳುವುದು ಜನ್ಮ.**
**ಕರ್ಮಗಳು ಇಲ್ಲದಿದ್ದರೂ ಭೂಮಿಗೆ**
**ಬರುವುದು ಅವತಾರ.**

- "ಬ್ರಹ್ಮರ್ಷಿ" ತಟವರ್ತಿ ವೀರರಾಘವ ರಾವ್

# ಕನಸುಗಳನ್ನು ಹೇಗೆ ಕಾಣುತ್ತಾರೆ?

ಮತ್ತೇ ಈ ಕನಸುಗಳನ್ನು ಹೇಗೆ ಕಾಣುತ್ತಾರೆ? ಎಂಬುದನ್ನು ತಿಳಿಯೋಣ. ಕನಸುಗಳನ್ನು ಕಾಣುವುದು ಎನ್ನುವುದು ಮನಸ್ಸಿಗೆ ಸಹಜವಾದ ಸ್ಥಿತಿ. ಅದು ಎಚ್ಚರ, ಗಾಢ ನಿದ್ದೆಗಳ ಮಧ್ಯದ ಸ್ಥಿತಿ. ಇಂದ್ರಿಯಗಳು ಅವುಗಳ ಗ್ರಹಣ ಶಕ್ತಿಯನ್ನು ಬಳಸಿಕೊಳ್ಳುವುದಕ್ಕೆ ಅಡ್ಡಿಯಾದಾಗ, ಮನಸ್ಸು ಅದರ ಆಳದೊಳಗೆ ನಿತ್ರಾಣವಾಗಿದ್ದ ನೆನಪುಗಳನ್ನು, ತೀರದ ಕೋರಿಕೆಗಳನ್ನು ಪುನಃ ಸ್ಮರಣ ಮಾಡಿಕೊಳ್ಳುತ್ತದೆ. ಅವುಗಳನ್ನೇ ಕನಸು ಎನ್ನುತ್ತಾರೆ.

ಅಂದರೆ ಜ್ಞಾನೇಂದ್ರಿಯಗಳು, ಬಾಹ್ಯ ಪ್ರಪಂಚದಲ್ಲಿ ನಡೆಯುತ್ತಿರುವುದನ್ನು ಗ್ರಹಿಸಲಾರದ ಸ್ಥಿತಿಯಲ್ಲಿದ್ದಾಗ, ಸ್ಮಾರಕ ಮನಸ್ಸು ದಾಹ ತೀರಿಸಿಕೊಳ್ಳುತ್ತಾ ಇರುವಾಗ, ಮನಸ್ಸಿನಲ್ಲಿ ಹುದುಗಿರುವ ಕೋರಿಕೆಗಳು ಪುನಃ ಸ್ಮರಣೆಯನ್ನು ಮಾಡಿಕೊಳ್ಳುವುದರಿಂದ ಆ ಕೋರಿಕೆಗಳು ಹಿಂದಕ್ಕೆ ಬರುತ್ತಾ ಇರುತ್ತವೆ, ಅವುಗಳನ್ನು ಕನಸುಗಳು ಎನ್ನುತ್ತಾರೆ.

ತೀರದ ಕೋರಿಕೆಗಳು ಮನಸ್ಸಿನಲ್ಲಿ ಬಚ್ಚಿಟ್ಟುಕೊಂಡಿರುತ್ತವೆ. ಅಂದರೆ ಮನಸ್ಸಿನ ಆಳದಲ್ಲಿ ಸಬ್‌ಕಾನ್‌ಷಿಯಸ್ ಸ್ಥಿತಿಯಲ್ಲಿ ಇದು ಬಿಡುತ್ತವೆ. ಅವು ಎಲ್ಲಿಗೂ ಹೋಗುವುದಿಲ್ಲ, ಅವು ಏನು ಮಾಡುತ್ತವೆ ಎಂದರೆ? ನೆರವೇರುವ ಅವಕಾಶಕ್ಕಾಗಿ ಕಾಯುತ್ತಿರುತ್ತವೆ. ಉದಾಹರಣೆಗೆ ಒಬ್ಬನಿಗೆ ಕಾರು ಕೊಳ್ಳಬೇಕೆಂದಿದೆ, ಆದರೆ ಅಷ್ಟು ಹಣವಿಲ್ಲ. ಆ ಕೋರಿಕೆ ಹಾಗೇ ಒಳಗಿದ್ದು ಬಿಡುತ್ತದೆ, ದಿನವೂ ನೆನಪಿಗೆ ಬಾರದಿದ್ದರೂ ಮಧ್ಯ ಮಧ್ಯದಲ್ಲಿ ನೆನಪಿಗೆ ಬರುತ್ತದೆ.

ನಿದ್ದೆ ಮಾಡುತ್ತಿರುವಾಗ ಸ್ಮಾರಕ ಮನಸ್ಸು ಅಂದರೆ ಕಾನ್ಷಿಯಸ್ ಮನಸ್ಸು ವಿಶ್ರಾಂತಿ ತೆಗೆದುಕೊಳ್ಳುತ್ತಿರುವಾಗ, ಅಪ ಸ್ಮಾರಕ ಮನಸ್ಸಿನಲ್ಲಿರುವ ಅಂದರೆ ಸಬ್ಕಾನ್ಷಿಯಸ್ ಮೈಂಡ್‌ನಲ್ಲಿ ಇರುವಂತಹ ಕೋರಿಕೆಗಳು ಸ್ವಪ್ನಾವಸ್ಥೆಯಲ್ಲಿ ಹಿಂದಕ್ಕೆ ಬರುತ್ತಾ ಇರುತ್ತವೆ. ಅವುಗಳನ್ನು ನೀವು ಪುನಃ ಸ್ಮರಣೆ ಮಾಡಿಕೊಳ್ಳುತ್ತಾ ಇರುತ್ತೀರಿ. ಆ ಸಮಯದಲ್ಲಿ ಅವೆಲ್ಲಾ ನಿಜವಾಗಿ ನಡೆಯುತ್ತಿರುವಂತೆ ಅನ್ನಿಸುತ್ತವೆ, ಅವುಗಳನ್ನೇ ಕನಸುಗಳು ಎನ್ನುತ್ತಾರೆ.

ಅಚಿದರೆ ಪಾಪ! ಅವನು ಜೀವನದಲ್ಲಿ ಇನ್ನೂ ಅಷ್ಟು ಹಣವನ್ನು ಸಂಪಾದಿಸಿಲಾರನು, ಅಂತಹ ಕಾರನ್ನು ಕೊಳ್ಳಲಾರನು, ಅಂತಹ ಕಟ್ಟಡವನ್ನು ಕಟ್ಟಲಾರನು, ಅಂತಹ ವ್ಯಾಪಾರಗಳನ್ನು ಮಾಡಲಾರನು, ಅಂತಹ ಪದವಿಗಳನ್ನು ಸಂಪಾದಿಸಲಾರನು, ಆದರೆ ಎಲ್ಲಾ ಇದ್ದರೆ ಚೆನ್ನಾಗಿರುತ್ತದೆ ಎಂದು ಬಾಧೆಪಡುವವರಿಗೆ ತಾತ್ಕಾಲಿಕವಾಗಿ ಈ ಕನಸುಗಳ ಮೂಲಕ ಇವೆಲ್ಲಾ ನೆರವೇರುವ ಏರ್ಪಾಟು ಪ್ರಕೃತಿ ಮಾಡಿದೆ. ಅವುಗಳನ್ನು ಕಾಣುತ್ತಿರುವಾಗ ಎಷ್ಟೋ ರಿಲ್ಯಾಕ್ಸ್ ಆಗುತ್ತೀರಿ. ಪ್ರಕೃತಿ ಮಾಡಿದ ಎಷ್ಟು ದೊಡ್ಡ ಏರ್ಪಾಟು ಇದು. ಎಷ್ಟು ಉಪಕಾರ ಇದು!

ನೀನು ಅನುಭವಿಸುವುದಕ್ಕಾಗಿ ಕೆಲವು ಕರ್ಮಗಳನ್ನು ತಂದುಕೊಂಡಿರುವೆ, ಅಂತಹ ಜೀವನ ಬಂದಿದೆ. ಇನ್ನು ಅವುಗಳೊಂದಿಗೆ ಬಾಧೆ ಪಡುತ್ತಾ ಕುಳಿತುಕೊಂಡರೆ ನೀನು ಮಾಡಬೇಕಾದ ಕೆಲಸವನ್ನು ಮಾಡಲಾರೆ, ನೀನು ಹೊಂದಬೇಕಾದ ಜ್ಞಾನವನ್ನು ಹೊಂದಲಾರೆ. ಕೋರಿಕೆಗಳು ತೀರಲಿಲ್ಲವೆಂದು ಅದಕ್ಕಾಗಿ ಹಣವನ್ನು ಸಂಪಾದಿಸಿ ಕೊಳ್ಳಬೇಕೆಂದಿರುವವರು ಎಷ್ಟೋ ಜನ ಹಗಲು-ರಾತ್ರಿ ಕೂಡಾ ಕಷ್ಟಪಡುತ್ತಿದ್ದಾರೆ. ಕೋರಿಕೆಗಳು ತೀರದಿದ್ದಾಗ, ತಪ್ಪುಗಳನ್ನು ಪಾಪಗಳನ್ನು, ಮಾಡಬಾರದ ಕೆಲಸಗಳನ್ನು ಮಾಡುತ್ತಿದ್ದಾರೆ. ಅಂತಹವರಿಗಾಗಿಯೇ ತೀರದ ಕೋರಿಕೆಗಳನ್ನು ತೀರಿಸಿಕೊಳ್ಳುವುದಕ್ಕಾಗಿ ಪ್ರಕೃತಿ ಕನಸುಗಳ ಮೂಲಕ ಈ ಏರ್ಪಾಡನ್ನು ಮಾಡಿದೆ.

***

## ಕನಸಿನಲ್ಲಿ ವಿಧಗಳು

ಈ ಕನಸುಗಳು ಬಹಳ ವಿಧಗಳಿವೆ. ನಾವು ಸಾಮಾನ್ಯವಾಗಿ ಹೊಂದುವ ಒಳ್ಳೆಯ, ಕೆಟ್ಟ ಕನಸುಗಳೇ ಅಲ್ಲದೆ ಇನ್ನೂ ಎರಡು ರೀತಿಯ ಕನಸುಗಳು ಇವೆ.

**1. ಭವಿಷ್ಯತ್ತಿನಲ್ಲಿ ನಡೆಯುವಂತವನ್ನು ಸೂಚಿಸುವಂತವು:** ಬಹಳಷ್ಟು ಜನ ಅನ್ನುತ್ತಿರುತ್ತಾರೆ. ನನಗೆ ಸ್ವಲ್ಪ ಮುಂಚಿತವಾಗಿಯೇ ತಿಳಿಯುತ್ತಿವೆಯೆಂದು. ಆಗಾಗ ಭವಿಷ್ಯತ್ತನ್ನು ತಿಳಿಸುವ ಕನಸುಗಳು ನಮಗೆ ಮಾರ್ಗದರ್ಶಕ ಆಗುತ್ತವೆ.

**2. ವಿಶೇಷ ಭಯವನ್ನುಂಟು ಮಾಡುವಂತವು:** ಆಶಾಭಂಗದಿಂದ, ವಿಪರೀತವಾದ ನೋವು, ಭಯದಿಂದಾಗಲಿ, ಭಯಂಕರ ಕನಸುಗಳು ಬರಬಹುದು. ಹಾಗೆಯೇ ಮನುಷ್ಯ ಬಹಳ ದಣಿವಾದಾಗ, ಬಹಳ ಆಕ್ರೋಶದಿಂದ ಇದ್ದರೂ ಭಯಾನಕ ಕನಸುಗಳು ಬರಬಹುದೆನ್ನುತ್ತಾರೆ ಹಿರಿಯರು.

ಅದಕ್ಕೆ ಕನಸಿನಲ್ಲಿ ನಿಮಗೆ ಒಳ್ಳೆಯ ವಿಷಯಗಳೇನಾದರೂ ತಿಳಿದಾಗ ಅವುಗಳನ್ನು ಗಣನೆಗೆ ತಂದುಕೊಳ್ಳಿ ತಪ್ಪೇನು ಇಲ್ಲ, ಅವುಗಳನ್ನು ಆಚರಿಸಬಹುದೂ ಕೂಡಾ. ಇವುಗಳಿಗೆ ಸ್ವಲ್ಪ ಬುದ್ಧಿ ಕೂಡಾ ಇರಬೇಕು. ಆದ್ದರಿಂದ ಈ ಕನಸುಗಳೆಂಬವು ಮಾನವನಿಗೆ ಲಾಭವನ್ನುಂಟು ಮಾಡುವಂತವೇಯಾಗಲಿ, ನಷ್ಟವನ್ನುಂಟು ಮಾಡುವಂತವಲ್ಲ, ಅವುಗಳಿಂದ ಕೂಡಾ ಕಲಿತುಕೊಳ್ಳಬೇಕು.

ಆದಕಾರಣ 1) ನಡೆಯುತ್ತಿರುವುದೆಲ್ಲಾ ಕನಸಿನಂತಾದ್ದೇ 2) ಯಾವುದಾದರೆ ಕಾಣಿಸುತ್ತದೋ ಅದೆಲ್ಲಾ ನಶಿಸುವಂತಾದ್ದೇ ಎಂಬ ವಿಷಯವನ್ನು ಈ ಕನಸುಗಳು ಬೋಧಿಸುತ್ತವೆ. ಹಾಗೆಯೇ 3) ಯಾವುವೋ ಕೆಲವು ತೀರಲಾರದ ಕೋರಿಕೆಗಳೂ ಕೂಡಾ ಈ ಕನಸುಗಳ ಮೂಲಕ ತೀರುತ್ತಾ ಇರುತ್ತವೆ.

ಈ ಜೀವನ ಕನಸಿನಂತಾದ್ದೇ ಎಂಬ ವಿಷಯವು ಸತ್ತ ನಂತರ, ತಿಳಿಯುವುದರಿಂದ ಉಪಯೋಗವೇನೂ ಇಲ್ಲ. ಹಾಗೆಯೇ ಬೇಗನೆ ಎಲ್ಲರೂ ಜ್ಞಾನವನ್ನು ಸಂಪಾದಿಸಿಕೊಳ್ಳಲಾರರು. ಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆಂದರೆ ಅಕುಂಠಿತವಾದ ದೀಕ್ಷೆ, ಛಲ, ಕೃಷಿ, ಎಷ್ಟೋ ಶ್ರದ್ಧೆ ಇರಬೇಕು. ಆಗಲೇ ಜ್ಞಾನವನ್ನು ಸಂಪಾದಿಸಿಕೊಳ್ಳುತ್ತಾರೆ. ಮೂರನೇ ಕಣ್ಣು ತೆಗೆದುಕೊಳ್ಳ ಬೇಕೆಂದರೂ ಅಷ್ಟು ಸುಲಭವೇನಲ್ಲ. ಒಬ್ಬ ಆಂಜನೇಯ ಸ್ವಾಮಿ ಸ್ಥಾಯಿಗೆ ಬೆಳೆಯಬೇಕು. ಅಂತಹ ಉನ್ನತ ಸ್ಥಾಯಿಗೆ ಬೆಳೆದವರಿಗೇ ಮೂರನೇ ಕಣ್ಣು ಬರುತ್ತದೆ.

ಯಾರಾದರೆ ಮರಣಿಸುವ ಮೊದಲೇ ಮರಣಿಸುತ್ತಾರೋ ಅವರು **"ನಡೆಯುತ್ತಿರುವುದೆಲ್ಲಾ ನೀರಿನ ಮೇಲೆ ಬರಹದಂತೆ"** ಇದೆ ಎಂದುಕೊಳ್ಳುತ್ತಾರೆ". ನೀರಿನ ಮೇಲೆ ಬರಹ ಹೇಗಿರುತ್ತದೆ? ತಕ್ಷಣವೇ ಬರೆದದೆಲ್ಲಾ ಹೋಗಿ ಬಿಡುತ್ತದೆ. ಹಾಗೆಯೇ ಜೀವನದಲ್ಲಿ ನಡೆಯುತ್ತಿರುವವೆಲ್ಲಾ ಇರುವುದಿಲ್ಲ, ಹೋಗುತ್ತವೆ. ಆದ್ದರಿಂದ ಇದನ್ನಾಧರಿಸಿ ಅರ್ಥ ಮಾಡಿಕೊಳ್ಳಿ, ನಡೆಯುತ್ತಿರುವುದೆಲ್ಲಾ ಕನಸೇ, ಆದರೆ ನಿಜವಲ್ಲ.

ಈ ನಿಜವಲ್ಲದ ಜೀವನ ಕುರಿತು ತಪ್ಪುಗಳು, ಪಾಪಗಳನ್ನು ಮಾಡಬಾರದು, ಧರ್ಮವನ್ನು ತಪ್ಪಬಾರದು, ನಾವು ಹುಟ್ಟುತ್ತಿದ್ದೇವೆ, ಜೀವನದಲ್ಲಿ ಹಗಲು ರಾತ್ರಿ ಕಷ್ಟಪಟ್ಟು ಎಷ್ಟೋ ಮಾಡುತ್ತಾ ವಿವಿಧ ರೀತಿಯಲ್ಲಿ ಸಂಪಾದಿಸುತ್ತಿದ್ದೇವೆ. ಎಷ್ಟು ಮಾಡಿದರೂ ಕೊನೆಗೆ ಪ್ರತಿಯೊಬ್ಬರೂ ನಿಷ್ಕ್ರಮಿಸಬೇಕಾದದ್ದೇ. ಅಂದರೆ ಇದೆಲ್ಲಾ ಕನಸಿನಂತಾದ್ದೇ, ಬಾಲ್ಯದಲ್ಲಿ ನಡೆದವನ್ನು ಈಗ ತೋರಿಸಬಲ್ಲೆವೇ?. ಅಂದರೆ ತೋರಿಸಲಾರೆವಲ್ಲಾ? ಹಾಗೆಯೇ ಈಗ ನೋಡುವುದು, ಮಾಡುವುದು ಕೂಡಾ ಮರಣಿಸಿದ ನಂತರ ಕನಸೇ ಎನ್ನಿಸುತ್ತದೆ.

ನಿದ್ದೆಯಿಂದ ಎಚ್ಚೆತ್ತ ಮೇಲೆ ಏನೂ ಇರುವುದಿಲ್ಲ. ಎಲ್ಲಾ ಕನಸೇ ಎನ್ನುತ್ತಾರೆ ಹಾಗೆಯೇ ಆತ್ಮಜ್ಞಾನವನ್ನು ಹೊಂದಿದ ಮೇಲೆ ನಡೆಯುತ್ತಿರುವ ಜೀವನವೆಲ್ಲಾ ಕನಸೆಂದು ತಿಳಿದುಕೊಳ್ಳುತ್ತಾರೆ. ಇಲ್ಲದಿದ್ದರೆ ಮೂರನೇ ಕಣ್ಣು ತೆರೆದಾಗ ನಡೆಯುತ್ತಿರುವುದೆಲ್ಲಾ ಕನಸೆಂದು ತಿಳಿಯುತ್ತದೆ. ಆದ್ದರಿಂದ ಆತ್ಮಜ್ಞಾನಿಗೆ ಜೀವನವೆಲ್ಲಾ ನೀರಿನ ಮೇಲೆ ಬರಹದಂತೆ ಎಂದು ತಿಳಿಯುತ್ತದೆ. ಈ ಹಸಿ ಸತ್ಯವು ಅರ್ಥವಾಗುತ್ತದೆ.

ಇಲ್ಲಿ 'ಸತ್ತರೂ ಸಾಯುವುದಿಲ್ಲವೆನ್ನುವುದೇ' ವೇದಾಂತ. 'ಯದೃಶ್ಯಂ ತನ್ನಸ್ಯಂ'

ಎಂಬುದೇ ವೇದಾಂತ. ಪತ್ರೀಜಿಯವರು, ಸತ್ತರೂ ಸಾಯುವುದಿಲ್ಲ ಎಂದು ಎಷ್ಟೋ ಬಾರಿ ಹೇಳಿದ್ದಾರೆ. ನಾವು ಮರಣಿಸಿದೆವು ಅಂದುಕೊಳ್ಳುತ್ತೇವೆಯಾಗಲಿ, ಸತ್ತರೂ ಕೂಡಾ ಇರುತ್ತೇವೆ. ಇದು ಅರ್ಥವಾದರೆ ಯಾರಿಗೂ ದುಃಖವಿರುವುದಿಲ್ಲ. ಆದ್ದರಿಂದ ನೆನಪಿಟ್ಟುಕೊಳ್ಳಿ, ಕನಸಿನಲ್ಲಿ ಆನಂದವಿದೆ. ಜೀವನದಲ್ಲಿ ಆನಂದವಿದೆ, ಈ ಕನಸಿನಂತ ಜೀವನಕ್ಕಾಗಿ ತಪ್ಪುಗಳನ್ನು, ಪಾಪಗಳನ್ನು ಮಾಡಬಾರದು, ಜೀವನವನ್ನು ನಷ್ಟಪಡಿಸಿಕೊಳ್ಳಬಾರದು ಎಂದು ತಿಳಿದುಕೊಳ್ಳಬೇಕು. ನಮ್ಮ ಜೊತೆಗೆ ಬರುವ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆಂದು ಪ್ರಕೃತಿ ನಮ್ಮನ್ನು ಎಚ್ಚರಿಸುತ್ತದೆ.

** ** **

## ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ? "ಈ ಪ್ರಪಂಚವೆಲ್ಲಾ ಒಂದು ನಾಟಕ ರಂಗ"ವೆಂದು ಅರ್ಥವಾಗುತ್ತದೆ.

ನೀವು ಆಲೋಚಿಸಿದರೆ ಈ ಪ್ರಪಂಚವೆಲ್ಲಾ ಒಂದು ನಾಟಕ ರಂಗವೆಂದು ಅರ್ಥವಾಗುತ್ತದೆ. ಈ ನಾಟಕರಂಗದಲ್ಲಿ ನಾವೆಲ್ಲಾ ನಟರುಗಳು. ನಾಟಕವು ಆದ ಮೇಲೆ ನಟರು ಹೇಗೆ ನಿಷ್ಕ್ರಮಿಸುವರೋ ನಾವು ಕೂಡಾ ಈ ಪ್ರಪಂಚದಿಂದ ಮರಣಿಸಿದರೆ ನಿಷ್ಕ್ರಮಿಸುತ್ತೇವೆ. ಈ ವಿಷಯವನ್ನೇ ಷೇಕ್ಸಿಪೀಯರ್ ಹೇಳಿದ್ದಾನೆ. ಆತನು ಏನು ಹೇಳಿದ್ದಾನೆಂದರೆ? All the world is a stage. we are all mere actors, destrut and fume, do our part and then depart.

ಅಂದರೆ ಈ ಪ್ರಪಂಚವನ್ನು ಒಂದು ನಾಟಕರಂಗದೊಂದಿಗೆ ಹೋಲಿಸಿದ್ದಾನೆ ಷೇಕ್ಸ್‌ಪಿಯರ್. ಈ ನಾಟಕರಂಗದಲ್ಲಿ ನಾವು ಪಾತ್ರದಾರಿಗಳು. ಒಬ್ಬೊಬ್ಬರು ಒಂದೊಂದು ಪಾತ್ರವನ್ನು ಪೋಷಿಸುತ್ತಿದ್ದೇವೆ. ಹೆಂಡತಿಯ ಪಾತ್ರ, ಗಂಡನ ಪಾತ್ರ, ಧನವಂತನ ಪಾತ್ರ, ಬಡವನ ಪಾತ್ರ, ರಾಜಕೀಯ ನಾಯಕನ ಪಾತ್ರ, ಕೆಲಸದವನ ಪಾತ್ರ, ಹಾಗೆ ಒಬ್ಬೊಬ್ಬರು ಒಂದೊಂದು ಪಾತ್ರ ಪೋಷಿಸುತ್ತಿದ್ದೇವೆ. ಏನೋ ಗಡಿಬಿಡಿ ಮಾಡುತ್ತೇವೆ, ಏನೇನೋ ಕೆಲಸಗಳನ್ನು ಮಾಡುತ್ತೇವೆ, ಒಟ್ಟಾರೆ ಯಾರ ಪಾತ್ರವನ್ನು ಅವರು ಪೋಷಿಸಿ ನಿಧಾನವಾಗಿ ಈ ನಾಟಕ ರಂಗದಲ್ಲಿ ನಿಷ್ಕ್ರಮಿಸುತ್ತೇವೆ.

ಕೆಲವರು ಅತಿಥಿ/ಗೌರವ ಕಲಾವಿದರೂ ಇರುತ್ತಾರೆ. ಸುಮ್ಮನೆ ಮಧ್ಯದಲ್ಲಿ ಬರುತ್ತಾರೆ, ಮಧ್ಯದಲ್ಲಿಯೇ ಹೋಗಿ ಬಿಡುತ್ತಾ ಇರುತ್ತಾರೆ. ಹಾಗೆಯೇ ಜೀವನದಲ್ಲಿ ಕೂಡಾ ಹುಟ್ಟಿದ ನಂತರ ಹೋಗುವವರೂ ಇರುತ್ತಾರೆ, ಸ್ವಲ್ಪ ಬೆಳೆದ ನಂತರ

ಹೋಗುವವರೂ ಇರುತ್ತಾರೆ, ಚೆನ್ನಾಗಿ ದೊಡ್ಡವರಾದ ಮೇಲೂ ಹೋಗುವವರು ಇರುತ್ತಾರೆ, ಮದುವೆಯಾದ ನಂತರ ಕೂಡಾ ಬೇಗನೇ ಹೋಗುವವರೂ ಇದ್ದಾರೆ. ಹಾಗೇ ವಿವಿಧ ರೀತಿಯಲ್ಲಿ ನಿಷ್ಕ್ರಮಿಸುತ್ತಾರೆ.

ನಾಟಕದಲ್ಲಿ ಎಲ್ಲಾ ರೀತಿಯ ಪಾತ್ರಗಳು ಹೇಗೆ ಇರುತ್ತವೆಯೋ, ಜೀವನದಲ್ಲಿ ಪ್ರತಿಯೊಬ್ಬರೂ ಕೂಡಾ ಅಂತಹ ವಿವಿಧ ರೀತಿಯ ಪಾತ್ರಗಳನ್ನು ಆಯ್ಕೆ ಮಾಡಿಕೊಂಡು ಬರುತ್ತಾರೆ. ಈ ವಿಷಯವು ತಿಳಿಯದೇ ಎಷ್ಟೋ ದುಃಖ ಪಡುತ್ತಾರೆ. ಈಗ ನೀವು ಹೆಂಡತಿಯಾದರೆ, ಹೆಂಡತಿಯ ಪಾತ್ರ ಪೋಷಿಸುತ್ತಿದ್ದೀರಿ, ಗಂಡನಾದರೆ ಪುರಷನಾಗಿ ಜನ್ಮವನ್ನು ತೆಗೆದುಕೊಂಡು ಗಂಡನ ಪಾತ್ರ ಪೋಷಿಸುತ್ತಿದ್ದೀರಿ. ಅಷ್ಟೇ ಹೊರತು ನಿಜವಾದ ಗಂಡನಲ್ಲ, ನಿಜವಾದ ಹೆಂಡತಿಯಲ್ಲ.

ಆದರೆ ಒಂದೊಂದು ಬಾರಿ ಈ ನಾಟಕದಲ್ಲಿ ನಟಿಸುವವರು ನೋಡುವವರಿಗೆ ಕಣ್ಣೀರನ್ನು ಸಹ ತರಿಸಬಲ್ಲರು. ಅಷ್ಟಾಗಿ ನಾಟಕದಲ್ಲಿ ಅವರ ಪಾತ್ರವನ್ನು ಅವರು ಪೋಷಿಸುತ್ತಾ ಇರುತ್ತಾರೆ. ನೀವೂ ಕೂಡಾ ನಿಮ್ಮ ಪಾತ್ರಗಳು ಇದು ನಾಟಕವೆಂದುಕೊಳ್ಳುತ್ತಾ, ಹಾಗೆಯೇ ಪೋಷಿಸಬೇಕು.

ಇವನು ನನ್ನ ಗಂಡನಲ್ಲ ಎಂದು ಸರಿಯಾಗಿ ಪೋಷಿಸದಿದ್ದರೆ ಆ ನಿರ್ದೇಶಕರು ತೆಗೆದುಬಿಡುತ್ತಾರೆ. ಆದ್ದರಿಂದ ಆ ನಾಟಕದಲ್ಲಿ ವೇದಿಕೆ ಮೇಲೆ ಆ ಪಾತ್ರಗಳೊಂದಿಗೆ ಜೀವಿಸಬೇಕು. ಹೆಂಡತಿ ಹೆಂಡತಿಯಾಗಿಯೇ ಇರಬೇಕು. ಗಂಡನು ಗಂಡನಾಗಿಯೇ ಇರಬೇಕು. ಪಾತ್ರಕ್ಕೆ ನ್ಯಾಯವನ್ನು ಒದಗಿಸಬೇಕು. ಆದ್ದರಿಂದ ಆ ರೀತಿಯಲ್ಲಿ ಯಾರ ನಾಟಕದ ಪಾತ್ರವನ್ನು ಅವರು ಪೋಷಿಸಬೇಕು. ನನ್ನ ಪಾತ್ರ ಮುಗಿದುಬಿಡುತ್ತದೆ ಎಂದು ಬಾಧೆಪಡಬೇಕಾದ ಕೆಲಸವಿಲ್ಲ. ಮತ್ತೆ ಇನ್ನೊಂದು ನಾಟಕದಲ್ಲಿ ಇನ್ನೊಂದು ಪಾತ್ರ ಬರುತ್ತದೆ.

ಹಾಗೆಯೇ ಜೀವನ ಮುಗಿದು ಬಿಡುತ್ತದೆಂದು ಅಳಬೇಕಾದ ಕೆಲಸವೇನು ಇಲ್ಲ. ಪತ್ರೀಜಿಯವರು ಹೇಳಿದ್ದಾರಲ್ಲ 'ಸತ್ತರೂ ಸಾಯುವುದಿಲ್ಲ', ಅಷ್ಟೇ ಅಲ್ಲ "ಹುಟ್ಟು ಸಂಭ್ರಮೇ, ಸಾವು ಸಂಭ್ರಮವೇ" ಎನ್ನುತ್ತಾರೆ ಹುಟ್ಟು ಸಂಭ್ರಮ ಎನ್ನುವುದು ಪ್ರತಿಯೊಬ್ಬರಿಗೂ ತಿಳಿದಿದೆ, ಸಂಭ್ರವನ್ನು ಕೂಡಾ ಆಚರಿಸುತ್ತಾರೆ ಕೂಡಾ. ಸಾವು ಹೇಗೆ ಸಂಭ್ರಮವಾಗುತ್ತದೆ? ಎಂಬುದು ಬಹಳ ಜನರಿಗೆ ಅರ್ಥವಾಗದು, ಆದರೆ ಸಾವು ಕೂಡಾ ಸಂಭ್ರಮವೇ.

ಏಕೆಂದರೆ ನೀನು ಜೀವನದಲ್ಲಿ ಕೆಲವು ಸಾಧಿಸುವುದಕ್ಕೆ ಜನಿಸಿರುವೆ. ಯಾವಾದರೆ ನೀನು ಅಂದುಕೊಂಡಿರುವೆಯೋ ಅವು ಸಾಧಿಸಿರುವೆ. ಈ ಪಾತ್ರದೊಂದಿಗೆ ನೀನು ಮಾಡಬೇಕಾದ್ದನೆಲ್ಲಾ ಮಾಡಿದೆ, ಇನ್ನೇಕೆ? ಅದರ ಕೆಲಸ ಮುಗಿಯಿತು. ಆದ್ದರಿಂದ ನೀನು


ಮತ್ತೆ ಹೊಸ ಪಾತ್ರ ತೆಗೆದುಕೊಂಡು ಮತ್ತೆ ಈ ನಾಟಕ ರಂಗದೊಳಗೆ, ಅಂದರೆ ಈ ಪ್ರಪಂಚದೊಳಗೆ ಬರುವೆ. ಅದಕ್ಕೆ ಬಾಧೆಪಡುವುದೇತಕ್ಕೆ?

ಓಹೋ ಈ ಬಾರಿ ಇನ್ನೊಂದು ವಿಭಿನ್ನ ಪಾತ್ರವನ್ನು ಹಾಕುತ್ತೇನೆಂದು ಕೊಳ್ಳಿ. ಅಷ್ಟೇ ಅಲ್ಲ ಇನ್ನು ನೀವು ಆಲೋಚಿಸಿರಿ !. ಮಾಡಬೇಕಾದದ್ದನೆಲ್ಲಾ ಮಾಡಿದ ಮೇಲೆ ವೃದ್ಧಾಪ್ಯವು ಬಂದಿತೆಂದುಕೊಳ್ಳಿ ಏನು ಮಾಡಲಾರಿರಲ್ಲಾ? ಇಂದ್ರಿಯಗಳೆಲ್ಲಾ ಶಕ್ತಿ ಕಳೆದುಕೊಳ್ಳುತ್ತವೆಯಲ್ಲ? ನಿನ್ನ ಶರೀರದಲ್ಲಿ ಇರುವ ಹಿಡಿತ ಕಡಿಮೆಯಾಗುತ್ತದೆಯಲ್ಲಾ? ಅಂತಹ ಶರೀರವನ್ನು ಇಟ್ಟುಕೊಂಡರೆ ಏನು ಮಾಡಬಲ್ಲಿರಿ?

ಇನ್ನು ಬಹಳಷ್ಟು ಜನ ಮುದುಕರನ್ನು ನೋಡಿದರೆ ಮಂಚಕ್ಕೆ ಪರಿಮಿತವಾಗುತ್ತಾರೆ. ಒಬ್ಬರ ಮೇಲೆ ಆಧಾರಪಡುತ್ತಾರೆ, ಇತರರು ಇಟ್ಟರೇನೇ ಅವರಿಗೆ ದಿನ ನಡೆಯುವ, ದಿನ ಕಳೆಯುವ ಪರಿಸ್ಥಿತಿ. ಅಂತಹ ದುರ್ಬಲವಾದ ಜೀವನವನ್ನು ಜೀವಿಸುವುದಕ್ಕಿಂತ ನಿಷ್ಕ್ರಮಿಸಿದರೆ ಮತ್ತೆ ಹೊಸ ಶರೀರ ಬರುತ್ತದೆ. ಆಗ ನೋಡಿರಿ ಎಷ್ಟು ವೈಭವವಾಗಿ ಇರುತ್ತದೋ ಆ ತಾಯಿ ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಾಳೋ! ಅವನಿಗೆ ಬೇಕಾದವುಗಳನ್ನೆಲ್ಲಾ ಒದಗಿಸುತ್ತಾಳೆ. ಕೇಳದಯೇ ಎಲ್ಲವನ್ನು ಮಾಡುತ್ತಾ ಇರುತ್ತಾಳೆ.

ಅಷ್ಟು ಶ್ರೇಷ್ಠ ಜೀವನ ಮತ್ತೆ ಬರುತ್ತಿರುವಾಗ ಇಂತಹ ಜೀವನವನ್ನು ಬಿಡುವುದಕ್ಕೆ ದುಃಖ ಪಡಬಾರದು. ಇದನ್ನು ತಿಳಿದುಕೊಂಡವನು ಇಲ್ಲಿಂದ ಹೋಗುವುದಲ್ಲ, ಇನ್ನು ಉತ್ತಮ ಜೀವನದಿಂದ ಒಳ್ಳೆಯ ಜೀವನ ಬರುತ್ತದೆಂದು ಅರ್ಥವಾದವರು ಅದನ್ನು ಸಂಭ್ರಮವಾಗಿಯೇ ಭಾವಿಸುತ್ತಾನೆ. ಅಂದರೆ ಪತ್ರೀಜಿಯವರು ಹುಟ್ಟು ಸಂಭ್ರಮವೇ ಎಂದಿದ್ದಾರೆ.

ಯಾವುದು ಏನಾದರೂ ಖಂಡಿತವಾಗಿ ಈ ಜೀವನವೆಲ್ಲಾ ಒಂದು ನಾಟಕದಂತಾದ್ದು ಎಂದು ಮರೆತು ಹೋಗಬಾರದು. ಇದು ಗೊತ್ತಿದ್ದರೆ ಎಷ್ಟೋ ರಿಲಾಕ್ಸ್ ಆಗುತ್ತಾರೆ. ಎಂತಹ ಕಷ್ಟವನ್ನಾದರೂ ಎದುರಿಸುತ್ತೀರಿ, ಯಾವುದಕ್ಕೂ ದುಃಖ ಪಡುವುದಿಲ್ಲ, ನೋವು ಪಡುವುದಿಲ್ಲ. ಇದೆಲ್ಲಾ ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ! ತಿಳಿಯುತ್ತದೆ.



## ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ?
## "ಭೂಲೋಕ ರಾತ್ರಿ, ಮೇಲಿನ ಲೋಕ ಹಗಲು ಎಂದು ತಿಳಿಯುತ್ತದೆ".

ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಳ್ಳದೇ ಭೂಮಿಯ ಮೇಲೆ ಜೀವಿಸುತ್ತಿರುವವರು ಒಂದು ರೀತಿಯಲ್ಲಿ ಹೇಳಬೇಕೆಂದರೆ ಸೃಷ್ಟಿಗೆ ಭಿನ್ನವಾಗಿ, ಅಂದರೆ ಸೃಷ್ಟಿಗೆ ವಿರುದ್ಧವಾಗಿ ಜೀವಿಸುತ್ತಿರುವಂತೆ ಲೆಕ್ಕ.

ಏಕೆಂದರೆ ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡವರಿಗೆ 'ಭೂಲೋಕ ರಾತ್ರಿ, ಮೇಲಿನ ಲೋಕ ಹಗಲು ಎಂದು ತಿಳಿಯುತ್ತದೆ'. ಇದು ಸ್ವಲ್ಪ ಅಶ್ಚರ್ಯಕರವಾಗಿಯೇ ಇರುತ್ತದೆ. ಭೂಲೋಕ ರಾತ್ರಿ ಎಂದರೇನು? ಎಂದು ಅಂದುಕೊಳ್ಳುತ್ತೇವೆ. ಏಕೆಂದರೆ ಇರುವ ವಸ್ತುವು ಕಾಣಿಸದಿದ್ದರೆ ಅದು ರಾತ್ರಿ, ಇರುವ ವಸ್ತು ಕಾಣಿಸಿದರೆ ಅದು ಹಗಲು. ಭೂಮಿಯ ಮೇಲೆ ಬೆಳಕು ಇದ್ದರೂ ಕೂಡಾ ಆತ್ಮನನ್ನು ತಿಳಿದುಕೊಳ್ಳದಿದ್ದರೆ ಅವರಿಗೆ ಅದು ರಾತ್ರಿಯೇ, ಏಕೆಂದರೆ ಆತ್ಮನಿದ್ದರೂ ಕೂಡಾ ತಿಳಿದುಕೊಳ್ಳಲಾರದೇ ಹೋಗುತ್ತಿದ್ದಾರೆಯಾದ್ದರಿಂದ ಅವರು ಕತ್ತಲಿನಲ್ಲಿದ್ದಂತೆ ಒಂದು ರೀತಿಯಲ್ಲಿ ಹೇಳಬೇಕೆಂದರೆ ಭೂಮಿಯ ಮೇಲೆ ಎಲ್ಲಾ ರಾತ್ರಿಯಲ್ಲಿದ್ದಂತೆ.

ಶರೀರದಲ್ಲಿರುವ ಆತ್ಮನನ್ನು ಹೇಗೆ ನೋಡುತ್ತೇವೆ? ಎಂದು ನೀವು ಕೇಳಬಹುದು. ಶರೀರದಲ್ಲಿರುವ ಆತ್ಮವನ್ನು ನೀವು ನೋಡಲಾರದೆ ಹೋದರೂ ಮಾನವರು ಮರಣಿಸಿದಾಗ ಶರೀರದಿಂದ ಆತ್ಮ ಹೊರಗೆ ಬರುತ್ತದೆ, ಆದರೆ ಕಾಣಿಸದು. ಆ ಆತ್ಮನನ್ನು ಕರೆದುಕೊಂಡು ಹೋಗುವುದಕ್ಕೆ ಮೇಲಿನ ಲೋಕಗಳಿಂದ ಸಹಾಯಕರು ಬರುತ್ತಾರೆ, ಅವರು ಕಾಣಿಸರು, ಅವರ ಸಂಭಾಷಣೆಯೂ ಕೇಳಿಸದು.

ನಿಮ್ಮ ಪಕ್ಕದಲ್ಲೇ ಅವರಿದ್ದರೂ ನಿಮಗೆ ತಿಳಿಯದು. ಮತ್ತೆ ಇದ್ದರೆ ಏಕೆ ನೋಡಲಾರಿರಿ? ಅಂದರೆ ಕತ್ತಲೆಯಾದ್ದರಿಂದ, ಹಾಗೆಯೇ ಪತ್ರೀಜಿಯವರು ಹೇಳುತ್ತಾ ಇರುತ್ತಾರೆ, ರಾತ್ರಿಯಾದರೆ ಗಾಢ ನಿದ್ರೆಯೊಳಗೆ ಹೋಗುತ್ತಾರೋ ಅವರ ಶರೀರದಿಂದ ಆತ್ಮ ಹೊರಗೆಬಂದು ಸಂಚರಿಸುವುದು, ಮತ್ತೆ ಶರೀರದೊಳಗೆ ಪ್ರವೇಶಿಸುವುದು ನಡೆಯುತ್ತದೆಯೆಂದು, ಹಾಗೆ ಆತ್ಮಗಳು ಪ್ರತಿದಿನ ಹೊರಗೆ ಬರುತ್ತಲೇ ಇರುತ್ತವೆ,

ಬಯಕೆಗಳು/ದಾಹವು ತೀರುತ್ತಾ ಇರುತ್ತವೆ ಎನ್ನುತ್ತಾರೆ. ರಾತ್ರಿ ಎಚ್ಚರದಿಂದ ಇರುವವರೂ ಕೂಡಾ ಇದ್ದಾರೆ, ಅವರಿಗೆ ಯಾರಿಗಾದರೂ ಕಾಣಿಸುತ್ತವೆ ಅಂದರೆ? ಇಲ್ಲವಲ್ಲ?.

ಹಾಗೆಯೇ ಮೇಲಿನ ಲೋಕಗಳಿಗೆ ಇವರು ಸೇರಿಕೊಂಡಾಗ ಅಲ್ಲಿ ಎಷ್ಟೋ ಜನ ಇರುತ್ತಾರೆ. ಮರಣಿಸಿದ ನಂತರ ಮೇಲಿನ ಲೋಕಗಳಿಗೆ ಹೋದರೆ ಆಗ ಆ ಲೋಕಗಳು ಕಾಣಿಸುತ್ತವೆ, ಆ ಲೋಕಗಳಲ್ಲಿ ಏನಿರುತ್ತದೆಯೋ ಕಾಣಿಸುತ್ತವೆ, ಯಾರಿದ್ದಾರೋ ಕಾಣಿಸುತ್ತಾರೆ, ಆದರೆ ಅಂತಹವು ಯಾವುವು ಭೂಮಿಯ ಮೇಲೆ ಕಾಣಿಸವು. ಆದ್ದರಿಂದ ಭೂಲೋಕವು ರಾತ್ರಿ, ಮೇಲಿನ ಲೋಕಗಳಲ್ಲಿ ಇವೆಲ್ಲಾ ತಿಳಿಯುತ್ತವೆಯಾದ್ದರಿಂದ ಅವು ಹಗಲಿನಂತೆ ಲೆಕ್ಕ.

ನಾವೆಲ್ಲಾ ಬೆಳಕಿನಲ್ಲಿ ಜೀವಿಸುತ್ತಿದ್ದೇವೆಂದು ಕೊಳ್ಳುತ್ತೇವೆ. ಆದರೆ ಯಾವಾಗಾದರೆ ನಾನು ಆತ್ಮ ಎಂಬ ತಿಳುವಳಿಕೆ ಬರುತ್ತದೋ ಆಗ ತಿಳಿಯುತ್ತದೆ ಇಲ್ಲಿಯವರೆಗೆ ಕತ್ತಲಲ್ಲಿಯೇ ಇದ್ದೆವೆಂದು, ಅಷ್ಟೇ ಅಲ್ಲ ಮೂರನೇ ಕಣ್ಣು ತೆರೆದುಕೊಂಡಾಗ ಅವರು ಆತ್ಮನನ್ನು ತಿಳಿದುಕೊಳ್ಳಬಲ್ಲವರಾಗುತ್ತಾರೆ. ಆದ್ದರಿಂದ ಅವರಿಗೆ ಭೂಮಿಯ ಮೇಲೆ ಕೂಡಾ ಹಗಲಿನಂತೇ ಇರುತ್ತದೆ.

ಮರಣಿಸಿದ ನಂತರ ನಡೆಯುವುದನ್ನು ತಿಳಿದುಕೊಂಡರೆ ಎಲ್ಲಾ ವಿರುದ್ಧವಾಗಿಯೇ ಅರ್ಥವಾಗುತ್ತದೆ. ಏಕೆಂದರೆ ಏನೂ ಕಾಣಿಸದಿರುವುದರಿಂದ, ಇವು ಯಾವುವು ತಿಳಿದಿರುವುದರಿಂದ ಭೂಮಿಯ ಮೇಲೆ ಕಾಣಿಸುವಂತವೇ ನಿಜವೆಂದುಕೊಳ್ಳುತ್ತಾ, ಅವುಗಳಿಗೇ ಪ್ರಾಮುಖ್ಯತೆಯನ್ನು ಕೊಡುತ್ತಾ ಅವುಗಳಿಗಾಗಿ ಮಾಡಬಾರದ ಕೆಲಸಗಳನ್ನು ಮಾಡುತ್ತಾ, ಅವೇ ಶಾಶ್ವತವೆಂದುಕೊಳ್ಳುತ್ತಾ ಜೀವಿಸುತ್ತಿದ್ದಾರೆ. ಹಾಗೆ ಜೀವಿಸುವ ಜೀವನವೆಲ್ಲಾ ಕತ್ತಲಿನ ಜೀವನವೇ.

ಈ ಸೃಷ್ಟಿಯಲ್ಲಿ ಕಾಣಿಸದವುಗಳನ್ನು ತಿಳಿದುಕೊಳ್ಳಬೇಕೆಂದರೆ ಈ ಭೌತಿಕವಾದ ಕಣ್ಣುಗಳಿಗೆ ಆ ಶಕ್ತಿ ಇಲ್ಲ. ಆದ್ದರಿಂದ ಅವುಗಳನ್ನೆಲ್ಲಾ ತಿಳಿದುಕೊಳ್ಳಬೇಕೆಂದರೆ ತೀವ್ರ ಸಾಧನೆ ಮಾಡಿ, ದಿವ್ಯ ನೇತ್ರವನ್ನು ಅಂದರೆ ಮೂರನೇ ಕಣ್ಣನ್ನು ಸಂಪಾದಿಸಿಕೊಳ್ಳಬೇಕು, ಇಲ್ಲಾ ಶರೀರವನ್ನು ಬಿಡಬೇಕು, ಇಲ್ಲ ಜ್ಞಾನವಾದರೂ ಸಂಪಾದಿಸಿಕೊಳ್ಳಬೇಕು. ಇಲ್ಲವೆಂದರೆ ಬುದ್ಧಿಯನ್ನಾಗಲಿ ಚೆನ್ನಾಗಿ ವಿಕಸನಪಡಿಸಿಕೊಳ್ಳಬೇಕು. ಏನೂ ಇಲ್ಲದಿದ್ದರೆ ಏನು ಅರ್ಥವಾಗದು. ಜೀವನದಲ್ಲಿ ಬದಲಾವಣೆ ಬರದು.

ನನ್ನ ಮಟ್ಟಿಗೆ ನಾನು ವ್ಯಾಪಾರವನ್ನು ಮಾಡಿ ಚೆನ್ನಾಗಿ ಹಣವನ್ನು ಸಂಪಾದಿಸುತ್ತಾ ಏನೋ ದೊಡ್ಡ ಕೆಲಸಗಳನ್ನು ಮಾಡುತ್ತಿದ್ದೇನೆಂದು ಭಾವಿಸುತ್ತಿದ್ದೆನು.

ಪತ್ರೀಜಿಯವರ ಪರಿಚಯವಾದ ಮೇಲೆ ನೀನು ಆತ್ಮವಯ್ಯಾ ಎಂದು ಹೇಳಿದರು. ಬಹಳಷ್ಟು ಜನ ಈ ಮಾತನ್ನು ಹೇಳಿದರೂ ಹಿಡಿಸಿಕೊಳ್ಳುವುದಿಲ್ಲ. ನಂಬುವುದಿಲ್ಲ ತೋರಿಸು ಎನ್ನುತ್ತಾರೆ.

ಆದರೆ, ನಾನು ಅಷ್ಟು ಸುಲಭವಾಗಿ ಬಿಡಲಿಲ್ಲ, ಎಲ್ಲಾ ಅಧ್ಯಯನ ಮಾಡಿದೆ. ಉಪನಿಷತ್ತುಗಳನ್ನು, ಭಗವದ್ಗೀತೆಯನ್ನು, ಪುರಾಣಗಳನ್ನು, ಇನ್ನೂ ಕೆಲವರು ಶ್ರೇಷ್ಠರ, ಯೋಗೀಶ್ವರರ ಗ್ರಂಥಗಳನ್ನು ಅಧ್ಯಯನ ಮಾಡಿದ ನಂತರ ಪತ್ರೀಜಿಯವರು ಹೇಳಿದ್ದು ಸತ್ಯವು ಎನ್ನುವುದು ಅರ್ಥವಾಯಿತು. ನ್ಯಾಯವಾಗಿ ಅಲ್ಲಿಯವರೆಗೆ ಧ್ಯಾನವನ್ನು ಕೂಡಾ ಮಾಡಿಲ್ಲ, ಆದರೆ ಬುದ್ಧಿ ಕೆಲಸ ಮಾಡಿತು. ಪತ್ರೀಜಿಯವರು ಹೇಳಿದವುಗಳನ್ನೆಲ್ಲಾ ಚೆನ್ನಾಗಿ ಅರ್ಥ ಮಾಡಿಕೊಂಡೆನು, ಬೇಗನೆ ನನ್ನ ಜೀವನವು ಬದಲಾಗಿ ಹೋಯಿತು.

ಅಲ್ಲಿಯವರೆಗೆ ದೇಹಕ್ಕಾಗಿ ಧನವನ್ನು ಸಂಪಾದಿಸಿದೆನು. ಇದು ತಿಳಿದ ತಕ್ಷಣ ಧನ ಸಂಪಾದನೆ ನಿಲ್ಲಿಸಿ, ಜ್ಞಾನ ಸಂಪಾದನೆಯನ್ನು ಪ್ರಾರಂಭಿಸಿದೆನು. ಆತ್ಮಕ್ಕೆ ಲಾಭವನ್ನುಂಟು ಮಾಡುವ ಕೆಲಸಗಳನ್ನು ಮಾಡಲು ಆರಂಭಿಸಿದೆನು, ದೇಹಕ್ಕೆ ಪ್ರಾಮುಖ್ಯತೆ ಕೊಡುವುದನ್ನು ಬಿಟ್ಟೆನು, ಪದವಿಗಳನ್ನು ಬಿಟ್ಟೆನು, ಸ್ನೇಹಿತರನ್ನು ಪಕ್ಕಕ್ಕೆ ಇಟ್ಟೆನು. ಕುಟುಂಬದ ಸದಸ್ಯರನ್ನು ಹೊರಗೆ ಕಳುಹಿಸಿಬಿಟ್ಟೆನು.

ಅಲ್ಲಿಯವರೆಗೆ ದೇಹ ಸೇವೆಗಳನ್ನು ಮಾಡುತ್ತಿದ್ದೆವು, ಹೋಮಿಯೋಪತಿ ಹಾಸ್ಪಿಟಲ್ ನಡೆಸುತಿದ್ದೆನು, ಅದನ್ನು ಮುಚ್ಚಿ ಬಿಟ್ಟೆನು, ನಮ್ಮ ಮೇಡಂ 200 ಮಂದಿ ಮಹಿಳೆಯರಿಗೆ ಉಚಿತವಾಗಿ ಕೈ ಕೆಲಸಗಳನ್ನು ಕಲಿಸುತ್ತಿದ್ದರು, ಅದನ್ನು ನಿಲ್ಲಿಸಿದೆವು. ನಮ್ಮಿಬ್ಬರಿಗೆ ಅರ್ಥವಾಯಿತು ನಾವು ದೇಹಗಳಲ್ಲ, ಆತ್ಮಗಳೆಂದು. ಈ ಸೇವೆಗಳೆಲ್ಲಾ ದೇಹಕ್ಕೆ ಲಾಭಿಸುತ್ತವೆ ಹೊರತು ಆತ್ಮಕ್ಕೆ ಲಾಭಿಸವು ಎಂದು. ಅದಕ್ಕೆ ನಮ್ಮ ಸಮಯವನ್ನು, ನಮಗಿರುವ ಸಂಪನ್ಮೂಲಗಳನ್ನು ಮಾತನ್ನು ಶಕ್ತಿಯನ್ನು ಆತ್ಮಕ್ಕಾಗಿಯೇ ವಿನಿಯೋಗಿಸಲು ಪ್ರಾರಂಭಿಸಿದೆವು. ಇಷ್ಟು ಬದಲಾವಣೆ ಏಕೆ ಬಂದಿತು? ಬುದ್ಧಿ ಚೆನ್ನಾಗಿ ಕೆಲಸ ಮಾಡಿದ್ದರಿಂದಲೇ.


ನೀವು ಬುದ್ಧಿ ಉಪಯೋಗಿಸಿ ಆ ಮಹನೀಯರ ಸಂದೇಶಗಳನ್ನು ಕೇಳುತ್ತಿದ್ದರೆ ಅವುಗಳಿಂದ ಎಷ್ಟೋ ಗ್ರಹಿಸುತ್ತೀರಿ. ಅದಕ್ಕೆ ಪತ್ರೀಜಿಯವರು ಸಾದನೆಯಲ್ಲ, ಸ್ವಾಧ್ಯಾಯ, ಸಾಂಗತ್ಯ ಎರಡು ಇರಬೇಕು ಎನ್ನುತ್ತಾರೆ. ಅವರು ಏನು ಹೇಳಿದ್ದಾರೆಂದರೆ? ನಾನು ಐದು ಜನ್ಮಗಳಿಂದ ಜ್ಞಾನ ಹೊಂದಿದ್ದೇನೆ (ಎನ್‌ಲೈಟನ್) ಎಷ್ಟೋ ತಿಳಿದುಕೊಂಡು, ಎಷ್ಟೋ ಪುಸ್ತಕಗಳನ್ನು ಬರೆದಿದ್ದೇನೆ ಎಂದರು.

ಅವರ ಉದ್ದೇಶ ಈ ಸೃಷ್ಟಿಯಲ್ಲಿರುವ ಜ್ಞಾನ ಅನಂತ. ಶಿವನೇ ಇನ್ನೂ ಧ್ಯಾನ ಮಾಡುತ್ತಿದ್ದರೆ, ನಾವೇನೂ ದೊಡ್ಡವರಾಗಿ ಬಿಟ್ಟವರಂತೆ, ಎಲ್ಲಾ ತಿಳಿದಂತೆ ಭಾವಿಸಿದರೆ ಹೇಗೆ? ಹಾಗೆ ಅನಂತವಾಗಿ ತಿಳಿಯುತ್ತಲೇ ಇರಬೇಕು ಎಂದರು.

ಆದ್ದರಿಂದ ತಿಳಿದುಕೊಳ್ಳಿ ಮೇಲೆ ಹೋದ ಮೇಲೆ ತಿಳಿಯುತ್ತದೆ. ಏನಿದು ಭೂಮಿಯ ಮೇಲಿರುವಾಗ ಏನೂ ಕಾಣಿಸಲಿಲ್ಲ? ಎಷ್ಟು ಲೋಕಗಳಿವೆ? ಇಷ್ಟು ಲೋಕಗಳಲ್ಲಿ ಇಷ್ಟು ಜನರಿದ್ದಾರಾ? ಇಷ್ಟು ರೀತಿಯವರಿದ್ದಾರಾ? ಎಂದು ಆಶ್ಚರ್ಯಪಡುತ್ತಾರೆ. ಕತ್ತಲಿನಲ್ಲಿ ಹೇಗೆ ಕಾಣಿಸುತ್ತಾರೆ? ಕಾಣಿಸರು. ಅಜ್ಞಾನಿ ಇವೇನನ್ನು ತಿಳಿದುಕೊಳ್ಳಲಿಲ್ಲ, ತಿಳಿಯುವುದಿಲ್ಲ ಕೂಡಾ. ಅದೇ ಜ್ಞಾನಿಯಾದರೆ ಇವನ್ನೆಲ್ಲಾ ತಿಳಿದುಕೊಳ್ಳುತ್ತಾನೆ. ಅದಕ್ಕೆ ಜ್ಞಾನವನ್ನು ಬೆಳಕಿನೊಂದಿಗೆ ಹೋಲಿಸುತ್ತಾರೆ, ಅಜ್ಞಾನವನ್ನು ಕತ್ತಲಿನೊಂದಿಗೆ ಹೋಲಿಸುತ್ತಾರೆ.

ಜ್ಞಾನ ಸಂಪಾದಿಸಿಕೊಳ್ಳಿ, ಜ್ಞಾನವು ಬಹಳ ಬಹಳ ಮುಖ್ಯವೆಂದು ಹೇಳುತ್ತಿದ್ದಾರೆ ಬಹಳ ಜನರಿಗೆ ಹತ್ತುವುದಿಲ್ಲ. ಏನು ಮಾಡಬೇಕು? ಜ್ಞಾನವನ್ನು? ಎನ್ನುತ್ತಾರೆ. ಆದರೆ ಆತ್ಮ ಜ್ಞಾನಿ ಮರಣಿಸುವ ಮೊದಲೇ ಮರಣಿಸುತ್ತಾನೆ ಅಂದರೆ ಮರಣಿಸಿದ ನಂತರ ನಡೆಯುವುದೆಲ್ಲಾ ತಿಳಿದುಕೊಳ್ಳುತ್ತಾನೆ.

ಇದ್ದರೂ ಕಾಣಿಸದಿದ್ದರೆ ಅದು ರಾತ್ರಿಯೇ, ಕಾಣಿಸಿದರೆ ಅದು ಹಗಲು. ಆದ್ದರಿಂದ ಭೂಲೋಕ ರಾತ್ರಿ, ಮೇಲಿನ ಲೋಕ ಹಗಲು ಎಂದು ಮರಣಿಸುವ ಮೊದಲೇ ಮರಣಿಸಿದವರಿಗೆ ತಿಳಿಯುತ್ತದೆ.



# "ಧ್ಯಾನ ಮಾಡುವ ವಿಧಾನ"

**ಯಾವುದಾದರೂ ಸುಖಾಸನದಲ್ಲಿ .. ಹಾಯಾಗಿ ಕುಳಿತುಕೊಂಡು ..**
**ಕೈಗಳೆರಡೂ ಸೇರಿಸಿಕೊಂಡು .. ಕಣ್ಣೆರೆಡೂ ಮುಚ್ಚಿಕೊಂಡು ..**
**ಪ್ರಕೃತಿ ಸಹಜವಾಗಿ ನಡೆಯುತ್ತಲಿರುವ ಉಚ್ಛ್ವಾಸ, ನಿಶ್ವಾಸಗಳನ್ನೇ ..**
**ಏಕಧಾರೆಯಾಗಿ .. ಗಮನಿಸುತ್ತಾ ಇರಬೇಕು!**

**ಧ್ಯಾನವನ್ನು ಯಾರಾದರೂ ಮಾಡಬಹುದು**
**ಯಾವ ವಯಸ್ಸಿನವರಾದರೂ ಮಾಡಬಹುದು**
**ಯಾವ ಸಮಯದಲ್ಲಿಯಾದರೂ ಮಾಡಬಹುದು**
**ಯಾವ ಸ್ಥಳದಲ್ಲಿಯಾದರೂ ಮಾಡಬಹುದು.**

ಧ್ಯಾನವನ್ನು ನಿಯಮಿತವಾಗಿ ತಪ್ಪದೇ ಮಾಡಬೇಕು....
ಅವರವರ ವಯಸ್ಸಿಗೆ ಅನುಗುಣವಾಗಿ ಪ್ರತಿಯೊಬ್ಬರೂ, ಪ್ರತಿನಿತ್ಯವೂ ಧ್ಯಾನ ಮಾಡಬೇಕು
ಉದಾಹರಣೆಗೆ, ನಿಮ್ಮ ವಯಸ್ಸು ಇಪ್ಪತ್ತು ವರ್ಷಗಳಾಗಿದ್ದರೆ, ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಬೇಕು.
ನಿಮ್ಮ ವಯಸ್ಸು ನಲವತ್ತು ವರ್ಷಗಳಾಗಿದ್ದರೆ ನಲವತ್ತು ನಿಮಿಷಗಳ ಕಾಲ
ಹೀಗೆ ವಯಸ್ಸಿಗೆ ಅನುಗುಣವಾಗಿ ಧ್ಯಾನ ಮಾಡಬೇಕು.

**ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಚಂದಾದಾರರಾಗಲು ಬ್ಯಾಂಕ್ ಖಾತೆಗೆ ಹಣ ಪಾವತಿಸಿ ಚಂದಾದಾರರಾಗಬಹುದು**

| | | |
|---|---|---|
| **ಬ್ಯಾಂಕ್ ಹೆಸರು** | **: ಭಾರತೀಯ ಸ್ಟೇಟ್ ಬ್ಯಾಂಕ್** | **– State Bank of India** |
| **ಶಾಖೆಯ ಹೆಸರು** | **: ಚಾಮರಾಜಪೇಟೆ ಶಾಖೆ** | **– Chamarajapete Branch** |
| **ಖಾತೆ ಸಂಖ್ಯೆ** | **: 30828057680 : I.F.S.C. ಕೋಡ್** | **– S.B.I.N 0005794** |
| **ಖಾತೆಯ ಹೆಸರು** | **: ಕೆ.ಪಿ.ಡಿ.ಪಿ. ಟ್ರಸ್ಟ್–ಅಕೌಂಟ್–ಧ್ಯಾನ ಕಸ್ತೂರಿ** | **– K.P.D.P. Trust A/c. Dhayana Kasturi** |

ಧ್ಯಾನ ಕಸ್ತೂರಿ ಮಾಸ ಪತ್ರಿಕೆಗೆ ಆನ್‌ಲೈನ್‌ನಲ್ಲಿಯೇ ಚಂದಾದಾರರಾಗಬಹುದು.
ಕನ್ನಡ ಆಧ್ಯಾತ್ಮಿಕ ಪುಸ್ತಕಗಳನ್ನು ಆನ್‌ಲೈನ್‌ನಲ್ಲಿಯೇ ಖರೀದಿಸಬಹುದು. ಇದಕ್ಕಾಗಿ
ನಿಮ್ಮ ಮೊಬೈಲ್ ಬಳಸಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ,
ನಂತರ ಕಾಣಿಸಿಕೊಳ್ಳುವ ಲಿಂಕ್ ಅನ್ನು ಕ್ಲಿಕ್ ಮಾಡಿ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
**ಕರ್ನಾಟಕ ಪಿರಮಿಡ್ ಧ್ಯಾನ ಪ್ರಚಾರ ಟ್ರಸ್ಟ್ (ರಿ)**
# 1534/1, ಒಂದನೇ ಮಹಡಿ 26ನೇ ಮುಖ್ಯರಸ್ತೆ, ರಾಗಿಗುಡ್ಡ ಆಂಜನೇಯ ದೇವಸ್ಥಾನದ ಹತ್ತಿರ
9ನೇ ಬ್ಲಾಕ್, ಜಯನಗರ, ಬೆಂಗಳೂರು – 560 069
**ವಾಟ್ಸಾಪ್ ಅಥವಾ ಕರೆಮಾಡಿ : 9448883872; 9901598073**



ಮರಣದ ನಂತರ ನಡೆಯುವುದನ್ನು ತಿಳಿದುಕೊಂಡರೆ ಆಗುವ ಲಾಭಗಳು:

- ನಾನು ಸಾಯುವುದಿಲ್ಲ, ನನಗೆ ಸಾವಿಲ್ಲ ಎಂಬುದು ಸ್ಪಷ್ಟವಾಗಿ ಅರ್ಥವಾಗುತ್ತದೆ.
- 'ತಾನು ದೇಹವಲ್ಲ, ಆತ್ಮ ಎಂದು ತಿಳಿಯುತ್ತದೆ'.
- 'ಸಮಯವನ್ನು ಪೂರ್ತಿಯಾಗಿ ಆತ್ಮ ಲಾಭಕ್ಕಾಗಿ ಉಪಯೋಗಿಸುತ್ತಾರೆ'.
- 'ಭೂಮಿಯ ಮೇಲೆ ಈ ಜೀವನ ಸ್ವಲ್ಪ ಎಂಬುದು ಅರ್ಥವಾಗುತ್ತದೆ'
- 'ತಾನು ಮಾಡಿದ ಕರ್ಮಗಳನ್ನಾಧರಿಸಿ ತಾನು ಹೋಗುವ ಲೋಕಗಳು ಇರುತ್ತವೆ ಎಂದು ತಿಳಿಯುತ್ತದೆ'.
- 'ದೇಹಕ್ಕಾಗಿ ಮಾಡುವ ಖರ್ಚುಗಳು ವ್ಯರ್ಥವೆಂದು ತಿಳಿಯುತ್ತದೆ'.
- 'ತಾನು ಸಂಪಾದಿಸಿಕೊಂಡವು ಯಾವುವು ಮರಣಿಸಿದ ನಂತರ ತನ್ನ ಹಿಂದೆ ಬರುವುದಿಲ್ಲವೆಂದು ತಿಳಿಯುತ್ತದೆ'.
- 'ನೀವು ಸಂಪಾದಿಸಿಕೊಂಡ ಜ್ಞಾನವೇ ನಿಮಗೆ ಲಾಭಿಸುತ್ತದೆಂದು ತಿಳಿಯುತ್ತದೆ'.
- 'ಮರಣಿಸಿದ ನಂತರ ಮಾಡುವ ಕರ್ಮಕಾಂಡಗಳಿಂದ ಪ್ರಯೋಜನವಿಲ್ಲ ಎಂದು ತಿಳಿಯುತ್ತದೆ'.
- 'ನಿಮ್ಮ ಜೀವನ ಪ್ರಣಾಳಿಕೆ ಏನೆಂದು ತಿಳಿಯುತ್ತದೆ'.
- 'ದೇಹ ಬಂಧುಗಳಿಗಿಂತ ಆತ್ಮ ಬಂಧುಗಳೊಂದಿಗೆ ಕಳೆಯುವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಾರೆ'.
- 'ಈ ಜೀವನ ಒಂದು ಕನಸಿನಂತಾದ್ದು' ಎಂದು ತಿಳಿಯುತ್ತದೆ.
- 'ಈ ಪ್ರಪಂಚವೆಲ್ಲಾ ಒಂದು ನಾಟಕ ರಂಗ'ವೆಂದು ಅರ್ಥವಾಗುತ್ತದೆ.

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವು

ರೂ 80/-




ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂದರ್ಶಿಸಿ

https: //www.youtube.com/pmckannada • www.meditationeverywhere.org • www.pssmovement.org

ಶ್ರೀರಾಮ ಪಬ್ಲಿಕೇಶನ್ಸ್

ಶ್ರೀರಾಮಧಾಮ ಧ್ಯಾನಕೇಂದ್ರ,

ನಾರಾಯಣಪ್ಪ ಗಾರ್ಡನ್, ವೈಟ್ ಫೀಲ್ಡ್, ಬೆಂಗಳೂರು - ೫೬೦ ೦೬೬

ಸಂಪರ್ಕಿಸಿ : ಹೆಚ್.ಎನ್. ಶ್ರೀನಿವಾಸ / 9449695503

ವಿಜಯಲಕ್ಷ್ಮಿ ಎಸ್.ಎನ್ / 8050082689